
ಬೆಲೆ-10.00 ಫೆಬ್ರವರಿ -2007


ಕಲ್ಯಾಣ ಕಿರಣ





ಶರಣ ಮೇಳ ಉದ್ಘಾಟನೆ ಬಾಗಲಕೋಟೆ ಸಂಸತ್ ಸದಸ್ಯರಾದ

ಶರಣ ಪಿ.ಸಿ.ಗದ್ದಿಗೌಡರಿಂದ



ತೋಟಗಾರಿಕೆ ಸಚಿವರಾದ ಶಶಿಕಾಂತ ಅಕ್ಕಪ್ಪ ನಾಯಕ್ ಅವರಿಂದ

20ನೆಯ ರಾ.ಬಸವ ದಳ ಅಧಿವೇಶನ ಉದ್ಘಾಟನೆ ದಿ.12-1-2007

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||

866666

ಸಂಪುಟ-36 ಬಸವ ಶಕೆ-873 ಆಜೀವ ಸದಸ್ಯತ್ವ 600 ರೂ.
ಸಂಚಿಕೆ-9 ಫೆಬ್ರವರಿ-2007 ವಾರ್ಷಿಕ ಚಂದಾ 60/- ರೂ.

ಯೋಗಿರಾಜ ಪೊರೆಯಯ್ಯ

ಗುರು ಶಿವನೆ ನಾ ನಿನ್ನ ಅನುದಿನವು ನೆನೆಯುವೆನು
ಪೊರೆಯಯ್ಯ ಮಹಾಯೋಗಿ ಮಂತ್ರ ಪುರುಷ || ಪಲ್ಲವಿ ||

ಅಂತರಾತ್ಮದಿ ದಿಟ್ಟಿ ಅನವರತ ನೀನಿಟ್ಟು
ಅನಿಮಿಷ ನೇತ್ರನು ಆಗಿ ನೀ ಮೆರೆದೆ.
ಯೋಗಿಗಳ ಸ್ಫೂರ್ತಿಯು ಆಗಿ ನೀನಿಹೆಯಯ್ಯ । ಈ
ಜಗದ ಪ್ರಪ್ರಥಮ ಯೋಗಿರಾಜ || 1 ||

ಧಿಮಿತಕಿಟ ಧಿಮಿತಕಿಟ ಹೆಜ್ಜೆಯಂ ಹಾಕುತ್ತಾ
ತಾಳ ಮದ್ದಳೆ ಸಹಿತ ನೀನು ಕುಣಿದೆ
ನಾಟ್ಯ ಶಾಸ್ತ್ರವ ಜಗಕೆ ನೀನಿತ್ತು ಮೆರೆದೆ
ನಟರಾಜ ನೀನೆಂಬ ಖ್ಯಾತಿ ಪಡೆದೆ || 2 ||

ಗಾನ ಗಂಗೆಯ ಹರಿಸಿ ನಾದಯೋಗಿಯು ಆದೆ
ಕಾಮನಂ ನೀನುರುಹಿ ವಿರಾಗಿಯಾದೆ ||
ಭಸಿತ- ರುದ್ರಾಕ್ಷಿಗಳೆ ಆಭರಣವಾಗಿರಲು
ಸರಳ ವ್ರತ ಧರಿಸಿರುವ ಮಹತ್ಯಾಗಿಯಾದೆ || 3 ||

ಶರಣು ಬಂದವರಿಗೆ ಅಭಯ ಹಸವ ನೀಡಿ
ಮೂಲಿಗನು ನೀನಾದೆ ಶಿವಭಕ್ತಿ ಪಥಕೆ
ನೀನು ತಪಗೈಯ್ದ ದಿನ ಶಿವರಾತ್ರಿಯಾಯಿತು
ಬನ್ನಗಳ ತಾ ತೊಡೆದು ಭವಬಾಧೆ ಹರಿಯಿತ್ತು. || 4 ||

-ಮಾತಾಜಿ

ಅಲ್ಲಮ ಪ್ರಭು ಗಿರಿಯಲ್ಲಿ ಮಾರ್ಚ್ 18,19,20ರಂದು

ಎರಡನೆಯ ಲಿಂಗಾಯತ ಗಣ ಮೇಳ

ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರ ಜಿಲ್ಲೆಯ ಹಾತ್ ಕಣಂಗಲೆ ತಾಲ್ಲೋಕಿನ ಅಲ್ಲಮ ಪ್ರಭು ಗಿರಿ (ಡೋಂಗರ್)ದಲ್ಲಿ 2007ರ ಮಾರ್ಚ್ 18,19,20ರಂದು ಎರಡನೆಯ ಲಿಂಗಾಯತ ಗಣ ಮೇಳವು ನಡೆಯಲಿದೆ. ಮೀರಜ್ - ಕೊಲ್ಹಾಪುರ ಹೆದ್ದಾರಿಯ ಮೇಲೆ ಪ್ರವೇಶದ್ವಾರ ಇದ್ದು, ಮೊದಲು ರಾಮಲಿಂಗ ಗುಡಿ ನಂತರ ಅಲ್ಲಮ ಪ್ರಭು ದಿವ್ಯಾಲಯ, ಬಸವ ಧರ್ಮ ಪೀಠದ ಜಗದ್ಗುರು ಅಲ್ಲಮ ಪ್ರಭು ಮಠ ಇರುವುದು. ಇಲ್ಲಿಯೇ ಕಾರ್ಯಕ್ರಮವು ನಡೆಯಲಿರುವುದು.

ಎಲ್ಲರಿಗೂ ಆದರದ ಸುಸ್ವಾಗತ

★ ಶರಣರ ಬರುವೆಮಗೆ ಪ್ರಾಣ ಜೀವಾಳ ★

★ ಕಲ್ಯಾಣ ಕಿರಣ ★

ಸಂಪುಟ 36 | ಬಸವ ಶಕೆ 873 | ಆಜೀವ ಸದಸ್ಯತ್ವ 600ರೂ
ಸಂಚಿಕೆ 9 | ಫೆಬ್ರವರಿ- 2007 | ವಾರ್ಷಿಕ ಚಂದಾ 60/- ರೂ.

ಮುಖ ಪುಟ: ಪೀಠಾರೋಹಣ ಮಾಡಿದ
ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು

ಮಾರ್ಚ ತಿಂಗಳಲ್ಲಿ ಬರುವ ಉತ್ಸವಗಳು

1. ಕಲ್ಯಾಣ ಕ್ರಾಂತಿ ಪೌರ್ಣಿಮೆ	-	ಮಾರ್ಚ 3
2. ಪೂಜ್ಯ ಮಾತಾಜಿಯವರ 62ನೆಯ ವರ್ಧಂತಿ	-	ಮಾರ್ಚ 13
3. ಅಲ್ಲಮ ಗಿರಿಯಲ್ಲಿ ಲಿಂಗಾಯತ ಗಣಮೇಳ	-	ಮಾರ್ಚ 18,19,20
4. ಅಲ್ಲಮ ಪ್ರಭು ಜಯಂತಿ, ಯುಗಾದಿ	-	ಮಾರ್ಚ 19

KALYANA KIRANA-Reg No.19988/70. Monthly Magazine Edited And Published by Pujya Mate Kasturidevi on behalf of Vishwakalyana Mission Charitable Trust, Basava Mantapa, at Padma Shri Printers, Rajaji Nagara, 2nd Block, Bangalore-560010

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ
ವಿಳಾಸಕ್ಕೆ ಬರೆಯಿರಿ:
ದೂರವಾಣಿ : 23325335/23131476

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿನಗರ, ಬೆಂಗಳೂರು-560010

ಸಂಪಾದಕೀಯ: ಸಾಂಸ್ಥಿಕ ಮನೋಭಾವ / ಸಮಷ್ಟಿ ಪ್ರಜ್ಞೆ

ಇಸ್ಲಾಂ ಧರ್ಮ ಮತ್ತು ಸಮಾಜಗಳ ಕೇಂದ್ರ ಶಕ್ತಿ ನಮಾಜ್ ಮತ್ತು ಹಜ್ ಯಾತ್ರೆ. ಪ್ರತಿ ನಿತ್ಯ ಮಾಡುವ ನಮಾಜ್, ವರ್ಷದಲ್ಲಿ ಒಮ್ಮೆ ಸ್ಥಳೀಯರೆಲ್ಲರೂ ಒಂದು ಕಡೆ ಬಂದು ಮಾಡುವ ಈದ್ ಮಿಲಾದ್‌ನ ಪ್ರಾರ್ಥನೆ ಮತ್ತು ಇಫ್ತಿಯಾರ್- ಭೋಜನ ಕೂಟ; ಮೆಕ್ಕಾದಲ್ಲಿ ಜಗತ್ತಿನ ಮುಸಲೀಮರೆಲ್ಲರೂ ಸಮಾವೇಶವಾಗಿ ಮಾಡುವ ಹಜ್ ಯಾತ್ರೆ ನಿಜಕ್ಕೂ ಅದ್ಭುತ ಪರಿಕಲ್ಪನೆ. ಅಪ್ಪ ಬಸವಣ್ಣನವರ ಕಾಲದಲ್ಲಿ ಗಣ ಪರ್ವಗಳು ನಡೆಯುತ್ತಲಿದ್ದವು. ಅವಕ್ಕೆ ಅಂಗವಂಗ ಕಳಿಂಗ ಗುರ್ಜರ ಸಿಂಹಳದಿಂದೆಲ್ಲ ಜನರು ಸಮಾವೇಶವಾಗುತ್ತಿದ್ದರು.

ಪಾಷಂಡಿ ಭೂಮಿಯೊಳು ಶಿವ ಭಕ್ತಿಯ ನಾರಂಭಿಸಿ
ಪ್ರತ್ಯಕ್ಷಂಗಳಂ ಬೆಳೆದು ಗಣ ಪರ್ವಗಳಂ
ಸುಫಲಂ ಮಾಡಲೆಂದು ಬಂದ ಕಾರಣಿಕ ಬಸವ
ನಿನ್ನ ದೆಸೆಯಿಂದ ಎಮ್ಮ ಭಕ್ತಿ ಬಣ್ಣವೇರಿತ್ತು.

ಎನ್ನುತ್ತಾನೆ ಹರಿಹರ ಮಹಾಕವಿ. ಸಿಂಗಿರಾಜನ ಕಾವ್ಯದಲ್ಲಿ ಅಂಥದೊಂದು ಗಣ ಪರ್ವದ ವರ್ಣನೆ ಬಂದು, ಅಂದು ಸೇರಿದ ಬಸವ ಭಕ್ತರ ಸಮೂಹದ ಬೃಹತ್ತತೆ ನೋಡಿ ಬಿಜ್ಜಳನು ಗಾಬರಿಗೊಂಡುದಾಗಿ ಆತ ಬಣ್ಣಿಸುತ್ತಾನೆ. ಹಜ್ ಬಗ್ಗೆ ಓದಿ ಶರಣ ಮೇಳದ ಪರಿಕಲ್ಪನೆ ಹೊಂದಿದ್ದ ನನಗೆ, (ವಾರಕರಿ ಪಂಥದ ಪಂಢರ್ಪಾಪುರ ಯಾತ್ರೆಯೂ ಪುಷ್ಟಿ ನೀಡಿತು) ವಿಶ್ವ ಧರ್ಮದ ಲಕ್ಷಣಗಳ ಧರ್ಮಗಳು ಭಾಷೆ, ದೇಶಗಳ ಎಲ್ಲೆ ದಾಟಿ ಬೆಳೆಯುತ್ತವೆ. ಚದುರಿದಂತೆ ಇರುವ ಧರ್ಮಾನುಯಾಯಿಗಳನ್ನು ಒಂದೆಡೆಗೆ ತರಲು ಹಜ್ ಪರಿಕಲ್ಪನೆ ನಿಜಕ್ಕೂ ಅಮೂಲ್ಯ. ಅದರಂತೆ ಧರ್ಮಕ್ಷೇತ್ರವೊಂದನ್ನು ಗುರುತಿಸಿಕೊಂಡು ವರ್ಷಕ್ಕೆ ಒಮ್ಮೆಯಾದರೂ ಬಸವ ಧರ್ಮಾನುಯಾಯಿಗಳು ಒಂದೆಡೆ ಸೇರುವಂತೆ ಆಗಬೇಕು ಎಂಬ ಅಪೇಕ್ಷೆ ಮನದಲ್ಲಿ ಮೂಡಿತು. 1988ರಲ್ಲಿ ಮೊಧಲನೆಯ ಶರಣ ಮೇಳ ನಡೆಯುವುದರೊಡನೆ ಆ ಅಪೇಕ್ಷೆ ಸಾಕಾರ ರೂಪ ತಳೆಯಿತು.

ಮೊದಲನೆಯ ಶರಣ ಮೇಳಕ್ಕೆ ಲಿಂಗಾಯತ ಧರ್ಮೀಯರು ಮಾತ್ರವಲ್ಲದೆ ವೀರಶೈವರು ಸಾಕಷ್ಟು ಸಂಖ್ಯೆಯಲ್ಲಿ ಬಂದಿದ್ದರು. ಏಕೆಂದರೆ ನಾವು ಷಟ್ ಸೂತ್ರಗಳನ್ನು ಗುರುತಿಸಿಕೊಂಡಿರಲಿಲ್ಲ. ಮೊದಲ ಶರಣ ಮೇಳದಲ್ಲಿ ಷಟ್ ಸೂತ್ರಗಳನ್ನು ಕ್ರೋಢೀಕರಿಸಿ ಘೋಷಿಸಿದ ನಂತರ ಸ್ವಲ್ಪ ಗಡಿಬಿಡಿ ಲಿಂಗಾಯತ ಸಮಾಜದಲ್ಲಿ ವೀರಶೈವ ವಾದಿಗಳಿಂದ ನಡೆಯಿತು. ಏಕೆಂದರೆ ಅವರು ಎರಡೂ ಬುಟ್ಟಿಗಳಲ್ಲಿ ಕಾಲಿಟ್ಟು ಸಾಗುವವರು. ಈ ಗೊಂದಲಗಳಿಗೆ ಪರಿಹಾರ ಹುಡುಕುವುದೇ ನಮ್ಮ ಏಕಮೇವ ಗುರಿಯಾದ್ದರಿಂದ ದೃಢ ಚಿತ್ತದಿಂದ ಮುನ್ನಡೆದೆವು. ಈಗ ಶುದ್ಧ ಬಸವ ಭಕ್ತರ ಸಂಖ್ಯೆಯಲ್ಲಿ ಹೆಚ್ಚಳ ಉಂಟಾಗಿ ಶರಣ ಮೇಳವು ವಿಸ್ತಾರಗೊಂಡು ಬೆಳೆಯುತ್ತಲಿದೆ. ಚದುರಿ ಚಲ್ಲಾಪಿಲ್ಲಿಯಾಗಿರುವ ಲಿಂಗಾಯತ ಸಮಾಜಕ್ಕೆ ಬಹುದೊಡ್ಡ ಆಶಾ ಕಿರಣ ಶರಣ ಮೇಳ. ಕಲ್ಯಾಣ ಕ್ರಾಂತಿಯ ನಂತರ ಉತ್ತರ- ದಕ್ಷಿಣ, ಪೂರ್ವ-ಪಶ್ಚಿಮ ಹೀಗೆ ನಾಲ್ಕೂ ದಿಕ್ಕುಗಳಲ್ಲಿ ಶರಣರು ಚದುರಿದರು. ವಚನ ಸಾಹಿತ್ಯ ಸಂಪರ್ಕ ತಪ್ಪಿದ ಲಿಂಗಾಯತ ಸಮಾಜ ನಿರಭಿಮಾನ, ಅಸಂಘಟನೆ, ಅಜ್ಞಾನ, ಅನೈಕ್ಯತೆ ಗುಂಪುಗಾರಿಕೆ, ಜಾತಿವಾದಗಳಿಂದ ಜರ್ಜರಿತವಾಗಿದೆ. ಕರ್ನಾಟಕದ ಉತ್ತರ ಭಾಗದಲ್ಲಿ ಏನೋ ಅಷ್ಟಿಷ್ಟು ಚಟುವಟಿಕೆ ನಡೆಯುತ್ತಲಿದ್ದರೂ ಸಾಂಘಿಕ ಶಕ್ತಿಯಂತೂ ಏನೇನೂ ಇಲ್ಲ. ಇದಕ್ಕೆ ಕಾರಣಗಳು ಹಲವಾರು ಎಂಬುದನ್ನು ಆಗಾಗ ನಾನು ಬರೆಯುತ್ತಲೇ ಬಂದಿದ್ದೇನೆ.

1. ಧರ್ಮಗುರು ಬಸವಣ್ಣನವರನ್ನು ಮರೆಸಿ ತಮ್ಮ ಮಠಗಳ ಗದ್ದುಗೆಗಳ ಕರ್ತೃಗಳನ್ನೇ ಮಠ - ಮಾನ್ಯಗಳವರು ವೈಭವೀಕರಿಸಿಕೊಂಡುದು.
2. ವಚನ ಸಾಹಿತ್ಯದ ಸಂಪರ್ಕ ತಪ್ಪಿಸಿ ಪುನಃ ವೇದಾಗಮಗಳ ಮೊರೆಹೊಕ್ಕಿದ್ದು.
3. ಎಲ್ಲರನ್ನೂ ಒಟ್ಟುಗೂಡಿಸುವ ಧಾರ್ಮಿಕ ಸಮಾವೇಶವೊಂದನ್ನು ಸಂಯೋಜಿಸದಿದ್ದುದು.

ಪ್ರತಿ ಮಠದವರೂ, ಅನೇಕ ಜಾತಿ/ಸಂಘಟನೆಗಳವರು ಪ್ರತಿ ವರ್ಷವೂ ಸಮಾವೇಶ ಮಾಡುತ್ತಲೇ ಇರುತ್ತಾರೆ. ಆದರೆ ಅವು ಪೂಜೆ, ಪ್ರಾರ್ಥನೆ, ಧಾರ್ಮಿಕ ಚಿಂತನೆಗಳಿಂದ ಕೂಡಿರುವುದಿಲ್ಲ. ಜನರಿಗೆ ಯಾವುದೇ ಧಾರ್ಮಿಕ ಸಂಸ್ಕಾರ ನೀಡುವುದಿಲ್ಲ. ರಾಜಕೀಯ (ನೇತಾರರ) ಸಮಾವೇಶಗಳಾಗಿ ಬರೀ ವೈಭವ ಪ್ರದರ್ಶನದಲ್ಲಿ ಒಂದು ವ್ಯವಹಾರವಾಗಿ ಕೊನೆಗೊಳ್ಳುತ್ತವೆ.

4. ಧರ್ಮದ ಅನುಯಾಯಿಗಳೆಲ್ಲರೂ ಬಂದು ಸೇರುವಂಥ ಧರ್ಮಕ್ಷೇತ್ರವೊಂದನ್ನು ಗುರುತಿಸಿ ಕೊಳ್ಳದುದು.
5. ಎಲ್ಲಕ್ಕೂ ಮಿಗಿಲಾಗಿ ಎಲ್ಲ ಮಠ ಮಾನ್ಯಗಳವರೂ ಒಟ್ಟಿಗೆ ಸೇರಿ ಧರ್ಮ-ಸಮಾಜಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಸಮಾಲೋಚಿಸದೆ ಇರುವುದು.

ಇಂಥ ನಿರ್ಜೀವ ಸ್ಥಿತಿಯಲ್ಲಿ ಲಿಂಗಾಯತ ಸಮಾಜ "ರೋಗ ನಿರೋಧಕ ಶಕ್ತಿ"ಯನ್ನು ಕಳೆದು ಕೊಂಡು ಇರುವಾಗ 20ನೆಯ ಶತಮಾನದ ಪೂರ್ವಭಾಗದ ದಶಕಗಳಲ್ಲಿ ವೀರಶೈವ ಮತ್ತು ಪಂಚಾಚಾರ್ಯವಾದವೆಂಬ ಬಿ.ಪಿ ರೋಗ(ಬಸವ ಪೂರ್ವದಲ್ಲಿ ಈ ಧರ್ಮ ಇತ್ತೆಂಬ ವಾದ) ಒಳಹೊಕ್ಕು ಉಪಟಳ ಆರಂಭಿಸಿತು. ರೋಗ ಮೂಲವನ್ನು ಹುಡುಕಿ, ಚಿಕಿತ್ಸೆ ಆರಂಭಿಸಲಾಗಿದೆ. ಒಟ್ಟಾಗಿ ಸೇರಿ ಕೆಲಸ ಮಾಡುವ ಸದ್ಭಾವ ಮೂಡಿರದಿದ್ದರೂ ಅಲ್ಲಲ್ಲೇ, ಅವರು- ಇವರು ಎಷ್ಟೋ ಜನ ಮೊದಲನೆಯ ಎರಡು, ಸೂತ್ರಗಳಿಗೆ (ಧರ್ಮಗುರು ಬಸವಣ್ಣ- ವಚನ ಸಾಹಿತ್ಯ) ಬದ್ಧರಾಗುತ್ತ ಸಮಾಜದಲ್ಲಿ ಜಾಗೃತಿಯನ್ನು ಬರಹ, ಪತ್ರಿಕೆ,ಭಾಷಣಗಳ ಮೂಲಕ ಮಾಡುತ್ತಿದ್ದಾರೆ.

ಬಸವ ಭಕ್ತರನ್ನು ಒಂದೆಡೆ ಸೇರಿಸುವ ಮತ್ತು ಸಂಸ್ಕಾರ ನೀಡುವ ಕಾರ್ಯವನ್ನು ಶರಣ ಮೇಳವು ಅತ್ಯಂತ ಯಶಸ್ವಿಯಾಗಿ ಮಾಡುತ್ತಿರುವುದು ಎಲ್ಲರಿಗೂ ತಿಳಿಯುತ್ತಲಿದೆ. ಆದರೆ ಸಮಷ್ಟಿ ಪ್ರಜ್ಞೆ ಇಲ್ಲದ ಅನೇಕರಿಗೆ ಹೊಟ್ಟೆಯುರಿ. ಇದಕ್ಕೆ ಪ್ರತಿಸ್ಪರ್ಧಿಯಾಗಿ ಅವೇ ದಿನಾಂಕಗಳಂದು ತಮ್ಮ ತಮ್ಮ ಮಠಗಳಲ್ಲಿ ಕಾರ್ಯಕ್ರಮ ಇಟ್ಟುಕೊಂಡರು, ತಮ್ಮ ಭಕ್ತರು ತಮ್ಮ "ಮಂದೆ" ಬಿಟ್ಟು ಹೊರ ಹೋಗಬಾರದೆಂದು. ಆದರೆ ಶರಣ ಮೇಳವು ಪ್ರವಾಹದೋಪಾದಿಯಲ್ಲಿ ವಿಸ್ತಾರಗೊಂಡು ಬೆಳೆಯಿತು. ನನಗೆ ಬಹಳ ತಮಾಷೆ ಎನ್ನಿಸುತ್ತದೆ ಅಷ್ಟೆ ದುಃಖವಾಗುತ್ತದೆ. ಕೆಲವು 'ಗಣ್ಯ' ಜನರು ನಮ್ಮ ಕಾರ್ಯಕ್ರಮಕ್ಕೆ ಬಂದರೆ, ನಮ್ಮೊಡನೆ ಭಕ್ತಿ-ಗೌರವಗಳಿಂದ ನಡೆದುಕೊಂಡರೆ ಆಗಲೆ ಮಠಾಧೀಶರಿಂದ ಕರೆ, "ನೀವು ಏಕೆ ಅವರಲ್ಲಿ ಹೋಗುತ್ತೀರಿ?" ಅದೇ ಆ ಜನರು ಮೌಂಟ್ ಅಬುಗೆ ಹೋದರೆ ತಡೆಯುವುದಿಲ್ಲ, ಶಬರಿ ಮಲೆಗೆ , ತಿರುಪತಿಗೆ ಹೋದರೆ ಅಡ್ಡಿ ಮಾಡುವುದಿಲ್ಲ. ಇಂಥ ಸ್ವಧರ್ಮಘಾತುಕರ ವರ್ತನೆ ನೋಡಿದಾಗ, 'ಬಸವಣ್ಣಾ, ಈ ಜನ ಎಂಥ ಪಾಪವನ್ನು ಮಾಡುತ್ತಿದ್ದಾರೆ ಎಂಬ ಅರಿವು ಇವರಿಗಿಲ್ಲವಲ್ಲ' ಎನ್ನುವುದೊಂದೇ ನಮಗೆ ಉಳಿದಿರುವುದು . ದಯನೀಯ ಸ್ಥಿತಿಯನ್ನು ತಲ್ಪಿರುವ ಲಿಂಗಾಯತ ಸಮಾಜದಲ್ಲಿ ಅಧ್ಯಾತ್ಮಿಕ ಜೀವಂತಿಕೆ ತುಂಬ ಬೇಕೆಂದು ಸಾಕಷ್ಟು ಪ್ರಯಾಸ ಪಡುತ್ತೇವಾದರೂ ಆಂತರಿಕ ವಿರೋಧಿ ಶಕ್ತಿಗಳಿಂದ ಪಂಕ್ಚರ್ ಆದ ಟೈರ್‌ದಲ್ಲಿ ಗಾಳಿ ತುಂಬಿದಂತೆ ಆಗುತ್ತಿದೆ. ರಾಷ್ಟ್ರೀಯ ಬಸವ ದಳಗಳು ಕೆಲವು ಕಡೆ ಆತ್ಮೀಯತೆ, ವಿಶ್ವಾಸಗಳಿಂದ ಎಲ್ಲರನ್ನು ಆಕರ್ಷಿಸುತ್ತಿದ್ದರೆ ಮತ್ತೆ ಕೆಲವು ಕಡೆ ಕೆಲವರ ಅಹಂಕಾರ, ಸಣ್ಣತನ, ಸ್ವಾರ್ಥ, ಆಂತರಿಕ ಜಗಳಗಳಿಂದ ಕಳಾಹೀನವಾಗುತ್ತವೆ. ಪ್ರಾರ್ಥನೆ-ಪ್ರವಚನಗಳಿಂದ ಮನಃ ಶಾಂತಿ ಪಡೆಯಬೇಕೆಂದು ಬರುವ ಅಧ್ಯಾತ್ಮ ಜೀವಿಗಳಿಗೆ ಅಹಮ್ಮಿನ ಮಾತುಗಳ ತೂರಾಟದಿಂದ ಬೇಸರವಾಗಿ ಅಂಥವರು ಬೇರೆ ಯಾವ್ಯಾವುದೋ ಪಂಥಗಳಿಗೆ ಸಹಜ ಸಿದ್ಧಿಯೋಗ, ಬ್ರಹ್ಮ ಕುಮಾರಿ ಮುಂತಾದಲ್ಲಿಗೆ ತಮ್ಮ ಧರ್ಮಾಚರಣೆ ತೊರೆದು ಹೊಗಲು ಯತ್ನಿಸುವರು.

ಸಾಮಾನ್ಯವಾಗಿ ಶರಣ ಮೇಳಕ್ಕೆ ಬಂದು ಹೋದ ರಾಜಕೀಯ, ಸಾಮಾಜಿಕ ಗಣ್ಯರಿಗೆ ಅಲ್ಲಿಯ ಶಿಸ್ತು, ಜ್ಞಾನ ದಾಸೋಹ, ಅನ್ನ ದಾಸೋಹ ಬಹಳ ಪರಿಣಾಮ ಬೀರುತ್ತವೆ. ಅವರು ಉದ್ಗಾರ ತೆಗೆದು ಹೋಗುತ್ತಾರೆ. ಆದರೆ ನಾವು ಅಂಥ ಗಣ್ಯರನ್ನು ಆಹ್ವಾನಿಸಿ ಹೆಸರು ಮುದ್ರಿಸುತ್ತಲೇ ಆಗಲೆ ಅವರಿಗೆ ಹೋಗಬೇಡಿ ಎಂದು ಒತ್ತಡ ತರುವವರು ಅನೇಕರು. ಹೀಗೆ ಅನೇಕರು ಹೇಳಿದರು,

"ನಮಗೆ ಹೋಗಬೇಡಿರಿ ಎಂದು ಅಂಥವರು ಫೋನ್ ಮಾಡಿದರು, ಇಂಥವರು ಫೋನ್ ಮಾಡಿದರು. ಆದರೆ ನಾವು ಬಂದೇ ಬಿಟ್ಟೆವು." ಅವರ ಆ ಸೌಜನ್ಯವನ್ನು ನಾವು ಖಂಡಿತಾ ಮೆಚ್ಚುತ್ತೇವಾದರೂ, "ನಾವು ಬಂದು ಧನ್ಯರಾದೆವು ಎನ್ನುವುದಕ್ಕಿಂತ ಬಂದು ಉಪಕಾರ ಮಾಡಿದೆವು. ಎಂಬ ಅಂಶವನ್ನು ಅವರ ಧ್ವನಿಯಲ್ಲಿ ಗುರುತಿಸಿದಾಗ ಇದು ಧರ್ಮಕ್ಕೆ ಆಗುವ ಅಪಮಾನ ಎನಿಸುತ್ತದೆ. ಸುದ್ದಿ ಮಾಧ್ಯಮಗಳವರು ಹೆಚ್ಚಾಗಿ ಸಮಾಜದಲ್ಲಿ ಗಣ್ಯರೆಂದರೆ ಕೇವಲ ರಾಜಕಾರಣಿಗಳು, ಸಚಿವರು ಮಾತ್ರ ಎಂಬಂತೆ ಗುರುತಿಸುತ್ತಾರೆ. ಅಂಥವರು ಇರಲಿಲ್ಲವೆಂದರೆ ಚಿತ್ರಕ್ಕೆ, ಸುದ್ದಿಗೆ ಪ್ರಾಮುಖ್ಯತೆಯನ್ನು ಕೊಡುವುದಿಲ್ಲ. ಇದೆಲ್ಲ ಧರ್ಮಕ್ಕೆ ಮಾಡುವ ಅವಹೇಳನ. ಈ ಪ್ರವೃತ್ತಿ ಸಮಾಜದಿಂದ ತೊಲಗಬೇಕು. ಧಾರ್ಮಿಕ ಕಾರ್ಯಕ್ರಮಗಳಿಗೆ ಶುದ್ಧ ಧಾರ್ಮಿಕ ಸ್ವರೂಪವಿರಬೇಕು; ಅದರಲ್ಲಿ ಭಾಗಿಯಾಗುವುದರಿಂದ ತಮ್ಮ ಸಮಯ, ಜೀವನ ಪಾವನವಾಯಿತು ಎಂಬ ಭಾವ ಗಣ್ಯರಲ್ಲಿ ಮೂಡಬೇಕು. ಅಂಥ ಕೆಲವು ಗಣ್ಯರಿಂದ ಕಾರ್ಯಕ್ರಮದ ಸಮಯದಲ್ಲಿ, ಕ್ರಮದಲ್ಲಿ ಬದಲಾವಣೆ, ಅಸ್ತವ್ಯಸ್ತತೆ ಉಂಟಾಗುವುದನ್ನು ತಪ್ಪಿಸಬೇಕು.

ಹಿಂದು ಸಮಾಜದ ದೌರ್ಬಲ್ಯವೆಂದರೆ ವ್ಯಕ್ತಿಗತ ಪಂಥಗಳು - ದೇವತೆಗಳ ಸುತ್ತ ಶಿವ, ವಿಷ್ಣು ದೇವಿ ಇತ್ಯಾದಿ ಕೆಲವು ಪಂಥಗಳು, ಮತ್ತು ಈಗಾಗಲೇ ಆಗಿ ಹೋಗಿರುವ ಸಂತರ ಸುತ್ತ ಕೆಲವು, ಈಗ ಜೀವಂತವಾಗಿರುವ ಕೆಲವು ವ್ಯಕ್ತಿಗಳ ಸುತ್ತ ಮತ್ತೆ ಕೆಲವು. ನನಗೆ ಇದು ಹೇಗೆ ತೋರುತ್ತದೆ ಎಂದರೆ, ಕಾರು, ಲಾರಿ ಮುಂತಾದವುಗಳ ಮುಂಭಾಗದ ಗಾಜು ಏನಾದರೂ ಕಲ್ಲು ಮುಂತಾಗಿ ಬಿದ್ದರೆ ಸಣ್ಣ ಸಣ್ಣ ಚೂರುಗಳಾಗಿ ಸೀಳುತ್ತದೆ. ಅದೇ ಕ್ರೈಸ್ತ, ಮುಸಲೀಮ್ ಮತ್ತು ಸಿಖ್ ಸಮಾಜ ನೋಡಿದರೆ ಒಡೆಯದೆ ಇರುವ ಶುಭ್ರವಾದ ಅಖಂಡವಾದ ಗಾಜಿನಂತೆ ಎನಿಸುತ್ತದೆ. ಅಲ್ಲಿ ಯಾರೂ ವೈಯಕ್ತಿಕವಾಗಿ ಮಠ, ಸಂಘ-ಸಂಸ್ಥೆ ಕಟ್ಟದೆ ತಮ್ಮ ಸಂಸ್ಥೆಗಳಾದ ಚರ್ಚ್, ಮಸೀದಿ, ಗುರುದ್ವಾರಗಳ ಮೂಲಕವೇ ಬದುಕಲು, ಬೆಳೆಯಲು ಇಚ್ಛಿಸುತ್ತಾರೆ. ಈ ಪ್ರವೃತ್ತಿಯೇ ಆ ಸಮಾಜಗಳ ಶಕ್ತಿ ಮೂಲ.

ಪೂಜ್ಯ ಅಪ್ಪಾಜಿ 1956ರಲ್ಲಿ ಅಧ್ಯಾತ್ಮ ಜೀವನಕ್ಕೆ ಬಂದರು; ಆರಂಭಿಕ ದಿನಗಳಲ್ಲಿ ತಪಸಾಧನೆಗೆ ಮಹತ್ವ ಕೊಟ್ಟರು. 1966ರಿಂದ ಲಿಂಗೈಕ್ಯರಾಗುವವರೆಗೆ ಅಖಂಡವಾಗಿ 40 ವರ್ಷ ಕಾಲ ಸಮಾಜ ಜಾಗೃತಿಗಾಗಿ ದುಡಿದರು. ನಮ್ಮಲ್ಲೂ ಸಮಾಜ, ಧರ್ಮದ ಏಳಿಗೆಗಾಗಿ ದುಡಿಯುವ ಹಂಬಲ ಮೂಡಿಸಿದರು. 1966ರಿಂದ ಇಲ್ಲಿಯವರೆಗೂ ನಾವು, ನಮ್ಮ ಜಂಗಮ ಮೂರ್ತಿಗಳು ಇದಕ್ಕಾಗಿ ಶ್ರಮಿಸುತ್ತಿದ್ದೇವೆ. ಸಾಮಾನ್ಯವಾಗಿ ಉಳಿದ ಸಂಪ್ರದಾಯ ಮಠಾಧೀಶರು ತಮ್ಮ ಬಂಧು-ಬಳಗ ದಿಂದ,ತಮ್ಮ ವಂಶದಿಂದ, ತಮ್ಮ ಜಾತಿಯಿಂದ ಉತ್ತರಾಧಿಕಾರಿಗಳನ್ನು ಆಯ್ಕೆ ಮಾಡುತ್ತಾರೆ. ಈ ಜಡ ಸಂಪ್ರದಾಯ ಮುರಿದು ಅಧ್ಯಾತ್ಮದ ತಳಹದಿಯ ಮೇಲೆ ಶಿಷ್ಯರನ್ನು ಆಯ್ಕೆ ಮಾಡಿಕೊಳ್ಳುವ ಸತ್ಸಂಪ್ರದಾಯಕ್ಕೆ ಅಪ್ಪಾಜಿ ಮಾರ್ಗ ಹಾಕಿ ಕೊಟ್ಟರು. ಎಷ್ಟೋ ಜನರಿಗೆ ಜ್ಞಾನವನ್ನು, ತರಬೇತಿಯನ್ನು ನೀಡುತ್ತಾ ಬಂದೆವು. ಕೆಲವರು ನಿಷ್ಠೆಯಿಂದ ಮುಂದುವರಿದರು. ಮತ್ತೆ ಕೆಲವರು ಕಾರಣಾಂತರಗಳಿಂದ ಸಂಸ್ಥೆಯನ್ನು ಬಿಟ್ಟು ಹೋಗುವರು. ಆಗ ಕೆಲವರು ಹೇಳುತ್ತಾರೆ, "ನೀವು ಜನರನ್ನು ಬಹಳ ನಂಬುತ್ತೀರಿ. ಆಶ್ರಯ ಕೊಡುತ್ತೀರಿ, ಸ್ಥಾನಮಾನ ಕೊಡುತ್ತೀರಿ. ಇನ್ನಷ್ಟು ಪರೀಕ್ಷಿಸಬೇಕು" ಎನ್ನುತ್ತಾರೆ. ಮಾನವರಲ್ಲಿ ನಂಬಿಕೆ ಇಡದಿದ್ದರೆ ಹೇಗೆ? ಎಲ್ಲರಲ್ಲೂ ಅವಿಶ್ವಾಸ ಮಾಡಿದರೆ ಏನೇನೂ ಕಾರ್ಯ ಸಾಧನೆ ಮಾಡಲು ಸಾಧ್ಯವಾಗದು. ಅಂಥ ನಂಬಿಕೆ ಇಟ್ಟರೆಂದೇ ಗುರು ಬಸವಣ್ಣನವರು ಅನುಭವ ಮಂಟಪ ಕಟ್ಟಲು ಸಾಧ್ಯವಾಯಿತು. ಒಂದು ವಚನದಲ್ಲಿ ಹೀಗೆ ಹೇಳುತ್ತಾರೆ:

ಆರಾರ ಮನದಲ್ಲಿ ಏನೇನಿಹುದೆಂದರಿಯೆ
ಒಳ್ಳಿಹರೆಂದೆನಲಮ್ಮೆ; ಹೊಲ್ಲಹರೆಂದೆನಲಮ್ಮೆ
ಶಿವಭಕ್ತರಾದ ಕಾರಣ,
ಲಿಂಗದೇವಾ ಜಂಗಮವೇ ಲಿಂಗ. (ಬ.ವ.ದೀ 403)

ಸಮಾಜವನ್ನು ಸಾಂಸ್ಥಿಕವಾಗಿ ಕಟ್ಟುವುದು ಅಗತ್ಯ;ಅಂದಾಗ ಜನರನ್ನು ನಂಬಲೇ ಬೇಕಾಗುತ್ತದೆ. ಒಬ್ಬ ವ್ಯಕ್ತಿ ಆರಂಭದಲ್ಲಿ ಆದರ್ಶ ವ್ಯಕ್ತಿಯೇ ಇರಬಹುದು; ಆದರೆ ಮಾನವ ಕಲ್ಲು

ಮಣ್ಣಿನಂತೆ ಜಡನಲ್ಲ. ಹೀಗಾಗಿ ಅವರುಗಳಲ್ಲಿ ಮಾನಸಿಕ ಏರಿಳಿತಗಳು, ಆದರ್ಶಗಳಲ್ಲಿ ಬದಲಾವಣೆಗಳು, ಸೋಲು-ಗೆಲುವು ಸಂಭವಿಸುತ್ತಲಿರುತ್ತವೆ. ಬದುಕಿನ ಕಡೆಯ ಕ್ಷಣದ ವರೆಗೆ ಯಾವುದಾದರೂ ಒಂದು ರೀತಿಯಲ್ಲಿ ಪತನಗೊಳ್ಳುವ ಭಯ ಇಲ್ಲದಿರುವುದಿಲ್ಲ. ಮಾಯೆಯಾಗಿ ಯಾವುದು ಬಂದು ಕಾಡುತ್ತದೋ ಹೇಳಲಾಗುವುದಿಲ್ಲ. ಆದ್ದರಿಂದ ಸಾಧಕ ಜೀವಿಯು ಬಹಳ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಅದನ್ನೇ ಅವಧಾನ ಭಕ್ತಿ ಎಂದು ವಚನ ಸಾಹಿತ್ಯದಲ್ಲಿ ಕರೆದಿರುವುದು. ಮೈಲಾರ ಬಸವ ಲಿಂಗ ಶರಣರು ಹೇಳುತ್ತಾರೆ, "ಸ್ವಾತಿ ಜಲದಿಂದ ಮುತ್ತಾಗುತ್ತದೆ ಮುತ್ತು ಮರಳಿ ನೀರಾಗದು. ಮಣ್ಣು ಮಡಿಕೆಯಾಗುತ್ತದೆ; ಮಡಿಕೆ ಮತ್ತೆ ಮಣ್ಣಾಗದು" ಎಂದು. ಆದರೆ ಈಗೀಗ ವಿಚಾರ ಮಾಡುತ್ತಾ ಹೋದಂತೆ ಅನ್ನಿಸುತ್ತದೆ ನೀರು ಮುತ್ತಾಗುತ್ತದೆ, ಮುತ್ತು ಮರಳಿ ನೀರಾಗದು. ಆದರೆ ಮುತ್ತು ನೀರಾಗದೆ ಇದ್ದರೂ ಒಡೆದರೆ ನಿಷ್ಪ್ರಯೋಜಕವಾಗುತ್ತದೆ. ಮಾಯೆ ನೇರ ರೂಪದಲ್ಲಿ ಕಾಡಬಹುದು,ಒಳ್ಳೆಯ ವೇಷ ಧರಿಸಿ ಕಾಡಬಹುದು - ಸೀತೆಯನ್ನು ಬಂಗಾರದ ಜಿಂಕೆ ಮರುಳು ಗೊಳಿಸಿದಂತೆ. ಅದಕ್ಕೆ ಅಕ್ಕಮಹಾದೇವಿ ಹೇಳಿರುವುದು, "ಯೋಗಿಗೆ ಯೋಗಿಣಿಯಾಯಿತು ಮಾಯೆ, ಯತಿಗೆ ಪರಾಕಿಯಾಯಿತು ಮಾಯೆ." ನೇರ ರೂಪದಲ್ಲಿ ಕಾಮಿಯಾಗಿ ಬಂದ ಮಾಯೆಯನ್ನು ಗೆಲ್ಲಲು ಸಮರ್ಥನಾದ ಸಾಧಕನು ಪರೋಕ್ಷವಾಗಿ ಬಂದುದನ್ನು ಗೆಲ್ಲಲಾರದೆ ಹೋಗಬಹುದು. ಕಡೆಯ ಕ್ಷಣದವರೆಗೂ ತನ್ನನ್ನು ತಾನು ಕಾಯ್ದುಕೊಳ್ಳಲು ಇರುವ ರಕ್ಷಣಾ ಬೇಲಿಯೆ ಗುರು ಸನ್ನಿಧಿ ಮತ್ತು ಶರಣರ ಸತ್ಸಂಗ.

ದಿ: 13-01-2007ರಂದು ಪೀಠಾರೋಹಣ ಸಂದೇಶ ನೀಡುತ್ತಾ ನಾನು ನಮ್ಮ ಧರ್ಮಪೀಠದ ಜಂಗಮ ಮೂರ್ತಿಗಳನ್ನುದ್ದೇಶಿಸಿ ಹೇಳಿದೆ.

1. ತಮ್ಮ ವೈಯಕ್ತಿಕ ದೌರ್ಬಲ್ಯದಿಂದಲೋ, ಸ್ವಾರ್ಥದಿಂದಲೋ, ಕ ಕಾ ಕಿ - ಕನಕ, ಕಾಮಿನಿ, ಕೀರ್ತಿ ಮುಂತಾದವನ್ನು ಬಯಸಿಯೋ, ಅಥವಾ ಯಾವುದೋ ಉದಾತ್ತ ಉದ್ದೇಶದ ಸೋಗಿನಲ್ಲಿ ವ್ಯಕ್ತಿಗಳು ಸಂಸ್ಥೆಗಳನ್ನು ಬಿಟ್ಟು ಸ್ವತಂತ್ರರಾಗಲು ಬಯಸಬಹುದು. ಆದರೆ ಜೀವನದಲ್ಲಿ ಒಂದು ನಿಷ್ಠೆ, Loyalty ಎಂಬುದು ಬಹಳ ಮುಖ್ಯ. ದೇಶ ನಿಷ್ಠೆ, ಧರ್ಮ ನಿಷ್ಠೆ, ಗುರು ನಿಷ್ಠೆ, ಸಾಂಸ್ಥಿಕ ಮನೋಭಾವ ಬಹಳ ಮುಖ್ಯ. ತಮ್ಮ ಲೋಪದೋಷಗಳನ್ನು ಮುಚಿಕೊಳ್ಳಲು ಪೋಷಿಸಿ, ಬೆಳೆಸಿದ ಸಂಸ್ಥೆಗಳ ಮೇಲೆ ಆರೋಪ ಕೊಡಬಾರದು, ಸುಳ್ಳುಗಳನ್ನು ಹೇಳಬಾರದು. ಸತ್ಯಕ್ಕೆ ಒಂದೇ ಮುಖ ಇರುತ್ತದೆ. ಸುಳ್ಳಿಗೆ ನಾನಾ ಮುಖಗಳಿರುತ್ತವೆ. ನನ್ನ ನಂಬಿಕೆ ಏನೆಂದರೆ, "ಯಾರೋ ಯಾವುದೋ ಕಾರಣಕ್ಕೆ ಸಂಸ್ಥೆಯನ್ನು ಬಿಟ್ಟು ಹೋದರೆ ಅವರ ಬಗ್ಗೆ ನಾನು ಅಲ್ಲಸಲ್ಲದ ಮಾತುಗಳನ್ನಾಡುವುದಿಲ್ಲ ಮೌನವಾಗಿರುತ್ತೇನೆ. ಅವರು ತಾವಾಗಿಯೇ ತಮ್ಮ ವ್ಯಕ್ತಿತ್ವವನ್ನು ನಡೆ-ನುಡಿ, ವರ್ತನೆಗಳ ಮೂಲಕ ಕೆಲವೇ ದಿವಸಗಳಲ್ಲಿ ತೋರಿಸಿಕೊಳ್ಳುವರು. ಒಳ್ಳೆಯದಿದ್ದರೆ ತಾನೇ ಸುವಾಸನೆ ಬೀರುವುದು; ಕೆಟ್ಟದಿದ್ದರೆ ದುರ್ವಾಸನೆ ಬೀರುವುದು. ಒಂದು ವೇಳೆ ಅಕಸ್ಮಾತ್ ನಮ್ಮಲ್ಲಿದ್ದಾಗಲೇ ಕೆಲವು ತಪ್ಪುಗಳನ್ನು ಮಾಡುತ್ತಲಿದ್ದಿರಬಹುದು. ಆದರೆ ಹೊರಗೆ ಹೋದ ಬಳಿಕ ತನ್ನ ತಪ್ಪುಗಳನ್ನು ತಿದ್ದಿಕೊಂಡು ವ್ಯಕ್ತಿತ್ವವನ್ನು ಉನ್ನತವಾಗಿಸಿಕೊಂಡು ಜನ ಮನ್ನಣೆ ಪಡೆಯಬಹುದು. ನಾವೇಕೆ ಪೂರ್ವಾಗ್ರಹ ಪೀಡಿತ ಮನೋಭಾವವನ್ನು ಅವರ ಬಗ್ಗೆ ಜನರಲ್ಲಿ ಹುಟ್ಟಿಸಬೇಕು?"

2. ಒಂದು ಸಂಸ್ಥೆಯನ್ನು ಕಟ್ಟುವುದು ಬಹಳ ಪರಿಶ್ರಮದ ಕೆಲಸ, ಜಡವಾದ ಕಲ್ಲು ಇಟ್ಟಿಗೆಗಳಿಂದ ಬಿಲ್ಡಿಂಗ್ ಕಟ್ಟಿದಷ್ಟು ಸಂಸ್ಥೆ ಕಟ್ಟುವುದು ಸುಲಭವಲ್ಲ. ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ ಎಂಬಂತೆ ಪೋಷಿಸಿ, ಬೆಳೆಸಿದ ಸಂಸ್ಥೆ ತನಗೆ ಬೇಡವಾದ ಮಾತ್ರಕ್ಕೆ ಅದಕ್ಕೆ ದ್ರೋಹ ಬಗೆಯಬಾರದು.ಎಂಬ ನಿಷ್ಠೆಯನ್ನು ಬೆಳೆಸಿಕೊಳ್ಳಬೇಕು. ಅನೇಕ ಭಕ್ತರು (ಭುಕ್ತರು) ಗುರು-ಶಿಷ್ಯರ ಮಧ್ಯೆ ಭಿನ್ನಾಭಿಪ್ರಾಯ ಹುಟ್ಟಿಸುತ್ತಾರೆ. ಗುರುಗಳನ್ನು ಬಿಟ್ಟು ಬನ್ನಿರಿ ನಿಮಗೆ ಅಂಥ ಮಠ ಕಟ್ಟಿಕೊಡುತ್ತೇವೆ, ಇಂಥ ಮಠ ಮಾಡಿಕೊಡುತ್ತೇವೆ ಎಂದು ಆಮಿಷ ಒಡ್ಡುತ್ತಾರೆ. ತತ್ವ ನಿಷ್ಠರಾದ ಶಿಷ್ಯ ಅಂಥ ಆಸೆ-ಆಮಿಷ, ಪ್ರಚೋದನೆಗಳಿಗೆ ಬಲಿಯಾಗುವುದಿಲ್ಲ. ಸ್ವತಃ ನಮಗೂ ಆ ರೀತಿ ಹೇಳಿದವರಿದ್ದರು. ನಾನು ಕೊಟ್ಟ ಉತ್ತರ ಒಂದೆ! ಸಾಮಾನ್ಯ ಒಬ್ಬ ಹುಡುಗಿಯಂತೆ ಎಂದು

ಭಾವಿಸಿದ್ದ, ನನಗೆ ನೀವು ಸಾಮಾನ್ಯರಲ್ಲ, ಆದಿ ಶರಣರ "ಆಶೋತ್ತರ ಪೂರೈಸಲು ಬಂದವರು, ಎಂದು ಗುರುತಿಸಿ, ಅನೇಕರ ವಿರೋಧ,ಕಿರುಕುಳ ಲೆಕ್ಕಿಸದೆ ಪೋಷಿಸಿ, ಬೆಳೆಸಿ ಒಂದು ಮಟ್ಟಕ್ಕೆ ತಂದ ಗುರುಗಳನ್ನು ಅವರಿಗಿಂತಲೂ ನಾನು ಮಿಗಿಲು ಎಂಬ ಅಹಂಭಾವ ಹೊಂದಿ, ಗುರುದ್ರೋಹ ಮಾಡಲೆ? ಗುರುದ್ರೋಹಕ್ಕಿಂತ ಮಿಗಿಲಾದ ಪಾಪ ಮತ್ತೊಂದಿಲ್ಲ."

ಇತ್ತೀಚೆಗೆ ಯಾದಗಿರಿಯಲ್ಲಿ ಪ್ರವಚನ ನಡೆಯುವಾಗ ಓರ್ವ ಅಧಿಕ ಪ್ರಸಂಗಿ ಪೋಲೀಸ್ ಅಧಿಕಾರಿ, ಪಂಚಪೀಠಾಧೀಶರ ಅನುಯಾಯಿ ಪೂಜ್ಯ ಗಂಗಾ ಮಾತಾಜಿಯವರಿಗೆ ಹೇಳಿ ಕಳಿಸಿದನಂತೆ,"ದೊಡ್ಡ ಮಾತಾಜಿ ಲಿಂಗದೇವ ಮಾಡಿ ನಿಮಗೆಲ್ಲ ಎಷ್ಟು ತೊಂದರೆ! (ನಿತ್ಯವೂ ಆತನಿಂದ ಕಿರುಕುಳ ಆಗುತ್ತಲೇ ಇತ್ತು.) ನೀವು ಒಳ್ಳೆಯ ಪ್ರವಚನಕಾರರು; ದೊಡ್ಡ ಮಾತಾಜಿಯಿಂದ ಹೊರಬನ್ನಿರಿ. ಲಕ್ಷಗಟ್ಟಳೆ ಕಾಣಿಕೆ ಕೊಡುವ ವೀರಶೈವರು ನಿಮ್ಮ ಬೆಂಬಲಕ್ಕೆ ನಿಲ್ಲುತ್ತಾರೆ."

ಪೂಜ್ಯ ಗಂಗಾ ಮಾತಾಜಿ ಆ ಸಂದೇಶ ವಾಹಕರಿಗೆ ಹೇಳಿದರಂತೆ, "ಮಾತಾಜಿಯವರಿಂದ ಹೊರ ಬಂದರೆ ಲಕ್ಷಗಟ್ಟಳೆ ಹಣ ಕೊಡುವವರು ಸಿಗಬಹುದು. ಆದರೆ ತತ್ವಕ್ಕಾಗಿ ಪ್ರಾಣಕೊಡುವ ಶರಣರು ಮಾತಾಜಿಯವರ ಜೊತೆ ಇದ್ದಾರಲ್ಲ, ಅವರು ಹೇಗೆ ಸಿಗಲು ಸಾಧ್ಯ?"

ಟೀವಕ ಟಿಂಬನ ಆಡಿಸುತ್ತಿದ್ದಿತಯ್ಯಾ ನಿನ್ನ ಮಾಯೆ ಹೆಣ್ಣು, ಹೊನ್ನು, ಮಣ್ಣು, ತೋರಿ ಎಂಬಂತೆ ಈ ಮಾಯೆಗಳನ್ನು ಮುಂದಿಟ್ಟು ಪರಸ್ಪರರಲ್ಲಿ ಭಿನ್ನಾಭಿಪ್ರಾಯ ಹುಟ್ಟಿಸುವವರು ಸಾಕಷ್ಟು ಎದುರಾಗಬಹುದು. ಅಂಥವರ ಬಲೆಗೆ ನಿಜ ಧ್ಯೇಯವಾದಿ ಸಿಲುಕಬಾರದು.

3. ಯಾವ ಪಾದ್ರಿಯೂ ಚರ್ಚ್ ಬಿಟ್ಟು ಸ್ವತಂತ್ರವಾಗಿ ಕೆಲಸ ಮಾಡನು, ಅದೇ ರೀತಿ ಸಿಖ್ಖರು ಗುರುದ್ವಾರಗಳ ಮೂಲಕವೇ ಧಾರ್ಮಿಕ ಪ್ರಚಾರ ಮಾಡುವರು.

ನಾವು ಹಾಗೆಯೇ ಇತಿಹಾಸವನ್ನು ಅವಲೋಕಿಸೋಣ. ಅಕ್ಕಮಹಾದೇವಿ ವೈರಾಗ್ಯ ಮೂರ್ತಿ, ಪ್ರತಿಭಾವಂತಳು, ಕನ್ನಡ ಕವಿ ಕೋಗಿಲೆ. ಒಂದು ವೇಳೆ ಅನುಭವ ಮಂಟಪಕ್ಕೆ ಬಂದು ಶರಣರ ಮಾಲೆಯಲ್ಲಿ ಸೇರದೆ ಇದ್ದರೆ ಇಷ್ಟು ಪರಿಚಿತಳು, ಖ್ಯಾತ ನಾಮಳು ಆಗುತ್ತಿದ್ದಳೋ ಇಲ್ಲವೋ! ಅದೇ ರೀತಿ ಅಲ್ಲಮ ಪ್ರಭುದೇವರು, ಸಿದ್ಧರಾಮೇಶ್ವರರು ಎಲ್ಲರೂ ಅಧ್ಯಾತ್ಮಿಕ ದಿಗ್ಗಜಗಳೆ. ಅವರು ಅನುಭವ ಮಂಟಪಕ್ಕೆ ಬಂದುದರಿಂದಲೇ ವಚನ ಸಾಹಿತ್ಯ ಸಂವಿಧಾನ ಶಿಲ್ಪಿಗಳಾದರು. ಬರದೆ ಇದ್ದರೆ ಸ್ಥಳೀಯ ಸಂತರಾಗಿ ಬಿಡುತ್ತಿದ್ದರು. ಬಿಂದು ಬಿಂದು ಕೂಡಿ, ನಂತರ ಹಳ್ಳ ನದಿಯಾಗಿ ದೊಡ್ಡ ನದಿಯನ್ನು ಸೇರಿಕೊಂಡಾಗ ಮಾತ್ರ ನದಿಗೆ ಪೂರ್ಣತ್ವ; ಇಲ್ಲದಿದ್ದರೆ ಆ ಬಿಂದು ಅಥವಾ ಹಳ್ಳ ಬತ್ತಿ ಹೋಗಿಬಿಡುತ್ತದೆ. ಆದ್ದರಿಂದ ಸಾಂಸ್ಥಿಕವಾಗಿ ದುಡಿಯಬೇಕೇ ವಿನಾ ಪ್ರತ್ಯೇಕವಾಗಿ ಮಠ ಕಟ್ಟಬೇಕೆಂಬ ಹಂಬಲ ಬರಬಾರದು. ಒಂದು ಚರ್ಚ್ ನಿರ್ಮಾಣವಾದರೆ ಆ ಧರ್ಮದ ಶಕ್ತಿ ಬೆಳೆಯುತ್ತದೆ. ಒಂದು ಮಸೀದಿ, ಗುರುದ್ವಾರ ಆದರೆ ಆಯಾ ಧರ್ಮಗಳಿಗೆ ಬಲವೃದ್ಧಿಯಾಗುತ್ತದೆ. ಅದೇ ಒಬ್ಬ ಒಂದು ಆಶ್ರಮ, ಗುಡಿ, ಮಠ ಕಟ್ಟಿದರೆ ಅವರ ಧರ್ಮ ಬಲಗೊಳ್ಳುವುದಕ್ಕಿಂತ ವ್ಯಕ್ತಿಯ ಸುತ್ತ ಒಂದು ಗುಂಪು ಪ್ರತ್ಯೇಕಗೊಳ್ಳುತ್ತದೆ. ಈ ತಪ್ಪುಗಳನ್ನೆಲ್ಲ ಅವಲೋಕಿಸಿ, ತಿಳಿದ ಬಳಿಕ ಅಂಥ ತಪ್ಪು ಪುನಃ ಮಾಡುವಂತೆ ವ್ಯಕ್ತಿಗತ ಗುಂಪುಗಳನ್ನು ಬೆಳೆಸಬಾರದು.

4. ಧರ್ಮ ಪ್ರಚಾರದ ಕಳಕಳಿ

ವೈಯಕ್ತಿಕ ಕೀರ್ತಿಯ ಆಸೆಗೆ ಬಲಿಯಾಗಿ ತನ್ನ ಧರ್ಮದ ಪ್ರಚಾರವನ್ನು ಕಡೆಗಾಣಿಸಬಾರದು. ಕೆಲವರು ಬೋಧಕರಿದ್ದಾರೆ. ಅವರು ಜನಪ್ರಿಯತೆಯ ಬೆನ್ನು ಹತ್ತಿ ಒಟ್ಟು ಜನರಲ್ ಆಗಿ ಹೇಳುತ್ತಾರೆ. ವಚನಗಳನ್ನು ಬಳಸಿಕೊಳ್ಳುತ್ತಾರಾದರೂ ಧರ್ಮ ನಿಷ್ಠೆಯನ್ನು, ಅಭಿಮಾನವನ್ನು ಬೆಳೆಸದೆ ಜನರನ್ನು ಇನ್ನಷ್ಟು ನಿರಭಿಮಾನಿಗಳನ್ನಾಗಿ ಮಾಡುತ್ತಾರೆ.ನಾವು ಹೆಚ್ಚು ಅಧ್ಯಾತ್ಮಿಕ ಜನರಲ್ ಆಗಿ ಪ್ರವಚನಗಳನ್ನು ಹೇಳುವಾಗ ಜನರು ವಿಪರೀತ ಸೇರುತ್ತಿದ್ದರು. ಆಗ ಪೂಜ್ಯ ಅಪ್ಪಾಜಿ ನಾವು ಆಲೋಚಿಸಿದೆವು "ಜನ ಸೇರುತ್ತಾರೆ, ಕಾಣಿಕೆ ಬರುತ್ತದೆ, ವೈಯಕ್ತಿಕವಾಗಿ ಆಶ್ರಮ-ಮಠ ಕಟ್ಟಿ ಬೆಳೆಯಬಹುದು. ಆದರೇನಂತೆ, ಒಂದು ಜೀವಂತ ಸಮಾಜವನ್ನು ಕಟ್ಟದೆ ಇದ್ದರೆ. Every man's land is no man's land ಎಂಬಂತೆ; ನಿರ್ದಿಷ್ಟ ತತ್ವಗಳನ್ನು ಗುರುತಿಸಿಕೊಂಡು ಬೋಧಿಸದೆ ಇದ್ದರೆ ಏನು ಪ್ರಯೋಜನ!

1988ರಲ್ಲಿ ಷಟ್‌ಸೂತ್ರಗಳನ್ನು ಘೋಷಿಸಿ, ಧರ್ಮಕ್ಷೇತ್ರವನ್ನು ಗುರುತಿಸಿಕೊಂಡು ಶರಣ ಮೇಳ ಆರಂಭವಾದ ಮೇಲೆ ನಿಜವಾದ ಸಂಘಟನೆ ಆಗತೊಡಗಿತು. ಲಿಂಗಾಯತ ಧರ್ಮದ ಬಗ್ಗೆ ಖಚಿತವಾಗಿ ಬೋಧಿಸುವುದು ಜಾತೀಯತೆಯಲ್ಲ, ಸಂಕುಚಿತತೆ ಅಲ್ಲ; ಏಕೆಂದರೆ ಈ ಧರ್ಮವನ್ನು ಗುರು ಬಸವಣ್ಣನವರು ಹುಟ್ಟುಹಾಕಿದ್ದೇ ಎಲ್ಲ ಮಾನವರಿಗೆ ಸಾಮಾಜಿಕ- ಧಾರ್ಮಿಕ ಹಕ್ಕುಗಳನ್ನು ಕೊಡಲು. ಧಾರವಾಡದ ತಪೋವನದ ಕುಮಾರ ಸ್ವಾಮಿಗಳು ಗುರುಸಿದ್ದ ಪ್ರಭುದೇವರೆಂಬ ಒಬ್ಬ ಮಹಾ ಮಹಿಮರಿಂದ ದೀಕ್ಷೆ ಪಡೆದರು, ಲಿಂಗ ತತ್ತ್ವವನ್ನು ಪ್ರಚಾರ ಮಾಡಿದರು. ಪೂಜ್ಯ ಲಿಂಗಾನಂದ ಅಪ್ಪಾಜಿಯವರಿಗೆ ಪ್ರೇರಣೆ ನೀಡಿದ್ದೇ ಪೂಜ್ಯ ಕುಮಾರ ಸ್ವಾಮಿಗಳ ಉಪನ್ಯಾಸಗಳು. ಅವರು ಬೋಧಿಸುತ್ತಿದ್ದ ಇಷ್ಟಲಿಂಗ ನಿಷ್ಠೆ, ಬಸವ ತತ್ತ್ವ ಮುಂತಾದ ವಿಚಾರಗಳಿಂದ ಪ್ರಭಾವಿತರಾದ 'ಸಂಗಮೇಶ' ಲಿಂಗಾನಂದ ಎಂಬ ಹೆಸರನ್ನಿಟ್ಟುಕೊಂಡು ಲಿಂಗ ತತ್ತ್ವ ಪ್ರಚಾರಕ್ಕೆ ಸಮರ್ಪಿತ ಚೇತನರಾದರು. ಪೂಜ್ಯ ಕುಮಾರ ಸ್ವಾಮಿಗಳು ಅನೇಕ ಜನರನ್ನು ಶರಣ ಪಥಕ್ಕೆ ಆಕರ್ಷಿಸಿದರು. ಆದರೆ ಕೆಲವು ಕಾಲದ ನಂತರ ಇದ್ದಕ್ಕಿದಂತೆಯೇ ಇಷ್ಟಲಿಂಗವನ್ನು ತೊರೆದು, ನವ ಕಲ್ಯಾಣ ಮಠವನ್ನು ಬಿಟ್ಟು-ತಮ್ಮ ವ್ಯಕ್ತಿ ಭಕ್ತಿಯ ಆಧಾರದ ಮೇಲೆ ತಪೋವನ ನಿರ್ಮಿಸಿದರು. ಇಂದು ಅದು ಕೋಟಿಗಟ್ಟಳೆಯ ಒಂದು ಆಸ್ತಿಯಾಯಿತೇ ಹೊರತು ಒಬ್ಬ ಜಂಗಮ ಮೂರ್ತಿಯೂ ಅದಕ್ಕೆ ಲಭ್ಯವಾಗಲಿಲ್ಲ. ನಡು ನೀರಲ್ಲಿದ್ದಾಗ ಕುಮಾರ ಸ್ವಾಮಿಗಳು ಈಜು ಬರದವ ದೋಣಿಯನ್ನು ದೂಡಿ, ಇಳಿದಂತಾಯಿತು. ಹೀಗಾಗಿ ಮೊದಲು ಇದ್ದ ಬಹುದೊಡ್ಡ ಇಷ್ಟಲಿಂಗ ನಿಷ್ಠರ ಬಳಗವು ದೂರ ಸರಿಯಿತು. ಹೊಸ ಲಿಂಗಾಯತೇತರರ ಬಳಗ ಆಕರ್ಷಿತವಾಗಲಿಲ್ಲ. ವ್ಯಕ್ತಿ-ಪೂಜೆ ಬೆಳಸಿ ಕೊಳ್ಳಬೇಕೆನ್ನುವವರಿಗೆ ಇದು ಬಹುದೊಡ್ಡ ಪಾಠ ಎಂದುಕೊಳ್ಳಬೇಕು. ಒಮ್ಮೆ ಒಬ್ಬ ವೃದ್ಧ ಹಣ್ಣಿನ ಗಿಡ ನೆಡುತ್ತಿದ್ದನಂತೆ. ಆಗ ಕೆಲವರು ಯುವಕರು ತಮಾಷೆ ಮಾಡಿದರು, "ಅಜ್ಜಾ ನಿನಗೆ ವೃದ್ಧಾಪ್ಯ, ಊರು ಹೋಗು ಎಂದು, (ಸುಡು) ಕಾಡು ಬಾ ಎಂದು ಕರೆಯುತ್ತಿದೆ, ಈಗೇಕೆ ಗಿಡ ನೆಡುತ್ತಿರುವೆ?"; ಆ ಮುದುಕ ಹೇಳಿದನಂತೆ,"ನನಗಾಗಿ ನಾನು ನೆಡುತ್ತಿಲ್ಲ ಮುಂದಿನ ಪೀಳಿಗೆಯವರು ತಿನ್ನಲಿ ಎಂದು ನೆಡುತ್ತಿರುವೆ." ಹಾಗೇ ನಾವುಗಳು (ನೀವು ಜಂಗಮ ಮೂರ್ತಿಗಳು) ಹಣಗಳಿಸಬೇಕು, ಕೀರ್ತಿ ಪಡೆಯಬೇಕು ಪೂಜಾರ್ಹರಾಗಬೇಕು ಎಂದು ಚಿಂತಿಸದೆ ಧರ್ಮಪಿತ ಬಸವಣ್ಣನವರು ನೆಟ್ಟ, ಶರಣರು ಪೋಷಿಸಿ ಬೆಳೆಸಿದ ನಮ್ಮ ಧರ್ಮದ ವೃಕ್ಷ ಬೆಳೆಯಬೇಕು, ವಿಸ್ತಾರಗೊಳ್ಳಬೇಕು; ಮುಂದಿನ ಪೀಳಿಗೆ ಅದರ ಫಲ ಪಡೆಯಬೇಕು ಎಂದು ಆಲೋಚಿಸಬೇಕು. ವ್ಯಕ್ತಿಗತ ಪಂಥಗಳು ಸತ್ತು ಹೋಗುತ್ತವೆ. ತತ್ತ್ವದ ಆಧಾರದ ಮೇಲೆ ಧರ್ಮವು ಎಂದೆಂದೂ ಉಳಿಯುತ್ತದೆ.

5. ವಚನೋಪದೇಶ ಮತ್ತು ವರ್ತನೋಪದೇಶ

ಉಪದೇಶಗಳಲ್ಲಿ 2 ಬಗೆ. ಒಂದು ವಚನೋಪದೇಶ ಇನ್ನೊಂದು ವರ್ತನೋಪದೇಶ. ವೇದಿಕೆಯ ಮೇಲೆ ಕುಳಿತು ಜನ ಮೆಚ್ಚುವಂತೆ ಮಾತನಾಡಿ, ವರ್ತನೆಯಲ್ಲಿ ಅದು ತೋರದಿದ್ದರೆ ಜನರ ಮೇಲೆ ಆ ಮಾತು ಪ್ರಭಾವ ಬೀರವು. ಸ್ವಲ್ಪ ಪ್ರಭಾವ ಬೀರಿದರೂ ನಂತರ ಸೂಕ್ಷ್ಮಗ್ರಾಹಿಗಳಾದ ಜನರು ವರ್ತನೆ ನೋಡಿ ಉದಾಸೀನ ತಾಳುವರು.

6.ಸಾಮಾನ್ಯವಾಗಿ ಬಸವ ಧರ್ಮ ಪೀಠಕ್ಕೆ ಸಾಧಕರಾಗಿ ಬರುವವರು ಆಸ್ತಿ ಪಾಸ್ತಿ ಹಣಕ್ಕಾಗಿ ತ್ಯಾಗ ಮಾಡಿದವರಲ್ಲ ಉದಾತ್ತ ಉದ್ದೇಶ ಇಟ್ಟುಕೊಂಡು ಬರುವವರು. ಯಾವ ಗುರಿಯನ್ನು ಇಟ್ಟುಕೊಂಡು ಬರುವಿರೋ ಆ ಗುರಿ ತಲ್ಪುವವರೆಗೆ ಅಚಲ ನಿಷ್ಠೆ ಹೊಂದಿರಬೇಕು, ಹೊಯ್ದಾಡಬಾರದು. ಜೀವನದ ಕಡೆಯ ಕ್ಷಣದವರೆಗೂ ಎಚ್ಚರಿಕೆಯಿಂದಿರಬೇಕು. ನಿಮ್ಮ ಮನಸು ಕಾರಣಾಂತರದಿಂದ ಹೊಯ್ದಾಡಿದರೂ ಸಂಸ್ಥೆಗಳನ್ನು ದುರ್ಬಲಗೊಳಿಸಬಾರದು. ಮುತ್ತು ರತ್ನಗಳೇ ಇದ್ದರೂ ಬಂಗಾರದ ಸೂತ್ರದಲ್ಲಿ ಬಂಧಿಸಿದ್ದರೆ ಅವಕ್ಕೆ ಬೆಲೆ, ಚೆಲ್ಲಾಪಿಲ್ಲಿಯಾಗಿದ್ದರೆ ಅವುಗಳ ಮಹತ್ವ ಗೋಚರವಾಗದು. ಹಾಗೆಯೇ ಸಂಸ್ಥೆಯ ಆಶ್ರಯದಲ್ಲಿ ಬೆಳೆದು ಸಾಧನೆಯಿಂದ ಕೀರ್ತಿಶಾಲಿಗಳಾಗುವ ಹಂಬಲವಿರಬೇಕು.

ಪೀಠಾರೋಹಣ ಸಂದೇಶದಲ್ಲಿ ಜಂಗಮ ಮೂರ್ತಿಗಳಿಗೆ ಬೋಧೆ ಮಾಡಿದ ನಂತರ ಶರಣ ಸಮೂಹಕ್ಕೂ ಕೆಲವು ಸೂಚನೆ ನೀಡಿದೆ.

1. ಬಸವ ಧರ್ಮ ಪೀಠವು ವೈಯಕ್ತಿಕ ಆಸೆ- ಆಕಾಂಕ್ಷೆಗಳಿಗಾಗಿ, ಪ್ರತಿಷ್ಠೆಗಾಗಿ ಸ್ಥಾಪನೆಯಾದುದಲ್ಲ ತತ್ವದ ಪ್ರತಿಷ್ಠಾಪನೆಗಾಗಿ ಆದುದು, ಸಮಾನತೆಯನ್ನು ಸ್ಥಾಪಿಸಲು ಆದುದು. ಮರವು ತಾನು ಬಿಸಿಲಿನಲ್ಲಿ ನಿಂತು ತನ್ನ ಕೆಳಗೆ ಇರುವವರಿಗೆ ನೆರಳು ನೀಡುವಂತೆ ಪೂಜ್ಯ ಲಿಂಗಾನಂದ ಅಪ್ಪಾಜಿ ತಾವು ಅಪಾರ ಕಷ್ಟ ನಷ್ಟ ಅನುಭವಿಸಿ ನಮಗೆ ಆಶ್ರಯ ಕೊಟ್ಟದ್ದು ಮಾತ್ರವಲ್ಲ, ತಾವು ಲಿಂಗಾಯತರಲ್ಲಿ ಪಂಚಮಸಾಲಿಯವರಲ್ಲಿ ಹುಟ್ಟಿಯೂ ಹುಟ್ಟು ಜಂಗಮರಲ್ಲ ಎಂದು ಅವರಿಗೆ ಜಂಗಮ ದೀಕ್ಷೆ ನಿರಾಕರಿಸಿದ ಸಂಪ್ರದಾಯವಾದಿಗಳಿಗೆ ಬಸವ ತತ್ತ್ವ ಪ್ರವಚನದ ಮೂಲಕ ಬುದ್ಧಿ ಕಲಿಸಿದ ದಿಟ್ಟ ಸನ್ಯಾಸಿ. ಯಾರು ಜಂಗಮ ಒಂದು ಜಾತಿ ಎಂದು, ಹುಟ್ಟು ಜಂಗಮರಿಗೆ ಮಾತ್ರ ಮಠ,ಪೀಠ ಎನ್ನುತ್ತಿದ್ದವರು ಇಂದು ಎಲ್ಲ ಜಾತಿಗಳವರಿಗೂ ಮಠ,ಪೀಠ ಮಾಡಲು ತೊಡಗಿರುವುದರ ಹಿಂದಿನ ಸಿಂಹ ಧ್ವನಿ ಪೂಜ್ಯ ಲಿಂಗಾನಂದ ಅಪ್ಪಾಜಿ. ಈ ತತ್ವದ ಅನುಷ್ಠಾನಕ್ಕಾಗಿಯೇ ಬಸವ ಧರ್ಮದ ಮಹಾ ಜಗದ್ಗುರು ಪೀಠ ಆಗಿರುವುದು.

2. ವಿದ್ಯುತ್ ಗ್ರಾಹಕ ಕೇಂದ್ರಗಳೂ ನಾಡಿನಾದ್ಯಂತ ಇವೆ. ಮುಖ್ಯ ಕೇಂದ್ರ (MRS) ಶಿವಮೊಗ್ಗದಲ್ಲಿದೆ.ಜೋಗದಲ್ಲಿ ವಿದ್ಯುತ್ ಉತ್ಪಾದನೆಯಾಗುತ್ತದೆ. 12ನೆಯ ಶತಮಾನದ ಅನುಭವ ಮಂಟಪದಲ್ಲಿ ವಿಶ್ವ ಧರ್ಮದ ವಿದ್ಯುತ್ ಉತ್ಪಾದನೆಯಾಯಿತಾದರೂ ಅದನ್ನು ಸ್ವೀಕರಿಸಿ ನಾಡಿನಾದ್ಯಂತ ತಲುಪಿಸುವ ಕೇಂದ್ರ ಇಲ್ಲದ್ದರಿಂದ ನೂರಾರು ಸಾವಿರಾರು ಮಠಗಳು ಇದ್ದೂ ಸಹ ಲಿಂಗಾಯತ ಸಮಾಜ ಕತ್ತಲೆಯಲ್ಲಿ ಉಳಿಯಿತು. ಈ ಕೊರತೆ ತಪ್ಪಿಸಲು ಕೂಡಲ ಸಂಗಮದಲ್ಲಿ ಬಸವ ಧರ್ಮದ ಮಹಾ ಜಗದ್ಗುರು ಪೀಠವನ್ನು ಸ್ಥಾಪಿಸಲಾಗಿದೆಯೇ ವಿನಾ ಬೆಳ್ಳಿ-ಬಂಗಾರದ ಪೀಠ ಮಾಡಿಕೊಳ್ಳಲು, ಬಂಗಾರ-ವಜ್ರದ ಕಿರೀಟವಿಟ್ಟುಕೊಳ್ಳಲು, ಅಡ್ಡ ಪಲ್ಲಕ್ಕಿಯಲ್ಲಿ ಮೆರೆಯಲು ಅಲ್ಲ.

3. ಸಮಾಜವು 850 ವರ್ಷಗಳ ಕಾಲ ತಪ್ಪು ದಾರಿಯಲ್ಲಿ ನಡೆದಿದೆ. ಆ ತಪ್ಪು ಪುನಃ ಘಟಿಸಬಾರದೆಂದು ಷಟ್‌ಸೂತ್ರಗಳನ್ನು ನೀಡಲಾಗಿದೆ. ಶರಣ ಬಂಧುಗಳೇ, ಷಟ್ ಸೂತ್ರಗಳನ್ನು ಕೈ ಬಿಡಬೇಡಿ. ಧರ್ಮಗುರು ನಿಷ್ಠೆ- ಧರ್ಮಶಾಸ್ತ್ರ ನಿಷ್ಠೆ - ಧರ್ಮಕ್ಷೇತ್ರ ನಿಷ್ಠೆ ತಪ್ಪದೆ ಬೆಳೆಸಿಕೊಳ್ಳಿರಿ.

4."ಲಕ್ಷಗಾವುದ ದೂರವಾದರೆಯೂ ಹೋಗಿ ಭಕ್ತ ಭಕ್ತನ ಕಾಂಬುದು ಸದಾಚಾರ; ಕರ್ತನಾಗಿ ಕಾಲ ತೊಳೆಯಿಸಿಕೊಂಡರೆ ಹಿಂದೆ ಮಾಡಿದ ಭಕ್ತಿಗೆ ಹಾನಿ; ಅಲ್ಲಿ ಕೂಡಿ ದಾಸೋಹವ ಮಾಡಿದೊಡೆ ಕೂಡಿಕೊಂಡಿಪ್ಪ ನಮ್ಮ ಲಿಂಗದೇವ "ಎಂಬ ಧರ್ಮಪಿತರ ವಾಣಿಯನ್ನು ಅನುಷ್ಠಾನಕ್ಕೆ ತರಲು ಶರಣ ಮೇಳವನ್ನು ಮಾಡಲಾಗುತ್ತಿದೆ.

ಶರಣ ಮೇಳ, ಕಲ್ಯಾಣ ಪರ್ವಗಳಿಗಾಗಿ ನೀವು ಕಾಯುತಿರ್ತಬೇಕು, ಶರಣ ಬಂಧುಗಳನ್ನು ಭೇಟಿಯಾಗಲು ಕಾತರಿಸಬೇಕು.

ಮನ ಮನ ಬೆರಸಿದಲ್ಲಿ ತನು ಕರಗದಿದ್ದಡೆ,
ಸೋಂಕಿನಲ್ಲಿ ಪುಳಕಂಗಳು ಹೊರಹೊಮ್ಮದಿದ್ದಡೆ,
ಕಂಡಾಗಳಶ್ರುಜಲಂಗಳು ಸುರಿಯದಿದ್ದಡೆ,
ನುಡಿವಲ್ಲಿ ಗದ್ಗದ ಪೊಣ್ಮದಿದ್ದಡೆ,
ಲಿಂಗದೇವರ ಭಕ್ತಿಗಿದು ಚಿಹ್ನವೆ?
ಎನ್ನಲ್ಲಿ ಇಲ್ಲಾಗಿ, ಆನು ಡಂಬಕ ಕಾಣಿರೆ! (ಬ.ವ.ದೀ 379)

ಶರಣರನ್ನು ಭೇಟಿಯಾದಾಗ ನಮಗೆ ಹರ್ಷವಾಗಬೇಕು.ಆನಂದಾಶ್ರುಗಳು ಸುರಿಯಬೇಕು; ತನುಮನ ಪುಳಕಿತವಾಗಬೇಕು. ಶರಣ ಮೇಳದಲ್ಲಿ ಪರಸ್ಪರ ಪರಿಚಯವಾದ ಕೆಲವರು ಇಂಥ ಅನುಭವ ಪಡೆಯುವುದಲ್ಲದೆ, ಮುಂದಿನ ಶರಣ ಮೇಳ ಯಾವಾಗ ಬರುತ್ತದೆಯೋ ಎಂದು ಪರಿತಪಿಸುವರು.

ಅಯ್ಯಾ, ನಿಮ್ಮ ಶರಣರ ದಾಸೋಹಕ್ಕೆ
ಎನ್ನ ತನು-ಮನ-ಧನ ಅಲಸದಂತೆ ಮಾಡಯ್ಯಾ.

ತನು ದಾಸೋಹಕ್ಕೆ ಉಬ್ಬುವಂತೆ ಮಾಡು;
ಮನ ದಾಸೋಹಕ್ಕೆ ಲೀಯವಹಂತೆ ಮಾಡು,
ಧನ ದಾಸೋಹಕ್ಕೆ ಸವೆದು, ನಿಮ್ಮ ಶರಣರ ಪ್ರಸಾದದಲ್ಲಿ
ನಿರಂತರ ಆಡಿ, ಹಾಡಿ, ನೋಡಿ, ಕೂಡಿ, ಭಾವಿಸಿ, ಸುಖಿಸಿ,
ಪರಿಣಾಮಿಸುವಂತೆ ಮಾಡು, ಲಿಂಗದೇವ. (ಬ.ವ.ದೀ 456)

ಶರಣ ಬಂಧುಗಳೊಡನೆ ಆಡಿ, ಹಾಡಿ, ನೋಡಿ, ಕೂಡಿ, ಭಾವಿಸಿ, ಸುಖಿಸಿ, ಸಂತೋಷ ಪಡಬೇಕೆಂದು ಧರ್ಮಪಿತರು ಹೇಳುತ್ತಾರೆ.

5. ಧರ್ಮಪಿತರ ಆಶಯದಂತೆ ಶರಣ ಬಂಧುಗಳು ಒಂದೆಡೆ ಸೇರಲೆಂದು ಶರಣ ಮೇಳ (ಕಲ್ಯಾಣ ಪರ್ವ) ಮಾಡಲಾಗುತ್ತಿದೆ. ಇವೆರಡೂ ಕಡ್ಡಾಯ (Compulsory) ವಾಗಬೇಕು. ಇನ್ನಿತರ ಕಡೆ ನಾವು ಸಮ್ಮೇಳನಗಳನ್ನು ಮಾಡಿದಾಗ ಅವು Optional ಐಚ್ಛಿಕ. ಎಲ್ಲರಿಗೂ ದೀಕ್ಷೆ ಕೊಡುವ ಮನೋಭಾವ ಉಳ್ಳ ವಿಶ್ವಧರ್ಮಗಳು ಭಾಷೆ, ದೇಶಗಳ ಗಡಿದಾಟಿ ಬೆಳೆಯುವುದರಿಂದ ಅಂಥ ಅನುಯಾಯಿಗಳನ್ನು ಒಂದೆಡೆ ಸೇರಿಸಲೆಂದೇ "ಹಜ್" ರೂಪುಗೊಂಡಂತೆ, ಶರಣ ಮೇಳವು ಸಹ ರೂಪುಗೊಂಡಿದೆ. ಹೀಗಿದ್ದಾಗ ಸಣ್ಣ ಸಣ್ಣ ಭಿನ್ನಾಭಿಪ್ರಾಯ, ಅಹಂಕಾರ, ಅಭಿಮಾನ, ಮುಂದು ಮಾಡಿಕೊಂಡು ಶರಣ ಮೇಳಕ್ಕೆ ಬರುವುದನ್ನು ತಪ್ಪಿಸಬೇಡಿರಿ.

ನಮ್ಮ-ನಿಮ್ಮ ನಡುವೆ ಇರುವುದು ಯಾಂತ್ರಿಕ ಸಂಬಂಧವಲ್ಲ, ಹೃದಯಾಂತರಾಳದಿಂದ ಮೂಡಿರುವ ಆತ್ಮೀಯ ಸಂಬಂಧ. ಇಲ್ಲಿ ಕೇವಲ ಗೌರವ ಪೂರ್ಣವಾದ ಭಕ್ತಿ ಮಾತ್ರವಲ್ಲ, ಹೃದಯದ ಅಂತರಾಳದಿಂದ ಮೂಡುವ ಆತ್ಮೀಯ ಭಾವನಾತ್ಮಕ ಬೆಸುಗೆ ಇದೆ. ನೀವು ಬರದೆ ಇದ್ದಾಗ ನಮಗೆ ಬಹಳ ದುಗುಡ, ಕಳವಳವಾಗುತ್ತದೆ. ವರ್ಷಕ್ಕೊಮ್ಮೆಯಾದರೂ ಪರಸ್ಪರ ಭೇಟಿಯಾಗುತ್ತೇವೆ ಎಂಬ ನಿರೀಕ್ಷೆ ಇರುತ್ತದೆ. ಅದು ಹುಸಿಯಾದಾಗ ತುಂಬ ವ್ಯಥೆಯಾಗುತ್ತದೆ. ನಮ್ಮ ಒಬ್ಬ ಆತ್ಮೀಯ ಶಿಷ್ಯೆ (ಕಮಲಾ) ಎಷ್ಟೋ ವರ್ಷಗಳಿಂದ ಭೇಟಿಯಾಗಿರಲಿಲ್ಲ ಮನಸ್ಸು ಚಟಪಟಿಸುತ್ತಿತ್ತು. ಇಂದು ಬಂದು ಭೇಟಿಯಾದಾಗ ಹೇಳತೀರದಷ್ಟು ಆನಂದವಾಯಿತು.

6. ನಮ್ಮ ಸಂಸ್ಥೆ ಧರ್ಮ ಪ್ರಚಾರಕರ ತರಬೇತಿ ಕೇಂದ್ರ; ಎಷ್ಟೋ ಜನ ಆಶ್ರಯ, ತರಬೇತಿ, ಸ್ಥಾನಮಾನ ಹೊಂದುತ್ತಾರೆ. ಕೆಲವರು ನಾನಾ ಕಾರಣಗಳಿಂದ ಸಂಸ್ಥೆಯಿಂದ ಹೊರಹೋಗುತ್ತಾರೆ. ಹೋದವರು ತಮ್ಮ ಪಾಡಿಗೆ ತಾವು ಇರುವುದಿಲ್ಲ. ಕೆಲವರು ತಮ್ಮ ಪಾಡಿಗೆ ತಾವು ಇರುತ್ತೇವೆಂದರೂ (ಕದನ) ಕುತೂಹಲಿಗಳು, ವಿಘ್ನಸಂತೋಷಿಗಳೂ ಆದವರು ಬಿಡದೆ ಕಾರಣವನ್ನು ಕೆದಕಿ ಕೇಳುತ್ತಿರುತ್ತಾರೆ. ಮಾನವನ ಸಹಜ ಸ್ವಭಾವದಂತೆ ತನ್ನ ತಪ್ಪು ದೋಷ, ದೌರ್ಬಲ್ಯಗಳನ್ನು ಯಾರೂ ಹೇಳಿಕೊಳ್ಳುವುದಿಲ್ಲ. ಆಗ ಸಂಸ್ಥೆಯ ಮೇಲೆ ತಪ್ಪು ಹೊರಿಸಲು ತೊಡಗುತ್ತಾರೆ. ಇದನ್ನು ಆಲಿಸಿದ ಕೆಲವು ಭಕ್ತರು ಬರುವುದನ್ನು ಬಿಡುತ್ತಾರೆ. ಅದತ್ತಲಿರಲಿ, ಶರಣ ಮೇಳಕ್ಕೆ ಬರುವುದನ್ನೂ ಬಿಡುತ್ತಾರೆ. ಆದ್ದರಿಂದ ನಾನು ನಿಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದು ಇಷ್ಟೆ, 850 ವರ್ಷಗಳ ಅವಧಿಯಲ್ಲಿ ಯಾವ ತಪ್ಪಿನಿಂದ ಈ ಧರ್ಮ- ಸಮಾಜಗಳು ಶಿಥಿಲಗೊಂಡಿವೆಯೋ ಅವನ್ನು ಗುರುತಿಸಿ, ಪರಿಹಾರವನ್ನು ಹುಡುಕಲಾಗುತ್ತಿದೆ. ಆದ್ದರಿಂದ ನಾವು ನಿಮಗೆ ಬೇಡವಾದರೂ ಶರಣ ಮೇಳಕ್ಕೆ ಬರುವುದನ್ನು ಮಾತ್ರ ನಿಲ್ಲಿಸಬೇಡಿರಿ. ಇದನ್ನು ತಪ್ಪದೆ ಪಾಲಿಸಿರಿ. (ಈ ಮಾತುಗಳನ್ನು ಹೇಳಿದಾಗ ಬಹಳ ಜನರಿಗೆ ಹೃದಯವು ತಟ್ಟಿದಂತಾಗಿ ಕಣ್ಣೀರು ಹಾಕಿದರಂತೆ) ಈ ಬೃಹತ್ ಶರಣ ಮೇಳವು ವರ್ಷದಿಂದ ವರ್ಷಕ್ಕೆ ವಿಸ್ತಾರಗೊಂಡು ಬೆಳೆಯುತ್ತಿದೆ. ಈ ಯಶಸ್ಸಿನ ಹಿಂದೆ ಪೂಜ್ಯ ಅಪ್ಪಾಜಿಯವರ ಸುಮಾರು 40 ವರ್ಷಗಳ (1956-1995) ಮತ್ತು ನಮ್ಮ (1966-) 40 ವರ್ಷಗಳ ತಪಸ್ಸು ಮತ್ತು ಪರಿಶ್ರಮವಿದೆ. ಇದೊಂದು ಜಾತ್ರೆಯಲ್ಲ ಇಡೀ ಸಮಾಜಕ್ಕೆ ಸಂಸ್ಕಾರ ನೀಡುವ ಸಮಾವೇಶ! ಇದನ್ನು ಅರ್ಥಮಾಡಿಕೊಂಡು ನಿರಂತರವಾಗಿ ಇದು ನಡೆಯಬೇಕು ಎಂಬಂತೆ ನೀವೆಲ್ಲಾ ಶ್ರಮಿಸಬೇಕು.

7. ಹಿಂದು ಸಂಸ್ಕೃತಿಯಲ್ಲಿ ಇರುವ ಒಂದು ದೋಷ ಲಿಂಗಾಯತ ಸಮಾಜದಲ್ಲೂ ಬಂದಿದೆ. ಅದೆಂದರೆ ಸಂತರುಗಳು ವೈಯಕ್ತಿಕವಾಗಿ ಬೆಳೆಯಬೇಕು; ವೈಯಕ್ತಿಕವಾಗಿ ಸಂಸ್ಥೆಗಳನ್ನು ಕಟ್ಟಬೇಕು ಎಂಬ ಹವ್ಯಾಸ. ಆರ್. ಎಸ್. ಎಸ್ ಮಾತ್ರ ಇಂಥ ಮನೋಭಾವ ತಪ್ಪಿಸಿ ಒಂದು ತತ್ವ ಧ್ಯೇಯ, ರಾಷ್ಟ್ರಕ್ಕಾಗಿ ದುಡಿಯುವ ಜನ ಸಮೂಹವನ್ನು ತಯಾರು ಮಾಡುತ್ತಿದೆ. ರಾಷ್ಟ್ರೀಯ ಬಸವ ದಳವು ಸಹ ಧ್ಯೇಯವಾದಿಗಳನ್ನು ತಯಾರು ಮಾಡಬೇಕೆಂದು ನಮ್ಮ ಹಂಬಲ. ಕೆಲವು ಭಕ್ತರು ಸಂಸ್ಥೆಯನ್ನು ಬಿಟ್ಟು ಹೋದವರ ಮಾತು ನಂಬಿ ತಲೆ ಕೆಡಿಸಿಕೊಳ್ಳುತ್ತಾರೆ. ಕೆಲವು ಕಾಲಾನಂತರ ಪಶ್ಚಾತ್ತಾಪ ಪಟ್ಟು ಪುನಃ ಬರುತ್ತಾರೆ. ಇವರ ಅರೆಬರೆ ನಿಷ್ಠೆ ನೋಡಿ ಮತ್ತೆ ಕೆಲವು ನಿಷ್ಠಾವಂತರು ಅವರ ಮೇಲೆ ಸಂಶಯ ಪಡುತ್ತಾರೆ. ಅಂಥವರ ನಿಷ್ಠೆ ಸಸಿಯೊಂದನ್ನು ಕಿತ್ತು ಕಿತ್ತು ಹಚ್ಚಿದಂತೆ. ಅದು ಬೇರೂ ಬಿಡದು ಮೇಲೆ ಫಲವನ್ನೂ ತಳೆಯದು. "ಲಿಂಗದೇವ" ಪ್ರಸಂಗದಲ್ಲಿಯೂ ಹೀಗೆಯೇ ಕೆಲವರು ದುಡುಕಿದರು. ಈಗ ತೀವ್ರ ಪಶ್ಚಾತ್ತಾಪ ಪಟ್ಟು "ಮರಳಿ ತವರಿಗೆ" ಬರಬೇಕೆಂದು ಹಂಬಲಿಸುತ್ತಿದ್ದಾರೆ. ಕೆಲವರನ್ನು ಕ್ಷಮಿಸಲು ಮನಸ್ಸು ನಮಗೂ ಒಪ್ಪದು; ನಾವು ಒಪ್ಪಿಕೊಂಡರೂ ನಿಷ್ಠಾವಂತರಾದ ಕೆಲವು ಶರಣರು ಒಪ್ಪುವುದಿಲ್ಲ. ಇದು ನಮಗೆ ಸಂದಿಗ್ಧತೆ ಉಂಟು ಮಾಡಿದೆ. ಏನೇ ಇರಲಿ, ಯಾರೇ ಇರಲಿ ಅವರ ಪಾಡಿಗೆ ಅವರು ಬಂದು ಶರಣ ಮೇಳದಲ್ಲಿ ಭಾಗಿಯಾಗಿ ಹೋಗಲು ಯಾರ ಅನುಮತಿಗೂ ಕಾಯಬೇಕಾಗಿಲ್ಲ. ಏಕೆಂದರೆ ಶರಣ ಮೇಳ ಎಲ್ಲರನ್ನು ಒಟ್ಟುಗೂಡಿಸುವ "ತವರಿನ ಹಬ್ಬ."

8. ಒಮ್ಮೆ ಹೀಗೆ ನಡೆಯಿತು. ಅವಕಾಶ ಕೊಟ್ಟು, ಬೆಳಸಿ, ಸ್ಥಾನಮಾನ ನೀಡಿ ನಂತರ ತೊಂದರೆ ಅನುಭವಿಸುವುದು ನಮಗೆ ಹೊಸದೇನಲ್ಲ. ಆಗ ಈ ರೀತಿ ಹೊರ ಹೋದವರು ಲಿಂ॥ ಶರಣೆ ವನಜಾಕ್ಷಮ್ಮ ಓಂಕಾರ ಸ್ವಾಮಿಯವರ ಬಳಿ ಹೋಗಿ ಅವರನ್ನು ವಿಚಲಿತಗೊಳಿಸಲು ಯತ್ನಿಸಿದರಂತೆ. ಆಗ ಅವರು ಒಂದೇ ಸಾಲಿನ ಉತ್ತರವನ್ನು ನೀಡಿದರಂತೆ, "ನಾವು ಸಮುದ್ರ ನೋಡಿ ಬಂದಿದ್ದೇವೆಯೇ ವಿನಾ ನಿಮ್ಮಂತಹ ಬಂದು ಹೋಗುವ ಅಲೆಗಳನ್ನಲ್ಲ." ವನಜಾಕ್ಷಮ್ಮ ಮತ್ತು ಅವರ ಪರಿವಾರದವರು ಅದೇ ಏಕ ನಿಷ್ಠೆಯ ದಾರಿಯಲ್ಲಿ ಸಾಗಿದರು. ಅದೇ ಸಮಯದಲ್ಲಿ ವಿಚಲಿತರಾದ ಶರಣೆ. ಡಾ॥ ಸುಶೀಲಮ್ಮ ನಮ್ಮ ಸಂಸ್ಥೆಯಿಂದ ದೂರ ಸರಿದರು. ಆದರೆ ಪುನಃ (ತಡವಾಗಿ) ಬಂದು ಸೇರಿ ಪಶ್ಚಾತ್ತಾಪ ಪಡದ ದಿನವಿಲ್ಲ. ಈಗ ಪೂನಾದಲ್ಲಿ ನೆಲೆಸಿದ್ದಾರೆ. ವಾರಕ್ಕೆ 2 ಬಾರಿ ಫೋನ್ ಮಾಡುತ್ತಾರೆ, ದುಃಖಿಸುತ್ತಾರೆ. "ಸಂಸ್ಥೆ ವಿಸ್ತಾರವಾಗಿ ಬೆಳವಣಿಗೆಯಾಗುವ ಹಂತದಲ್ಲಿ ನಾವು ಎಂಥ ಭಾಗ್ಯ ಕಳೆದುಕೊಂಡೆವು! ಈಗ ವೃದ್ಧಾಪ್ಯ ನಿಸ್ಸಹಾಯಕಳು. ತೀವ್ರವಾಗಿ ಪಶ್ಚಾತ್ತಾಪವಾಗುತ್ತಿದೆ. ಆ ಪಾಪಿಯ ಮಾತು ಕೇಳಿ ಹಾಳಾದೆವು." ಎಂದು ಓರ್ವ ದೊಡ್ಡ ಮನುಷ್ಯನನ್ನು ಬೈಯುತ್ತಾರೆ. ಪುನಃ ಉದಾರವಾಗಿ ಬಸವ ಕಲ್ಯಾಣಕ್ಕಾಗಿ ಕಾಣಿಕೆ ನೀಡಿದ್ದಾರೆ, ನೀಡುತ್ತಲಿದ್ದಾರೆ. ನಿಜ, ಏಕೋ ಕೆಲವು ಕ್ಷಣಗಳಲ್ಲಿ ಕೆಲವರು ತಪ್ಪು ನಿರ್ಧಾರ ತೆಗೆದುಕೊಳ್ಳುತ್ತಾರೆ. ಇದಕ್ಕೇ ವಿಧಿ (Fate) ಅನ್ನುವರೇನೋ! ಮತ್ತೆ ಕೆಲವರು ಶರಣ ಮೇಳಕ್ಕಾಗಿ ಕಾಣಿಕೆ ಸಂಗ್ರಹಿಸುತ್ತಿದ್ದವರು, ಬಂದು ಸೇವೆ ಮಾಡುತ್ತಿದ್ದವರು ಅಸಹಕಾರ ಮಾಡಲು ಬಯಸಿದ್ದಲ್ಲದೆ ಕಾಣಿಕೆ ಸಂಗ್ರಹಿಸಲಿಲ್ಲ, ಸೇವೆಗೆ ಬರಲಿಲ್ಲ. ತನ್ನ ಕೋಳಿ ಕೂಗದೆ ಇದ್ದರೆ ಬೆಳಗಾಗುವುದಿಲ್ಲ ಎಂಬ ಅಜ್ಜಿಯ ಧೋರಣೆ ಪ್ರದರ್ಶಿಸುತ್ತಿದ್ದರು. ನಾನು ಮಾತ್ರ ಧರ್ಮಪಿತರಿಗೆ ಹೇಳಿದೆ.

ಮಾಡುವಾತ ನಾನಲ್ಲಯ್ಯ, ನೀಡುವಾತ ನಾನಲ್ಲಯ್ಯ,
ಬೇಡುವಾತ ನಾನಲ್ಲಯ್ಯ, ನಿಮ್ಮ ಕಾರುಣ್ಯವಲ್ಲದೆ,
ಎಲೆ ದೇವಾ, ಮನೆಯ ತೊತ್ತಲಸಿದಡೆ ಒಡತಿ ಮಾಡಿಕೊಂಬಂತೆ,
ನಿನಗೆ ನೀ ಮಾಡಿಕೋ ಲಿಂಗದೇವಾ. (ಬ.ವ.ದೀ. 827)

"ನೀವೇ ಹೇಳಿರುವಂತೆ ನಿಮ್ಮ ಕಾರ್ಯವನ್ನು ನೀವು ಮಾಡಿಸಿ ಕೊಳ್ಳುತ್ತಿದ್ದೀರಿ. ನಾನು ಖಂಡಿತಾ ಟೆನ್ಷನ್ ಮಾಡಿಕೊಳ್ಳುವುದಿಲ್ಲ" ಎಂದು ನಿರುಮ್ಮಳವಾಗಿಯೇ ಇದ್ದೆ. ಧಾರವಾಡದಲ್ಲಿ ಕೋಳಿ ಮೊಟ್ಟೆ ಯೋಜನೆ ವಿರೋಧಿಸಿ ದಿ: 8-1-2007 ರಂದು ಪ್ರತಿಭಟನಾ ಪ್ರದರ್ಶನ ಬೇರೆ ಇತ್ತು. ಅದನ್ನು ಮುಗಿಸಿ

ದಿ: 8ರ ರಾತ್ರಿಗೆ ಕೂಡಲ ಸಂಗಮಕ್ಕೆ ಬಂದೆ; ಹಿಂದಿನ ಎಲ್ಲಾ ಶರಣ ಮೇಳಗಳಿಗಿಂತ ಹೆಚ್ಚು ಅಚ್ಚುಕಟ್ಟಾಗಿ, ಹೆಚ್ಚು ಜನರನ್ನು ಆಕರ್ಷಿಸಿ ಅತ್ಯಂತ ಹರ್ಷದಾಯಕವಾಗಿ ಶರಣ ಮೇಳ ನಡೆಯುತ್ತಿದೆ ಎಂಬುದು ನಿಮಗೆಲ್ಲ ಮನವರಿಕೆಯಾಗುತ್ತಿದೆಯಲ್ಲವೆ? ಆದ್ದರಿಂದ ಪ್ರತಿಯೊಬ್ಬರೂ ತನು,ಮನ, ಧನ, ಸಮಯ ಅರ್ಪಿಸಿ ಶರಣ ಮೇಳಕ್ಕೆ ದುಡಿದು, ಇದರಲ್ಲಿ ಭಾಗಿಗಳಾಗಿ ನಿಮ್ಮ ಜೀವನವನ್ನು ಸಾರ್ಥಕಮಾಡಿಕೊಳ್ಳಬೇಕು ಎಂಬ ಹಂಬಲ ಹೊಂದಿರಬೇಕೇ ವಿನಾ ನಮ್ಮಿಂದಲೇ ನಡೆಯುತ್ತಿದೆ ಎಂದು ಭಾವಿಸಬಾರದು. ನೀವಷ್ಟೆ ಅಲ್ಲ ನಾನೂ ಸಹ ನನ್ನಿಂದಲೇ ನಡೆಯುತ್ತಿದೆ ಎಂದು ಅಹಮಿಸಬಾರದು. ಆದಿ ಶರಣರ ಸಂಕಲ್ಪದಂತೆ ಶರಣ ಮೇಳವು ನಡೆಯುತ್ತಿದೆ. ನಮಗೆ ಸೇವೆ ಮಾಡುವ ಭಾಗ್ಯ ಲಭಿಸಿದೆ ಎಂದು ವಿನಮ್ರವಾಗಿ ಭಾವಿಸಬೇಕು.

ಒಮ್ಮೆ ಒಂದು ನಾಯಿ ಬಂಡಿಯ ನೆರಳಲ್ಲಿ ಹೋಗುತ್ತಿತ್ತು. ಅದಕ್ಕೆ ಇದ್ದಕ್ಕಿದ್ದಂತೆಯೇ ಒಂದು ಹಮ್ಮಿನ ಆಲೋಚನೆ ಬಂದಿತು. ನಾನೇ ಈ ಬಂಡಿಯನ್ನು ಎಳೆಯುತ್ತಿದ್ದೇನೆ ಎಂದು ಅದು ಗಾಡಿ ಹೊಡೆಯುವವನಿಗೆ ಬುದ್ಧಿ ಕಲಿಸಬೇಕೆಂದು ಬಂಡಿಯ ನೆರಳು ಬಿಟ್ಟು ದೂರ ಹೋಯಿತು. ಮೌನವಾಗಿ ಎಳೆಯುತ್ತಿದ್ದ ಎತ್ತುಗಳು ಬಂಡಿಯನ್ನು ಎಳೆದುಕೊಂಡು ಹೋಗಿ ಬಿಟ್ಟವು, ಗಾಡಿ ಮುಂದೆ ಸಾಗಿತು. ಒಂದು ತೇರು ಇರುತ್ತದೆ ಅದಕ್ಕೆ ಉದ್ದನೆಯ ಹಗ್ಗ ಕಟ್ಟಿರುತ್ತಾರೆ. ಜನ ಸಮೂಹ ತೇರನ್ನು ಎಳೆದೇ ಎಳೆಯುತ್ತದೆ. ನಾನು ಎಳೆಯಲ್ಲ ಎಂದು ಯಾವನಾದರೂ ದೂರ ನಿಂತರೆ ಅವನಿಗೆ ಆ ಭಾಗ್ಯ ತಪ್ಪಿ ಹೋದಂತೆಯೇ ವಿನಾ ತೇರಿಗಲ್ಲ. ತೇರು ಸಾಗಿ ಪಾದಗಟ್ಟೆಯನ್ನು ಮುಟ್ಟಿಯೇ ಮುಟ್ಟುತ್ತದೆ.

ಆದ್ದರಿಂದ ಶರಣ ಬಂಧುಗಳೇ ಪ್ರತಿಯೊಬ್ಬರೂ ತಪ್ಪದೇ ಶರಣ ಮೇಳಕ್ಕೆ, ಕಲ್ಯಾಣ ಪರ್ವಕ್ಕೆ ಬನ್ನಿರಿ. ನಿಮ್ಮ ಬಂಧುಮಿತ್ರರನ್ನು ಕರೆತನ್ನಿ. ನಿಮ್ಮ ನಿಮ್ಮ ಕೆಲಸಗಳನ್ನು ಸಕಾಲದಲ್ಲಿ ಬಂದು ವಹಿಸಿಕೊಂಡು ಸೇವೆ ಮಾಡಿರಿ. ರಸೀತಿ ಪುಸ್ತಕ ಇಟ್ಟುಕೊಂಡು ದೇಣಿಗೆ ಸಂಗ್ರಹಿಸಿ ತನ್ನಿರಿ. ರಸೀತಿ ಪುಸ್ತಕವನ್ನು ಸಂಸ್ಥೆಯಿಂದ ಕಳಿಸಲು ಮರೆತಿದ್ದರೆ ತರಿಸಿಕೊಂಡು ಸಂಗ್ರಹಿಸಿರಿ. ಕರಪತ್ರ, ಭಿತ್ತಿ ಪತ್ರ ತರಿಸಿಕೊಂಡು ಪ್ರಚಾರ ಮಾಡಿರಿ, ಪೆಂಡಾಲ್ ಕಾಂಟ್ರ್ಯಾಕ್ಟರ್ ಶಿವಾನಂದ ಮಾಸ್‌ಕರ್ ಡಿಸೆಂಬರ್ ಮೊದಲ ವಾರ ಫೋನ್ ಮಾಡಿ. "ನಿಮ್ಮಿಂದ ಪೆಂಡ್ಯಾಲ್ ಹಾಕುವ ಬಗ್ಗೆ ಆದೇಶ ಬರಲಿಲ್ಲವಲ್ಲ?" ಎಂದರು. "ಇನ್ನೇನು ಆದೇಶ, ಮನೆ ಮಕ್ಕಳಿಗೆ ಕೆಲಸ ಹೇಳಬೇಕೆ? ಸಮಯಕ್ಕೆ ಸರಿಯಾಗಿ ಬನ್ನಿರಿ, ಕೆಲಸ ಮಾಡಿರಿ." ಎಂದೆ. ಎಳೆಯ ಹೋರಿಗಳಿಗೆ ತರಬೇತಿ ಬೇಕು. ಕಾಯಕದಲ್ಲಿ ಪಕ್ವವಾಗಿರುವ ಎತ್ತುಗಳು ಇನ್ನೂ ಬಿಚ್ಚುವುದೇ ತಡ ಹೋಗಿ ನೇಗಿಲಿಗೆ, ನೊಗಕ್ಕೆ ಹೆಗಲು ಕೊಡುತ್ತವೆ. ಶರಣ ಮೇಳ ನಿಮ್ಮ ಮೇಳ, ಶರಣರಿಂದ ಶರಣರಿಗಾಗಿ ಶರಣರು ನಡೆಸುವ ಮೇಳ. ಇದು ನಿಮ್ಮದೇ ಮಹಾಮನೆಯ ಹಬ್ಬ

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಪೀಠಾಧ್ಯಕ್ಷರು, ಬಸವ ಧರ್ಮ ಪೀಠ, ಕೂಡಲ ಸಂಗಮ

ಕೋಳಿ ಮೊಟ್ಟೆ ವಿತರಣೆ-ಸುದ್ದಿ ತಿಳಿಸಿರಿ

ಶಿಕ್ಷಣ ಮಂತ್ರಿಗಳಾದ ಶ್ರೀ ಬಸವರಾಜ ಹೊರಟ್ಟಿಯವರ ಬಳಿಗೆ ದಿ.1-2-07ರಂದು ಹಲವಾರು ಮುಖಂಡರು ಹೋಗಿ ಭೇಟಿಯಾದಾಗ ಕೋಳಿ ಮೊಟ್ಟೆ ಕೊಡುವ ಯೋಜನೆ ಕೈ ಬಿಟ್ಟಿರುವುದಾಗಿ ಖಚಿತವಾಗಿ ಹೇಳಿದ್ದಲ್ಲದೆ ಎಲ್ಲಿಯದರೂ ಇದರ ಉಲ್ಲಂಘನೆ ನಡೆದು ವಿತರಣೆಯಾದರೆ ತಕ್ಷಣ ನಮಗೆ ತಿಳಿಸಿರಿ ಎಂದಿದ್ದಾರೆ. ಸಾರ್ವಜನಿಕರ ಗಮನಕ್ಕೆ ಬಂದರೆ ತಕ್ಷಣ ಅಲ್ಲಿ ಪ್ರತಿಭಟಿಸಬೇಕು; ನಮಗೆ ಮಾಹಿತಿ ಕೊಡಬೇಕು.

ದೂರವಾಣಿ: 9341626602/9448137508

> ವ್ಯಕ್ತಿ ಎಂದಿಗೂ ಕೂಡ ತನ್ನ ಮನಸ್ಸಿನ ದೌರ್ಬಲ್ಯಗಳನ್ನು ಮುಚ್ಚಿಕೊಳ್ಳಲಿಕ್ಕೆ ಇನ್ನೊಬ್ಬರ ಮೇಲೆ ಆರೋಪ ಹೊರಿಸಬಾರದು.

ಕೈಗೊಂಡಿ ಹೋರಾಟಕ್ಕೆ ಯಶಸ್ಸು

-ಮಾತಾಜಿ

ಭಾರತ ದೇಶವು ತನ್ನ ಆಂತರಿಕ ವೈರುಧ್ಯಗಳಿಂದ, ಅನೈಕ್ಯತೆಯಿಂದ ನಿರಂತರವಾಗಿ ಪರಕೀಯರ ಧಾಳಿಗೆ ತುತ್ತಾಗುತ್ತ ಬಂದಿದೆ. ಇದು ಮೊಟ್ಟ ಮೊದಲನೆಯ ಧಾಳಿಕಾರನಾದ ಅಲೆಕ್ಸಾಂಡರ್ ಜೊತೆ ಸೆಣಸಿ ಸೋಲನ್ನಪ್ಪಿದ ಧೀರ ಪುರೂರವನಿಂದ ಆರಂಭವಾಗಿ ಪೃಥ್ವಿರಾಜ- ಜಯಚಂದ್ರರ ಮೂಲಕ ಸಾಗಿ ನಂತರ ತುರುಷ್ಕರು, ಮೊಘಲರು, ಪೋರ್ಚುಗೀಸರು, ಫ್ರೆಂಚರು, ಬ್ರಿಟಿಷರು-ಮುಂತಾದವರವರೆಗೂ ಬಂದಿತು. ಭಾರತದ ಇತಿಹಾಸವು ಪರಕೀಯರ ಧಾಳಿ, ಸ್ವದೇಶೀಯರ ಸೋಲು ಇವುಗಳ ಕಥೆಯಿಂದಲೇ ಕೂಡಿರುವುದು ಪರಮ ಸತ್ಯ.ಇಂಥ ವಿಲಕ್ಷಣ ಧಾಳಿ, ಆಕ್ರಮಣಗಳ ಮಧ್ಯದಲ್ಲೂ ಸ್ವದೇಶಿ ಧರ್ಮ-ಸಂಸ್ಕೃತಿಗಳು ಉಳಿದಿರುವುದು ನಿಜಕ್ಕೂ ಆಶ್ಚರ್ಯಕರ ಸಂಗತಿಯೇ ಸರಿ. ತಮ್ಮ ಧರ್ಮಗಳನ್ನು ಜಗತ್ತಿನಾದ್ಯಂತ ವಿಸ್ತರಿಸುವ ಅತಿ ದಾಹ ಉಳ್ಳ ಮುಸಲೀಮ್, ಕ್ರೈಸ್ತರು (ಬಲವಂತವಾಗಿ ಮಾಂಸ ತಿನ್ನಿಸಿ, ಮಡಿವಂತ ಹಿಂದುಗಳು ಬಹಿಷ್ಕಾರಕ್ಕೆ ಒಳಗಾಗುವಂತೆ ಮಾಡಿದ ಪ್ರಸಂಗಗಳು ಇತಿಹಾಸದಲ್ಲಿ ಕಾಣ ಸಿಗುವವಾದರೂ) ಸಾರ್ವಜನಿಕವಾಗಿ ತಮ್ಮ ಅಧಿಕಾರ ಬಲ ಉಪಯೋಗಿಸಿ ಸಸ್ಯಾಹಾರಿಗಳಿಗೆ ಮೊಟ್ಟೆ, ಮೀನು, ಮಾಂಸ ತಿನ್ನಿಸಲಿಲ್ಲ. ಏಕೆಂದರೆ ಸಂಪ್ರದಾಯವಾದಿ ಜನರು ತಮ್ಮನ್ನು ತಾವು ಧಾರ್ಮಿಕವಾಗಿ ರಕ್ಷಿಸಿಕೊಳ್ಳುವ ಆಸಕ್ತಿ ಹೊಂದಿದ್ದರು.

ಪರಕೀಯ ಆಕ್ರಮಣ ಮತ್ತು ಆಡಳಿತದ ಅವಧಿಯಲ್ಲಿ ಕೆಡದಷ್ಟು ಧಾರ್ಮಿಕ ನಂಬಿಕೆ, ಆಚಾರ-ವಿಚಾರಗಳು ಸ್ವಾತಂತ್ರ್ಯಾನಂತರದ ದಿನಗಳಲ್ಲಿ, ಸ್ವದೇಶಿ ಪ್ರಭುಗಳು ಆಳುತ್ತಿರುವಾಗ ಕೆಡತೊಡಗಿವೆ. ಏಕೆಂದರೆ ಪರಕೀಯರು ಹೂವನ್ನು ಕೊಟ್ಟರೂ ಭಾರತೀಯರದನ್ನು ಹಾವೆಂದು ಸಂಶಯ ದೃಷ್ಟಿಯಿಂದ ನೋಡುತ್ತಿದ್ದರು. ಸ್ವದೇಶಿ ಪ್ರಭುಗಳು ಹಾವನ್ನು ಎಸೆದರೂ ಅದು ಹೂವೆಂದು ಭಾವಿಸುವ ದೇಶ ಭ(ಭು)ಕ್ತರ ಸಂಖ್ಯೆ ಜಾಸ್ತಿಯಾಗಿರುವ ಕಾರಣ, ದಿನದಿನಕ್ಕೆ ಧಾರ್ಮಿಕ ನಂಬಿಕೆಗಳು ಹೊಯ್ದಾಡ ತೊಡಗಿವೆ. ನಮ್ಮನ್ನಾಳುವ ಪ್ರಭುಗಳು ಚಿಂತನ ಶೀಲರಾದ ವೈಚಾರಿಕರೆ? ದಿನ ಬೆಳಗಾದರೆ ಗಿಡಮರ ಸುತ್ತುತ್ತ, ಮಠಾಧೀಶರ ಬುರುಡೇಘಟ್ಟದ ಜ್ಯೋತಿಷಿಗಳ ದರ್ಶನ ಪಡೆಯುತ್ತ, ಗುಡಿಗುಂಡಾರಗಳನ್ನು ಎಡಬಿಡದೆ ಸಂದರ್ಶಿಸುವ ಪ್ರಭೃತಿಗಳು ಆದರ್ಶ ಮೌಲ್ಯಗಳಲ್ಲಿ ನಂಬಿಕೆ ಇಡದುದು ಬಹಳ ಸೋಜಿಗದ ಸಂಗತಿ.

ಸಸ್ಯಾಹಾರ ಜೀವನ ಪದ್ಧತಿ ಒಂದು ಶ್ರೇಷ್ಠ ಆದರ್ಶ ಎಂದು ಇಡೀ ಜಗತ್ತು ಗುರುತಿಸುತ್ತಿದೆ, ಗೌರವಿಸುತ್ತಿದೆ. ಸಾಮಾನ್ಯವಾಗಿ ಮಾಂಸಾಹಾರಿ ಜನರ ಮದುವೆಗಳಲ್ಲಿ ಸಹ ಮಾಂಸಾಹಾರದ ಅಡಿಗೆ ಮಾಡಿಸದೆ, ಸಸ್ಯಾಹಾರಿ ಅಡಿಗೆ ಮಾಡಿಸುವರು.ದೇವಸ್ಥಾನಗಳಲ್ಲಿ ಬ್ರಾಹ್ಮಣೇತರರು, ಮಾಂಸಾಹಾರಿ ಜನಾಂಗದವರು ಪೂಜಾರಿಗಳಾಗಿರುವಲ್ಲಿ ಸಹ ಪ್ರಸಾದವನ್ನಾಗಿ ಸಸ್ಯಾಹಾರವನ್ನು ಕೊಡುವರೇ ವಿನಾ ಮಾಂಸದ ಅಡಿಗೆಯನ್ನಲ್ಲ. ಕಪನೂರು ಎಂಬಲ್ಲಿ ದರ್ಗಾದಲ್ಲಿ ಉರುಸು ನಡೆಯುವಾಗ ಮಾಲ್ದಿ ಪ್ರಸಾದ ಎಡೆ ಮಾಡುವರು. ಸುಪ್ರಸಿದ್ಧ ಅಜಮೀರ್ ದರ್ಗಾದಲ್ಲಿ ಬೃಹದಾಕಾರದ ಒಂದು ಪಾತ್ರೆಯಲ್ಲಿ ಸಜ್ಜಕದಂತಹ ಒಂದು ಬಗೆಯ ಪ್ರಸಾದ ಸಿದ್ಧಪಡಿಸುವರು, ಸಿಖ್ಖರಲ್ಲಿ ಸಸ್ಯಾಹಾರ ಕಡ್ಡಾಯವೇನಲ್ಲ, ಆದರೂ ಎಲ್ಲ ಗುರುದ್ವಾರಗಳಲ್ಲಿ ಶುದ್ಧ ಸಸ್ಯಾಹಾರದ ಅಡಿಗೆ ತಯಾರಾಗುವುದು.

ಆದಿ ಮಾನವ ತನ್ನ ಬದುಕಿಗಾಗಿ ಪ್ರಾಣಿಗಳನ್ನು ಬೇಟೆಯಾಡಿ ಕೊಂದು ತಿನ್ನುತ್ತಿದ್ದ. ಇಂದಿಗೂ ನಾಗರಿಕತೆಯ ಸ್ಪರ್ಶವಿಲ್ಲದೆ ಕೆಲವು ಬುಡಕಟ್ಟುಗಳ ಜನರು ಆಫ್ರಿಕಾದಲ್ಲಿ ಪ್ರಾಣಿಗಳನ್ನು ಕೊಂದು ನೇರವಾಗಿ ಅವುಗಳ ಮಾಂಸವನ್ನು ಕಚ್ಚಿ ತಿನ್ನುವ, ರಕ್ತನಾಳಕ್ಕೆ ಬಾಯಿ ಹಾಕಿ ರಕ್ತವನ್ನು ಕುಡಿಯುವ ಬೀಭತ್ಸ ದೃಶ್ಯಗಳನ್ನು ಸಾಕ್ಷ್ಯ ಚಿತ್ರಗಳಲ್ಲಿ ನೋಡಲು ಸಾಧ್ಯ. ಒಮ್ಮೆ ಕಾಡಿಗೆ ಬೆಂಕಿ ಬಿದ್ದು ಪ್ರಾಣಿಗಳು ಸುಡಲ್ಪಟ್ಟು ತಿನ್ನುವಾಗ ಬೆಂಕಿಯ ಉಪಯೋಗ ಮನುಷ್ಯನಿಗೆ ತಿಳಿಯಿತು. ನಾಗರೀಕತೆ ಅಂಬೆಗಾಲಿಡುತ್ತ ಸಾಗಿದಂತೆ

[illegible] ಮಿಸುಟ್ಟನಲ್ಲಿ ಮೂಡಿತು. ಪಾಶ್ಚಿಮಾತ್ಯ ಜಗತ್ತು ಇನ್ನೂ ಅನಾಗರಿಕತ್ವದಲ್ಲಿ ಇರುವಾಗ ಭಾರತದಲ್ಲಿ ನಾಗರಿಕತೆ - ಸಂಸ್ಕೃತಿ-ಅಧ್ಯಾತ್ಮಗಳು ಉನ್ನತ ಮಟ್ಟದಲ್ಲಿದ್ದವು. ಹೀಗಾಗಿ ಇಲ್ಲಿ ಸಸ್ಯಾಹಾರಿ ಜೀವನ ಪದ್ಧತಿ ಬಹಳ ಪೂರ್ವದಲ್ಲೇ ಅಳವಟ್ಟಿತು. ಇದರ ಪ್ರಭಾವ ಪಾಶ್ಚಿಮಾತ್ಯ ಜಗತ್ತಿನಲ್ಲಿಯೂ ಆಗಿ ಈಗ ಅಲ್ಲಿ ಸಹ ಸಸ್ಯಾಹಾರ ಜನಪ್ರಿಯವಾಗುತ್ತಿದೆ.

ಹೀಗಿರುವಾಗ ಕೇಂದ್ರ ಸರ್ಕಾರದ ಸಹಯೋಗದೊಡನೆ ಕರ್ನಾಟಕ ಸರ್ಕಾರವು ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಪ್ರಾಥಮಿಕ ಶಾಲೆಯ ಒಂದನೆಯ ತರಗತಿಯಿಂದ ಏಳನೆಯ ತರಗತಿಯ ವರೆಗಿನ ಮಕ್ಕಳಿಗೆ ಕೋಳಿ ಮೊಟ್ಟೆಯನ್ನು ಜನವರಿ 23ರಿಂದ ಕೊಡುವ ಯೋಜನೆ ಪ್ರಕಟಿಸಿದಾಗ ನಮಗೆಲ್ಲ ಬಹಳ ಅಘಾತವಾಯಿತು. ಎಲ್ಲ ಜಾತಿಯ ಜನಾಂಗದ ಬಡವರ ಮಕ್ಕಳು ಸರ್ಕಾರಿ ಮತ್ತು ಅನುದಾನಿತ ಶಾಲೆಗಳಿಗೇ ಹೋಗುವುದು. ಶುದ್ಧ ಸಸ್ಯಾಹಾರಿ ಸಮಾಜಗಳಾದ ಲಿಂಗಾಯತ, ಜೈನ, ಬ್ರಾಹ್ಮಣ, ವೈಶ್ಯ ಮುಂತಾದವರು ಮತ್ತು ಗುರು ಬೋಧೆ ಪಡೆದು ಸಸ್ಯಾಹಾರ ಪದ್ಧತಿ ಅಳವಡಿಸಿಕೊಂಡ ಇನ್ನಿತರ ಜನಾಂಗಗಳ, ಸ್ವಯಂ ಪ್ರೇರಣೆಯಿಂದ ಸಸ್ಯಾಹಾರ ಪದ್ಧತಿ ಅಳವಡಿಸಿಕೊಂಡವರ ಮಕ್ಕಳು ಏನು ಮಾಡಬೇಕು? ಮೊಟ್ಟೆ ಮತ್ತು ಹಾಲು-ಹಣ್ಣು ಇವುಗಳ ಮಧ್ಯ ಆಯ್ಕೆಗೆ ಅವಕಾಶವಿದ್ದರೂ ಎಷ್ಟರ ಮಟ್ಟಿಗೆ ಆಹಾರ ಶುದ್ಧಿಗೆ ಅವಕಾಶ ಇರಲು ಸಾಧ್ಯ? ಚಿಕ್ಕ ಮಕ್ಕಳಿಂದಲೇ ಸಸ್ಯಾಹಾರಿ/ಮಾಂಸಹಾರಿ ಎಂದು ಶಾಲೆಗಳಲ್ಲಿ ವರ್ಗೀಕರಿಸುವುದು ಸೂಕ್ತವೇ?

ಈ ಕಾರಣಗಳಿಂದ ರಾಷ್ಟ್ರೀಯ ಬಸವ ದಳ,ಲಿಂಗಾಯತ ಧರ್ಮ ಮಹಾಸಭಾಗಳು ಅಖಿಲ ಕರ್ನಾಟಕ ಪ್ರಾಣಿ ದಯಾ ಸಂಘ, ಜೈನ್ ಸಮಾಜ, ಸುಮಂಗಲಿ ಸೇವಾಶ್ರಮ, ಅಕ್ಕಮಹಾದೇವಿ ಸಮಾಜ/ಮುಂತಾದ ಸಂಸ್ಥೆಗಳ ನೇತಾರರನ್ನು ಸಂಪರ್ಕಿಸಿ ಹೋರಾಟವನ್ನು ಪ್ರಾರಂಭಿಸಿದೆವು.

1. ದಿ:29-12-06ರಂದು ಬೆಂಗಳೂರಿನ ಪ್ರೆಸ್ ಕ್ಲಬ್‌ದಿಂದ ಮಹಾತ್ಮ ಗಾಂಧಿ ಪುತ್ಥಳಿವರೆಗೆ ಪಥ ಸಂಚಲನದಲ್ಲಿ ಸಾಗಿ, ಅಲ್ಲಿ ಧರಣಿ ಸತ್ಯಾಗ್ರಹ ಮಾಡಿ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಧಾರವಾಡದಲ್ಲಿ ದಿ: 8-1-2007ರಂದು, ದಿ:16-1-07ರಂದು ಬಾಗಲಕೋಟೆಯಲ್ಲಿ, ಕೊಪ್ಪಳದಲ್ಲಿ ಪ್ರತಿಭಟನಾ ಮೆರವಣಿಗೆ ಮಾಡಿ ಜಿಲ್ಲಾಧಿಕಾರಿಗಳಿಗೆ ಮನವಿ ನೀಡಲಾಯಿತು.

2. ದಿ:19-1-07ರಂದು ಬೆಂಗಳೂರಿನಲ್ಲಿ ಉಪ ಮುಖ್ಯಮಂತ್ರಿಗಳು ಮತ್ತು ಮುಖ್ಯಮಂತ್ರಿಗಳ ಮನೆಯ ಬಳಿ ಧರಣಿ ಸತ್ಯಾಗ್ರಹ ಪ್ರತಿಭಟನಾ ಪ್ರದರ್ಶನ ಮಾಡಿ, ಧರಣಿ ನಡೆಸಲಾಯಿತು.

3. ದಿ: 25-1-07, ಬೆಂಗಳೂರಿನ ನೆಹರು ಪಾರ್ಕಿನಲ್ಲಿ, ಬೆಳಗಾವಿ ಮತ್ತು ಬೀದರ್ ಜಿಲ್ಲಾಧಿಕಾರಿ ಕಾರ್ಯಾಲಯದ ಬಳಿ ನಡೆಸಲಾಯಿತು. ಅಂದು ಸನ್ಮಾನ್ಯ ಉಪ ಮುಖ್ಯಮಂತ್ರಿ ಯಡೆಯೂರಪ್ಪನವರು ಮುಖತಃ ಭೇಟಿಯಾಗಿ ಕೋಳಿ ಮೊಟ್ಟೆ ಯೋಜನೆ ಕೈ ಬಿಡುವುದಾಗಿ ಹೇಳಿದರು. ಪ್ರಯಾಣದಲ್ಲಿದ್ದ ಶಿಕ್ಷಣ ಮಂತ್ರಿ ಬಸವರಾಜ ಹೊರಟ್ಟಿಯವರು ಮೊಬೈಲ್ ಮೂಲಕ ಮಾತನಾಡಿ ಭರವಸೆ ಕೊಟ್ಟರು.

4. ಧಾರವಾಡದಲ್ಲಿ ರಾಷ್ಟ್ರೀಯ ಬಸವ ದಳದ ಮುಖಂಡರು ದಿ: 30-1-07ರಂದು ಶ್ರೀ ಬಸವರಾಜ ಹೊರಟ್ಟಿಯವರನ್ನು ಕಂಡಾಗ, ಅವರಿಗೂ ಭರವಸೆ ನೀಡಿದರು.

5. ದಿ:1-2-07ರಂದು ಬೆಂಗಳೂರಿನಲ್ಲಿ ಲಿಂಗಾಯತ ಮತ್ತು ಜೈನ್ ಮುಖಂಡರು ಭೇಟಿಯಾದಾಗ ಶ್ರೀ ಹೊರಟ್ಟಿಯವರು ಕೋಳಿ ಮೊಟ್ಟೆ ಯೋಜನೆಯನ್ನು ಕೈ ಬಿಟ್ಟಿರುವುದಾಗಿ ಖಚಿತವಾಗಿ ತಿಳಿಸಿದಾಗ ಚಳುವಳಿ ನಿಲ್ಲಿಸಲಾಯಿತು.

ಇದಕ್ಕಾಗಿ ಸರ್ಕಾರವನ್ನು ಅಭಿನಂದಿಸೋಣ

> ಆಚಾರದಿಂದ ಭಕ್ತ ಅರಿವಿನಿಂದ ಗುರು, ಅನುಭಾವದಿಂದ ಜಂಗಮ, ಯಾರು ಬೇಕಾದರೂ ಭಕ್ತ, ಗುರು, ಜಂಗಮರಾಗಬಹುದು.
>
> - ಪೂಜ್ಯ ಮಾತಾಜಿ

Federation of Indian Vegetarian Communities and Organisations

ಭಾರತೀಯ ಸಸ್ಯಾಹಾರಿ ಸಮಾಜಗಳು ಮತ್ತು ಸಂಘಟನೆಗಳ ಒಕ್ಕೂಟ

ಶ್ರೀ ಹೆಚ್.ಡಿ. ಕುಮಾರಸ್ವಾಮಿ	ಶ್ರೀ ಬಿ.ಎಸ್.ಯಡೆಯೂರಪ್ಪ	ಶ್ರೀ ಬಸವರಾಜ ಹೊರಟ್ಟಿ
ಮುಖ್ಯ ಮಂತ್ರಿಗಳು	ಉಪ ಮುಖ್ಯಮಂತ್ರಿಗಳು	ಪ್ರಾಥಮಿಕ ಮತ್ತು
ಕರ್ನಾಟಕ ಸರ್ಕಾರ	ಕರ್ನಾಟಕ ಸರ್ಕಾರ	ಪ್ರೌಢಶಾಲಾ ಶಿಕ್ಷಣ ಸಚಿವರು
ಬೆಂಗಳೂರು	ಬೆಂಗಳೂರು	ಕರ್ನಾಟಕ ಸರ್ಕಾರ, ಬೆಂಗಳೂರು

ಇವರುಗಳಲ್ಲಿ ವಿಜ್ಞಾಪನೆಗಳು

ಮಾನ್ಯರೆ,

ವಿಷಯ: 1. ಸರ್ಕಾರಿ ಶಾಲೆಗಳಲ್ಲಿ ಬಿಸಿಯೂಟದಲ್ಲಿ ಕೋಳಿ ಮೊಟ್ಟೆ ಕೊಡುವ ಯೋಜನೆ ಕೈ ಬಿಟ್ಟು, ಹಾಲು ಕೊಡಲು ನಿರ್ಧರಿಸಿದ್ದಕ್ಕಾಗಿ ಅಭಿನಂದನೆ.
2. ಈ ಬಗ್ಗೆ ಅಧಿಕೃತ ಆದೇಶವನ್ನು ಹೊರಡಿಸಲು ಆಗ್ರಹಿಸಿ, ಧರಣಿ ಸತ್ಯಾಗ್ರಹ ದಿ: 25-01-2007ರಂದು.

ಅಕ್ಷರ ದಾಸೋಹ ಯೋಜನೆಯಡಿಯಲ್ಲಿ, ಪ್ರಾಥಮಿಕ ಶಾಲೆ ಒಂದನೆಯ ತರಗತಿಯಿಂದ ಏಳನೆಯ ತರಗತಿಯವರೆಗಿನ ಮಕ್ಕಳಿಗೆ ಬಿಸಿಯೂಟ ಕೊಡುತ್ತಿದ್ದು, ಇದರ ಜೊತೆಗೆ ಕೋಳಿ ಮೊಟ್ಟೆ ಕೊಡುವ ಯೋಜನೆಯನ್ನು ಜನವರಿ 23ರಿಂದ ಜಾರಿಗೆ ತರುವ ಬಗ್ಗೆ ಸುತ್ತೋಲೆ ಹೊರಡಿಸಿದ್ದಲ್ಲದೆ ಪ್ರಯೋಗಾತ್ಮಕವಾಗಿ ಒಂದೆರಡು ಕಡೆ ಕೊಡಲು ಆರಂಭಿಸಿದಿರಿ. ಇದನ್ನು ಕಂಡ ಎಲ್ಲ ಧರ್ಮ, ಜಾತಿ, ಮತಗಳ ಸಸ್ಯಾಹಾರಿ ಸಮಾಜಗಳು ಮತ್ತು ಸಂಘಟನೆಯವರು ಒಕ್ಕೂಟ ರಚಿಸಿಕೊಂಡು ಕೆಳಕಂಡ ಕಾರಣಗಳಿಗಾಗಿ ಕೋಳಿ ಮೊಟ್ಟೆ ಯೋಜನೆ ಕೈಬಿಡಲು ಆಗ್ರಹಿಸಿ, ಚಳುವಳಿ ಮಾಡಿದರು.

1. ಕೋಳಿ ಮೊಟ್ಟೆಯನ್ನು ಸಾರ್ವಜನಿಕ ಸ್ಥಾನ ಮತ್ತು ಜ್ಞಾನ ದೇಗುಲವಾದ ಶಾಲೆಗಳಲ್ಲಿ ಕೊಟ್ಟು, ಆಯ್ಕೆ ಮಾಡಿಕೊಳ್ಳಲು ಮಕ್ಕಳಿಗೆ ಅವಕಾಶ ನೀಡಿ, ಮೊಟ್ಟೆಯನ್ನು ತಿನ್ನುವವರು, ಬಾಳೆಹಣ್ಣು ತಿನ್ನುವವರು ಎಂದು ವರ್ಗೀಕರಿಸಿ ತನ್ಮೂಲಕ ಮಾಂಸಾಹಾರಿಗಳು ಮತ್ತು ಸಸ್ಯಾಹಾರಿಗಳು ಎಂದು ಚಿಕ್ಕ ಮಕ್ಕಳಿಂದಲೇ ವಿಭಜನೆ ಮಾಡಿ, ಪರಸ್ಪರರಲ್ಲಿ ಭೇದ ಹುಟ್ಟಿಸುವುದು ಸೂಕ್ತವಲ್ಲ.

2. ಮೊಟ್ಟೆಯು ಸಾತ್ವಿಕ ಆಹಾರವಲ್ಲ. ಅದು ರಾಜಸ/ ತಾಮಸ ಗುಣವುಳ್ಳದ್ದು.

3. ಪೌಷ್ಟಿಕ ಅಂಶದ ಆಹಾರ ಕೊಡಬೇಕೆಂದು ಸರ್ಕಾರವು ಕಳಕಳಿ ಹೊಂದಿರುವುದು ಮೆಚ್ಚತಕ್ಕದ್ದಾದರೂ, ಅನಾರೋಗ್ಯ ಮತ್ತು ಅಜೀರ್ಣಗಳಿಂದ ಬಳಲುವವರಿಗೆ ಕೋಳಿ ಮೊಟ್ಟೆ ಸೂಕ್ತವಲ್ಲ. ಪೌಷ್ಟಿಕತೆಯಲ್ಲಿ ಕೋಳಿ ಮೊಟ್ಟೆಗಿಂತಲೂ ಹೆಚ್ಚು ಪೌಷ್ಟಿಕತೆ, ಅನ್ನಾಂಗ, ಪ್ರೋಟೀನ್ ಇತ್ಯಾದಿ ಹೊಂದಿರುವ ಬಾಳೆಹಣ್ಣು, ಹಾಲು, ಮೊಳಕೆ ಕಾಳು, ಶೇಂಗಾ (ನೆಲಗಡಲೆ) ಮುಂತಾದ್ದು ಕೊಡುವುದು ಸೂಕ್ತ.

4. 1ನೇ ತರಗತಿಯಿಂದ 10ನೇ ತರಗತಿಯವರೆಗೆ ಏಕ ರೂಪದ ಸಮವಸ್ತ್ರ, ಪಠ್ಯ ಕ್ರಮ ಇರುವಂತೆ ಆಹಾರ ಕ್ರಮವೂ ಒಂದೇ ಆಗಿರಬೇಕು. ಮಾಂಸಾಹಾರಿಗಳು ಸಸ್ಯಾಹಾರವನ್ನು ತಿನ್ನುವರು, ಆದರೆ ಸಸ್ಯಾಹಾರಿಗಳು ಎಂಥ ಪ್ರಸಂಗದಲ್ಲಿಯೂ ಮಾಂಸ, ಮೀನು, ಮಾಂಸಾಹಾರದ ಒಂದು ಅಂಗವಾಗಿರುವ ಮೊಟ್ಟೆ ತಿನ್ನುವುದಿಲ್ಲ. ಆದ್ದರಿಂದ ಎಲ್ಲರಿಗೂ ಸಮ್ಮತವಾಗಿರುವ ಹಾಲು/ ಹಣ್ಣು

ಕೊಡಬಹುದೇ ವಿನಾ ಮೊಟ್ಟೆಯನ್ನಲ್ಲ. ... ಅನ್ನು ಸಸ್ಯಾಹಾರ ಎಂದು ಜಾಹಿರಾತು ಮೂಲಕ ಪ್ರಚಾರ ಮಾಡುವುದು "ರಾಷ್ಟ್ರೀಯ ಮತ್ತು ಸಾಮಾಜಿಕ ಅಪರಾಧ" ಎಂಬ ಭಾರತೀಯ ಜಾಹಿರಾತು ಮಾನದಂಡ ಪರಿಷತ್(Advertisement Standard Council of India) ದಿ: 26-05-1990ರ ಉಲ್ಲೇಖ ಸಹಿತವಾದ ಮಂಡನೆ.

6. ಕೋಳಿ ಮೊಟ್ಟೆಯನ್ನು ಸುಸ್ಥಿತಿಯಲ್ಲಿ (ಸಾಗಾಣಿಕೆ ಮತ್ತು ಸಂರಕ್ಷಣೆಯ ದೃಷ್ಟಿಯಿಂದ) ಇಟ್ಟು ಮಕ್ಕಳಿಗೆ ಕೊಡುವುದು ಅಸಾಧ್ಯ. ಇದರಿಂದ ಅಲರ್ಜಿಯಂತಹ ಕಾಯಿಲೆಗಳಿಗೆ ಅವಕಾಶ ನೀಡಿದಂತಾಗುವುದು.

7. ಧರ್ಮ ಭೂಮಿ, ಯೋಗ ಭೂಮಿ ಎಂಬ ಕೀರ್ತಿಗೆ ಪಾತ್ರವಾಗಿರುವ ಭಾರತದಲ್ಲಿ ಸಸ್ಯಾಹಾರಿ ಜೀವನ ವಿಧಾನದ ಕಡ್ಡಾಯತೆ ಉಳ್ಳ ಹಲವಾರು ಧರ್ಮಗಳ ಅನುಯಾಯಿಗಳು ಉದಾ: ಲಿಂಗಾಯತರು, ಜೈನರು ಮಾತ್ರವಲ್ಲ ಹಿಂದುಗಳಲ್ಲಿ ಬ್ರಾಹ್ಮಣ, ವೈಶ್ಯ ಮುಂತಾದವರು, ಜೊತೆಗೆ ಸ್ವಯಂ ಪ್ರೇರಣೆಯಿಂದ ಸಸ್ಯಾಹಾರಿ ಜೀವನ ವಿಧಾನ ಅಳವಡಿಸಿಕೊಂಡ ಅನೇಕ ಜಾತಿ, ಕ್ರೈಸ್ತ, ಮುಸಲೀಮ್, ಬೌದ್ಧರು ಇದ್ದಾರೆ. ಈ ಎಲ್ಲಾ ಸಮಾಜಗಳ ಬಡವರ ಮಕ್ಕಳು ಸರ್ಕಾರಿ ಶಾಲೆಗಳಲ್ಲಿ ಓದುತ್ತಾರೆ. ಆದ್ದರಿಂದ ಸಾರ್ವಜನಿಕ ಸಂಸ್ಥೆಯಾದ ಶಾಲೆಗಳಲ್ಲಿ ಕೋಳಿ ಮೊಟ್ಟೆ ಕೊಡಬಾರದು.

8. ರೈತ ದೇಶದ ಬೆನ್ನೆಲುಬು ಎನ್ನುವುದು ನಿಜವಾದರೂ ಅತ್ಯಂತ ಸಂಕಷ್ಟ ಸ್ಥಿತಿಯಲ್ಲಿ ರೈತರು ಇದ್ದು, ಆತ್ಮಹತ್ಯೆ ಸಂಖ್ಯೆ ಹೆಚ್ಚಳವಾಗುತ್ತಿದೆ. ಹಣ್ಣು, ಹಾಲು; ತರಕಾರಿ, ಮೊಳಕೆ ಕಾಳು ಇತ್ಯಾದಿ ಕೊಡುವುದರಿಂದ ಕ್ಷೀರ ಕ್ರಾಂತಿ; ಹಸಿರು ಕ್ರಾಂತಿ ಪ್ರಗತಿಯಾಗಿ ರೈತರಿಗೆ ಪ್ರೋತ್ಸಾಹ ಸಿಗುತ್ತದೆ. ಇತ್ಯಾದಿ ಇತ್ಯಾದಿ.


ಈ ಎಲ್ಲ ಅಂಶಗಳನ್ನು ಮನವರಿಕೆ ಮಾಡಿಕೊಂಡಿರುವ ನೀವು ಕೇಂದ್ರ ಸರ್ಕಾರದ ಸಹಕಾರದೊಡನೆ, ಶಾಲಾ ಮಕ್ಕಳಿಗೆ ಹಾಲನ್ನು ಕೊಡುವ ನಿರ್ಧಾರ ಕೈಗೊಂಡಿದ್ದು ತನ್ಮೂಲಕ ಕ್ಷೀರ ಕ್ರಾಂತಿಗೆ ಕಾರಣರಾಗಿ ಈ ದಿಶೆಯಲ್ಲಿ ಕರ್ನಾಟಕ ರಾಜ್ಯವನ್ನು ಮೊದಲ ಸ್ಥಾನಕ್ಕೆ ತಂದು ನಿಲ್ಲಿಸುವ ಸಂಕಲ್ಪ ತೊಟ್ಟಿದ್ದೀರಿ. ಇದರಿಂದ ಕರ್ನಾಟಕದ ಸಮ್ಮಿಶ್ರ ಸರ್ಕಾರ ಹಾಲಿನ ಮೂಲಕ ಬಡ ಮಕ್ಕಳಿಗೆ ಪೌಷ್ಟಿಕಾಹಾರ ಕೊಡುವುದೇ ಅಲ್ಲದೆ ರೈತರ ಪರವಾಗಿ ನಿಂತು ಅವರ ಹಿತಾಸಕ್ತಿಯನ್ನು ಕಾಪಾಡುತ್ತಿದೆ ಎಂಬ ಕೀರ್ತಿಗೆ ಕಾರಣರಾಗಿದ್ದೀರಿ. ಭಾರತೀಯ ಧಾರ್ಮಿಕ, ಸಾಂಸ್ಕೃತಿಕ ಪರಂಪರೆಯ ಬಗ್ಗೆ ಕಾಳಜಿಯುಳ್ಳವರು ಎಂಬ ಭಾವ ಹುಟ್ಟಿಸಿದ್ದೀರಿ; ಇದಕ್ಕಾಗಿ ಅಭಿನಂದನೆಗಳು; ಜನರ ಭಾವನೆಗೆ ಸ್ಪಂದಿಸಿದ್ದಕ್ಕೆ ಧನ್ಯವಾದಗಳು.

ಅಧಿಕೃತ ಸರ್ಕಾರಿ ಆದೇಶಕ್ಕೆ ಆಗ್ರಹ


"ಸರ್ಕಾರಿ ಶಾಲೆಗಳಲ್ಲಿ ಬಿಸಿಯೂಟದ ಜೊತೆಗೆ ಕೋಳಿ ಮೊಟ್ಟೆ ಕೊಡುವ ಯೋಜನೆ ಕೈಬಿಡಲಾಗಿದೆ" ಎಂದು ತಾವುಗಳು ಬೇರೆ ಬೇರೆ ಸ್ಥಳಗಳಲ್ಲಿ ಅನೇಕ ಸಭೆಗಳಲ್ಲಿ, ಸಂದರ್ಶಕರ ಜೊತೆಗಿನ ಮಾತುಕತೆಯಲ್ಲಿ ಹೇಳಿರುವುದು ದೂರದರ್ಶನ ವಾಹಿನಿಗಳಲ್ಲಿ, ಪತ್ರಿಕೆಗಳ ಮೂಲಕ ಪ್ರಕಟಗೊಂಡಿದೆ. ಜನರು ಅಧಿಕೃತವಾದ ಸರ್ಕಾರದ ಆದೇಶದ ನಿರೀಕ್ಷೆಯಲ್ಲಿದ್ದಾರೆ. ಆದ್ದರಿಂದ ಈಗ ನಮ್ಮ ಬೇಡಿಕೆಗಳು ಹೀಗಿವೆ.

1. ತಾತ್ಕಾಲಿಕವಾಗಿ (3 ದಿನಗಳ ಮಟ್ಟಿಗೆ) ತಡೆಹಿಡಿದಿರುವ ಕೋಳಿ ಮೊಟ್ಟೆ ವಿತರಣಾ ಯೋಜನೆಯನ್ನು ಶಾಶ್ವತವಾಗಿ ನಿಲ್ಲಿಸಬೇಕು.
2. ಕೋಳಿ ಮೊಟ್ಟೆಗೆ ಬದಲಾಗಿ ಎಲ್ಲಾ ಮಕ್ಕಳಿಗೂ ಹಾಲನ್ನು ನೀಡುವ ಯೋಜನೆಯನ್ನು ಆದೇಶದ ಮೂಲಕ ಅಧಿಕೃತವಾಗಿ ಪ್ರಕಟಿಸಬೇಕು.
3. ಅಂಗನವಾಡಿಯಲ್ಲಿ ಸಹ ಕೋಳಿ ಮೊಟ್ಟೆ ವಿತರಣೆಯಾಗುತ್ತಿರುವುದು ನಿಂತು, ಅದರ ಬದಲಿಗೆ ಹಾಲು ಕೊಡಲ್ಪಡಬೇಕು.


ಈ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಭಾರತೀಯ ಸಸ್ಯಾಹಾರಿ ಸಮಾಜಗಳ ಮತ್ತು ಸಂಘಟನೆಗಳ ಸದಸ್ಯರು ದಿ: 25-01-07ರಂದು ಬೆಳಿಗ್ಗೆ 10-30ರಿಂದ ಧರಣಿ ಸತ್ಯಾಗ್ರಹವನ್ನು ನಡೆಸುತ್ತಿದ್ದೇವೆ.



ಧರ್ಮ ಚಿಂತನಗೋಷ್ಠಿ, 11-01-2007, ಶರಣ.ಸಿ.ಬಿ.ಬೇವನೂರು ಅವರಿಂದ ಧ್ವಜಾರೋಹಣ.




2. ದಿ.12-01-2007, ರಾ.ಬ.ದಳಗಳ 20ನೆಯ ಮಹಾಧಿವೇಶನ ಗುಲಬರ್ಗಾ ರಾ.ಬ.ದಳ ಅಧ್ಯಕ್ಷ ಶಂಕರಪ್ಪ ಮಹಾಂತಗೋಳ ಅವರಿಂದ ಧ್ವಜಾರೋಹಣ.




ದಿ.11-01-2007 ರಂದು ಚಿಂತನಗೋಷ್ಠಿ-1 ಉದ್ಘಾಟಿಸಲಿರುವ
ಶರಣೆ. ಮಾಲೂತಾಯಿ ಚಂದ್ರಕಾಂತ ಸ್ವಾಮಿ,
ಸನ್ನಿಧಿ: ಹುಬ್ಬಳ್ಳಿಯ ಹೊಸ ಮಠದ ಜಗದ್ಗುರು ಚಂದ್ರ ಶೇಖರ ಸ್ವಾಮೀಜಿ




ರಾ.ಬ.ದಳದ ಅಧಿವೇಶನ ಉದ್ಘಾಟಿಸಿದ ತೋಟಗಾರಿಕೆ ಸಚಿವ ಶಶಿಕಾಂತ ಅಕ್ಕಪ್ಪ ನಾಯಕ್
ಅವರಿಗೆ ಪೂಜ್ಯ ಮಾತಾಜಿಯವರಿಂದ ನೆನಪಿನ ಕಾಣಿಕೆ ನೀಡಿಕೆ.



ದಿ.12-01-2007, ಚಿಂತನ ಗೋಷ್ಠಿ-3, ಶರಣ ಎಸ್.ದಿವಾಕರ್ ಅವರಿಂದ ಉದ್ಘಾಟನೆ,
ಆಂಧ್ರಪ್ರದೇಶ್ ರಾ.ಬ.ದಳ ಅಧ್ಯಕ್ಷರಾದ ಧನರಾಜ ಜೀರಗೆ ಅವರು ಚಿತ್ರದಲ್ಲಿದ್ದಾರೆ.




ದಿ.13-01-2007, ಶರಣ ಧನರಾಜ್ ತಾಡಂಪಳ್ಳಿ ಅವರಿಂದ ಹೊಸ ವರ್ಷದ
ಕ್ಯಾಲೆಂಡರ್ ಬಿಡುಗಡೆ.




ಯುವ ಜನ ಮತ್ತು ಕ್ರೀಡಾ ಸಚಿವರಾದ ಆಲ್ಕೋಡು ಹನುಮಂತಪ್ಪ ಅವರಿಂದ
ಗಣಲಿಂಗ ದರ್ಶನ



ಪೀಠಾರೋಹಣ ವಾರ್ಷಿಕೋತ್ಸವ ಉದ್ಘಾಟನೆ ಸಚಿವರಾದ
ಆಲ್ಕೋಡು ಹನುಮಂತಪ್ಪ ಅವರಿಂದ



ಪೀಠಾರೋಹಣ ವಾರ್ಷಿಕೋತ್ಸವದಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸಿದ್ದ
ಹಾವೇರಿಯ ಡಾ।। ವೈದ್ಯ ಅವರಿಂದ ಉಪನ್ಯಾಸ



ಪೀಠವನ್ನೇರುವ ಮೊದಲು ಪ್ರಥಮ ಪೀಠಾಧೀಶರಾದ ಪೂಜ್ಯ ಶ್ರೀ ಲಿಂಗೈಕ್ಯ
ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳಿಗೆ ಪೂಜ್ಯ ಮಾತಾಜಿಯವರಿಂದ ಗೌರವಾರ್ಪಣೆ.




ಪೀಠಾರೋಹಣ ವಾರ್ಷಿಕೋತ್ಸವದಲ್ಲಿ ಪೂಜ್ಯ ಮಾತಾಜಿಯವರಿಗೆ
ಪೂಜ್ಯ ಗಂಗಾ ಮಾತಾಜಿಯವರಿಂದ ಕಿರೀಟ ಧಾರಣೆ.



ಪೂಜ್ಯ ಗಂಗಾ ಮಾತಾಜಿಯವರಿಂದ ಮಂಗಳಾರತಿ




ಪೀಠಾರೋಹಣ ಮಾಡಿದ ಪೂಜ್ಯರಿಗೆ ಜಂಗಮ ಮೂರ್ತಿ ಸ್ವಾಮಿಗಳಿಂದ ಆರತಿ




ಜಂಗಮ ಮೂರ್ತಿಗಳಾದ ಮಾತಾಜಿ ಮತ್ತು ಗಣ ನಾಯಕಿಯರಿಂದ ಆರತಿ.




ಪೂಜ್ಯ ಬಸವಕುಮಾರ ಸ್ವಾಮಿಗಳಿಂದ ವಿಶ್ವಕಲ್ಯಾಣ ಗೀತೆ ಪುಸ್ತಕದ ನೂತನ ಆವೃತ್ತಿ ಬಿಡುಗಡೆ.




ಎಸ್.ದಿವಾಕರ್ ಅವರಿಂದ ಪೂಜ್ಯ ಮಾತಾಜಿಯವರು ರಚಿಸಿದ
"ಹೆಪ್ಪಿಟ್ಟ ಹಾಲು" ಪುಸ್ತಕದ 7 ನೆಯ ಆವೃತ್ತಿ ಬಿಡುಗಡೆ.




ಆರ್.ಬಿ.ಹೆಬ್ಬಳ್ಳಿಯವರಿಂದ ಗುರು ಬಸವಣ್ಣನವರ ಭಾವಚಿತ್ರ ಮುದ್ರಿಸಿರುವ ಟೀಷರ್ಟ್ ಬಿಡುಗಡೆ.



ಸುಭಾಷ್ ಪಾಟೀಲರಿಂದ ಪೂರ್ಣಾವತಾರಿ ಬಸವಣ್ಣ ಕೃತಿಯ ಬಿಡುಗಡೆ




ಗಣಲಿಂಗ ದರ್ಶನಕ್ಕೆ ಹೊರಟ ಪಥ ಸಂಚಲನದಲ್ಲಿ ಬಸವ ಕಲ್ಯಾಣದ
ಅಕ್ಕ ನಾಗಲಾಂಬಿಕಾ ಅನಾಥಾಲಯದ ಮಕ್ಕಳಿಂದ ಬ್ಯಾಂಡ್.



ಪೂಜ್ಯ ಗಂಗಾ ಮಾತಾಜಿ ಹಾಗೂ ಶರಣೆಯರಿಂದ ಗಣಲಿಂಗ ಪೂಜೆ ಹಾಗೂ ದರ್ಶನ.



ಪಾದ ಯಾತ್ರೆಯ ಮುಂಚೂಣಿಯಲ್ಲಿ ಪೂಜ್ಯ ಚನ್ನಬಸವಾನಂದ ಸ್ವಾಮೀಜಿ ಮತ್ತು
ಶರಣ. ಆರ್.ಬಿ.ಹಬ್ಬಳ್ಳಿ.




ಪೂಜ್ಯ ಲಿಂಗಾನಂದ ಸ್ವಾಮೀಜಿಯವರ ಶರಣಾಲಯ (ಗದ್ದುಗೆ) ದಲ್ಲಿ
ಬಸವ ಧರ್ಮ ಪೀಠದ ಜಂಗಮ ಮೂರ್ತಿಗಳಿಂದ ಗುರು ದರ್ಶನ.



14-01-2007 ಬಸವ ಧರ್ಮ ಸಂಸ್ಥಾಪನಾ ದಿನದಂದು ಸಮುದಾಯ
ಪ್ರಾರ್ಥನೆ ಮತ್ತು ವಚನ ಪಠಣ.





ಬಸವೇಶ್ವರ ಐಕ್ಯ ಮಂಟಪದಲ್ಲಿ ಪೂಜ್ಯ ಗಂಗಾ ಮಾತಾಜಿಯವರಿಂದ ಪೂಜೆ,
ಪಥ ಸಂಚಲನದಲ್ಲಿ ಶರಣರು ಸಾಗಿ ಬರುತ್ತಿರುವುದು.



ಗೋಕಾಕಿನ ಶ್ರೀಮತಿ ರಜನಿ ಜೀರಗ್ಯಾಳ ಅವರ ನೃತ್ಯ ಶಾಲೆಯ ಮಕ್ಕಳಿಂದ
ಬಸವನ ಅವತಾರ ನೃತ್ಯ.



ಬಸವೇಶ್ವರ ಐಕ್ಯ ಮಂಟಪದಿಂದ ದರ್ಶನ ಪಡೆದು
ಬರುತ್ತಿರುವ ಶರಣ ಸಮೂಹ.



ಬಾ ಬಾ ಎಲೆ ಶರಣ ಎಂದು ನೃತ್ಯದ ಮೂಲಕ ಶರಣ ಬಂಧುಗಳನ್ನು
ಆಹ್ವಾನಿಸುತ್ತಿರುವ ಕುಮಾರಿ ಪ್ರತಿಭಾ.



ಆಡಿರಯ್ಯ, ಹಾಡಿರಯ್ಯ ಮನ ಬಂದ ಪರಿಯಲ್ಲಿ ಎಂದು ಧರ್ಮಪಿತರು ಹೇಳುವಂತೆ
ಭಕ್ತಿಯಿಂದ ನರ್ತಿಸುತ್ತಿರುವ ತಮಿಳು ನಾಡಿನ ಶರಣರು.



ಗೋಕಾಕಿನ ಶ್ರೀಮತಿ ರಜನಿ ಜೀರಗ್ಯಾಳ ಅವರ ನೃತ್ಯ ಶಾಲೆಯ ಮಕ್ಕಳಿಂದ
ಬಸವನ ಅವತಾರ ನೃತ್ಯ ರೂಪಕ.



.ಅಕ್ಕ ಮಹಾದೇವಿ ಅನಾಥಾಲಯದ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ.



ಶ್ರೀ ಚನ್ನ ಬಸವೇಶನಿಗೆ ನಮನ ನೃತ್ಯ- ಕುಮಾರಿ ಸ್ವಾತಿಯಿಂದ
ಚನ್ನ ಬಸವಣ್ಣನಾಗಿ ಕುಮಾರಿ ಶ್ರುತಿ.



ಗೋಕಾಕಿನ ರಜನಿ ಜೇರಗ್ಯಾಳ ಅವರ ನೃತ್ಯಶಾಲೆಯ ಮಕ್ಕಳಿಂದ ಲಿಂಗಾಯತ ಧರ್ಮಕ್ಕೆ
ಪಟ್ಟ ಕಟ್ಟುವ ನೃತ್ಯ.




ಶರಣೆ ಮಾಲುತಾಯಿ ಇಚಲಕರಂಜಿ ಅವರ ಮೊಮ್ಮಕ್ಕಳಾದ
ವಿಶ್ವ ಕಲ್ಯಾಣಿ ಮತ್ತು ಬಸವ ಜ್ಯೋತಿಯಿಂದ ನೃತ್ಯ.




ಕಲ್ಯಾಣ ನಿರ್ಗಮನ ಎಂಬ ನಾಟಕ ಪ್ರದರ್ಶನ ಪೂಜ್ಯ ಮಾತೆ ಸತ್ಯಾದೇವಿ ಅಕ್ಕನಾಗಲಾಂಬಿಕೆ ಪಾತ್ರದಲ್ಲಿ



ಶರಣ ಮೇಳದಲ್ಲಿ ಭಾಗಿಯಾದ ವಿದೇಶಿ ಪ್ರವಾಸಿಗಳು.




ಶರಣ. ಹುಲಿಕಲ್ ನಟರಾಜ್ ಅವರಿಂದ ಪವಾಡ ಬಯಲು ಪ್ರದರ್ಶನ;
ಬೆರಳಿನಿಂದ ಶಸ್ತ್ರ ಚಿಕಿತ್ಸೆ ಮಾಡುತ್ತಿದ್ದಾರೆ.



5 ದಿವಸ ಕಾಲ ಯೋಗ ಶಿಬಿರ ನಡೆಸಿದ ಮಹಾರಾಷ್ಟ್ರದ ರಾಮಚಂದ್ರ ಮಾಳಗಿ
ಮತ್ತು ಧಾರವಾಡದ ಅಜೇಯ ಯೋಗಾಚಾರ್ಯ.



ಪ್ರತಿ ದಿನ ಸಾಮೂಹಿಕ ಇಷ್ಟಲಿಂಗಾರ್ಚನೆ ಮಾಡಿಸಿದ ಪೂಜ್ಯ ಚನ್ನಬಸವಾನಂದ ಸ್ವಾಮಿಗಳು ಮತ್ತು
ಪೂಜ್ಯ ಬಸವ ಕುಮಾರ ಸ್ವಾಮಿಗಳು, ಹಾಡುತ್ತ ಭಕ್ತಿ ಭಾವ ಸವಿತಾ ಮತ್ತು ಕವಿತಾ.



ಬಸವ ಕಲ್ಯಾಣದಲ್ಲಿ 21-01-2007 ಗುರು ಬಸವಣ್ಣನವರ ಬೃಹತ್ ಪುತ್ಥಳಿಯ ಆಕಾರ ಪ್ರಾರಂಭೋತ್ಸವ ಸಮಾರಂಭ.
ಎಡದಿಂದ ಬಲಕ್ಕೆ: ಶರಣ ಪುಟ್ಟರುದ್ರ, ಶರಣೆ ಚಂದ್ರಮ್ಮ ಪಾಟೀಲ್, ಪೂಜ್ಯ ಗಂಗಾ ಮಾತಾಜಿ.



ಕೂಡಲ ಸಂಗಮ ಮತ್ತು ಬಸವ ಕಲ್ಯಾಣದ ಅನಾಥಾಲಯದ ಮಕ್ಕಳೊಡನೆ
ತೋಟಗಾರಿಕೆ ಸಚಿವ ಶಶಿಕಾಂತ ನಾಯಕ್.



ಬಸವ ಧರ್ಮ ಪೀಠದ ಜಂಗಮ ಮೂರ್ತಿಗಳೊಡನೆ
ಧಾರವಾಡದ ಅಕ್ಕಮಹಾದೇವಿ ಅನಾಥಾಲಯದ ಮಕ್ಕಳು.



ಶರಣ ಮೇಳದ ಪ್ರಚಾರಕ್ಕೆ ದಿ.4-12-06ರಂದು ಪೂಜ್ಯ ಗಂಗಾ ಮಾತಾಜಿ ಸವದತ್ತಿಗೆ ಆಗಮಿಸಿದಾಗ
ಭವ್ಯವಾಗಿ ಸ್ವಾಗತ ಮಾಡಲಾಯಿತು. ರಾ.ಬ.ದಳದ ಕಾರ್ಯಾಧ್ಯಕ್ಷರಾದ ಎಂ.ಎಂ. ಹಿರಲಿಂಗಣ್ಣನವರು ಚಿತ್ರದಲ್ಲಿ ಇದ್ದಾರೆ.



ಬಾಗಲಕೋಟೆಯಲ್ಲಿ ಕೋಳಿ ಮೊಟ್ಟೆ ಯೋಜನೆ ಕೈಬಿಡಲು ಆಗ್ರಹಿಸಿ ನಡೆದ ಪ್ರತಿಭಟನಾ ಸಭೆಯಲ್ಲಿ
ಚರಂತಿ ಮಠದ ಪೂಜ್ಯ ಪ್ರಭು ಸ್ವಾಮಿಗಳು ಮಾತನಾಡುತ್ತಿರುವುದು.




ಸವದತ್ತಿ, ದಿ-4-12-06, ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡುತ್ತಿರುವ ಡಾ॥ ಅನ್ನಪೂರ್ಣ ಹಿರಲಿಂಗಣ್ಣನವರು,
ವೇದಿಕೆಯ ಮೇಲೆ ಜಿ.ಎಸ್. ಪಟ್ಟಣ ಶೆಟ್ಟಿ, ಎಸ್.ಎಸ್. ಪಾಟೀಲ್ ಪದಿ, ಶಂಕರ ಗೌಡ ಪಾಟೀಲ್
ಬಸವರಾಜ ಪುರದ ಗುಡಿ, ಕಪ್ಪಣ್ಣನವರು, ಪ್ರಭುನವರು ಆಸೀನರಾಗಿದ್ದಾರೆ.



ದಿ:16-1-2007ರಂದು ಬಾಗಲಕೋಟೆಯಲ್ಲಿ ಕೋಳಿ ಮೊಟ್ಟೆ ಯೋಜನೆ ವಿರುದ್ಧ ನಡೆದ ಪ್ರತಿಭಟನಾ ಮೆರವಣಿಗೆಯ
ಪಾದಯಾತ್ರೆಯಲ್ಲಿ ಪೂಜ್ಯ ಮಾತಾಜಿ, ದಯಾನಂದ ಸ್ವಾಮೀಜಿ, ಚನ್ನಮಲ್ಲಿಕಾರ್ಜುನ ಸ್ವಾಮಿಗಳು, ಚನ್ನಬಸವಾನಂದ ಸ್ವಾಮೀಜಿ
ಚರಂತಿ ಮಠದ ಪೂಜ್ಯ ಪ್ರಭು ಸ್ವಾಮಿಗಳು, ಟೀಕಿನ ಮಠದ ರೇವಣಸಿದ್ಧ ಸ್ವಾಮಿಗಳು, ಕರ್ನಾಟಕ ರಾಜ್ಯ ರಾ.ಬ.ದಳದ ಅಧ್ಯಕ್ಷ ವೀರಣ್ಣ ಲಿಂಗಾಯತ್




ದಿ: 16-01-2007, ಬಾಗಲಕೋಟೆ ಜಿಲ್ಲಾಧಿಕಾರಿಗಳಿಗೆ ಮನವಿ ಸಮರ್ಪಣೆ




ದಿ: 19-01-2007ರಂದು ಮನವಿ ಸ್ವೀಕರಿಸಲು ಬಂದಿರುವ ಸಚಿವ ಡಿ.ಟಿ.ಜಯಕುಮಾರ್
ಮತ್ತು ಆರೋಗ್ಯ ಸಚಿವ ಆರ್.ಅಶೋಕ್, ಶಾಸಕರಾದ ಡಿ.ಟಿ.ರವಿ



ದಿ: 19-01-2007ರಂದು ನಡೆದ ಪ್ರತಿಭಟನಾ ಸಭೆಯಲ್ಲಿ ಎಡದಿಂದ ಬಲಕ್ಕೆ ಜೈನ ಮುಖಂಡರಾದ ಉತ್ತಮ್ ಚಂದ ಜಾಖಡ್, ಗೋಯಂಕಾ,
ದಯಾನಂದ ಸ್ವಾಮೀಜಿ, ನಿವೃತ್ತಿ ಮುಖ್ಯ ನ್ಯಾಯಾಧೀಶರು ಮಾಜಿ ರಾಜ್ಯಪಾಲರಾದ ರಾಮಾಜೋಯಿಸ್, ಪೂಜ್ಯ ಮಾತಾಜಿ,
ಪೂಜ್ಯ ಚನ್ನಬಸವಾನಂದ ಸ್ವಾಮೀಜಿ, ಲಿಂಗಾಯತ ಧರ್ಮ ಮಹಾಸಭಾ ಅಧ್ಯಕ್ಷರಾದ ಎನ್. ಪುಟ್ಟರುದ್ರ, ಪೂಜ್ಯ ಜ್ಞಾನೇಶ್ವರಿ ಮಾತಾಜಿ.



ನೆಹರು ಪಾರ್ಕಿನಲ್ಲಿ ದಿ: 25-1-07ರಂದು ಧರಣಿ ಸತ್ಯಾಗ್ರಹದ ವೇದಿಕೆ. ಬಸವಕುಮಾರ ಸ್ವಾಮೀಜಿ, ಎನ್.ಪುಟ್ಟರುದ್ರ,
ಮಾತಾಜಿ, ಜೈನ್ ಮುಖಂಡರು ಗೋಯಂಕಾ, ದಯಾನಂದ ಸ್ವಾಮೀಜಿ, ಶರಣ ಶರಣೆಯರು, ಶಾಲಾ ಮಕ್ಕಳು.



ದಿ: 25-01-2007ರಂದು ನೆಹರು ಪಾರ್ಕಿನಲ್ಲಿ ಪೂಜ್ಯ ಮಾತಾಜಿಯವರ ನೇತೃತ್ವದಲ್ಲಿ ಧರಣಿ ಸತ್ಯಾಗ್ರಹ



ಧರಣಿ ಸತ್ಯಾಗ್ರಹದಲ್ಲಿ ನಿರತರಾದ ಶಾಲಾ ಮಕ್ಕಳು



ಉಪ ಮುಖ್ಯ ಮಂತ್ರಿ ಬಿ.ಎಸ್. ಎಡೆಯೂರಪ್ಪ ಅವರನ್ನು ಭೇಟಿ ಮಾಡಿದ ಮೇಲೆ
ಈ ಟಿ.ವಿಯವರಿಗೆ ಸಂದರ್ಶನ ನೀಡುತ್ತಿರುವ ಪೂಜ್ಯ ಮಾತಾಜಿಯವರು,
ಪೂಜ್ಯ ದಯಾನಂದ ಸ್ವಾಮೀಜಿ, ಶರಣ. ಪುಟ್ಟರುದ್ರಪ್ಪ, ಪೂಜ್ಯ ಬಸವ ಕುಮಾರ ಸ್ವಾಮೀಜಿ,
ಶ್ರೀಕಂಠಕುಮಾರ್, ಪೂಜ್ಯ ಜ್ಞಾನೇಶ್ವರಿ ಮಾತಾಜಿ ಜೊತೆಯಲ್ಲಿದ್ದಾರೆ.



ಧಾರವಾಡ ರಾಷ್ಟ್ರೀಯ ಬಸವ ದಳದವರಿಂದ ಪ್ರೌಢ ಶಿಕ್ಷಣ ಸಚಿವ ಬಸವರಾಜ ಹೊರಟ್ಟಿಯವರಿಗೆ
ಕೋಳಿ ಮೊಟ್ಟೆ ಕೊಡುವ ಯೋಜನೆಯನ್ನು ಕೈಬಿಡಲು ಒತ್ತಾಯಿಸಿ ಮನವಿ ಸಲ್ಲಿಸಿದರು




ಬೀದರ್ ನಗರದದಲ್ಲಿ ದಿ: 25-01-2007ರಂದು ನಡೆದ ಬೃಹತ್ ಪ್ರತಿಭಟನಾ ಮೆರವಣಿಗೆ ವಿವಿಧ ಸಸ್ಯಾಹಾರಿ ಸಮಾಜಗಳ ಒಕ್ಕೂಟದಿಂದ ನೇತೃತ್ವ ಪೂಜ್ಯ ಚನ್ನ ಬಸವಾನಂದ ಸ್ವಾಮೀಜಿ ಮತ್ತು ಪೂಜ್ಯ ಸಿದ್ಧರಾಮೇಶ್ವರ ಸ್ವಾಮೀಜಿ.




ರಾಷ್ಟ್ರೀಯ ಬಸವ ದಳ, ಲಿಂಗಾಯತ ಧರ್ಮ ಮಹಾಸಭಾ, ಜೈನ್ ಸಮಾಜ, ಬ್ರಾಹ್ಮಣ ಸಮಾಜ ಮುಂತಾದವರು ಸೇರಿದ ಭಾರತೀಯ ಸಸ್ಯಾಹಾರಿ ಸಮಾಜಗಳ ಒಕ್ಕೂಟದ ಅಧ್ಯಕ್ಷರಾದ ವೀರ ರಾಜೇಂದ್ರ ಜೈನ್ ಅವರಿಂದ ಬೆಳಗಾವಿ ಜಿಲ್ಲಾಧಿಕಾರಿ ಶ್ರೀಮತಿ ಶಾಲಿನಿ ರಜನೀಶ್ ಅವರಿಗೆ ಮನವಿ ಅರ್ಪಣೆ.




ಬೀದರ್ ಜಿಲ್ಲಾಧಿಕಾರಿ ಮುನೀಶ ಮೌದ್ಗಿಲ್ ಅವರಿಗೆ ಮಕ್ಕಳಿಂದ ಮನವಿ ಸಮರ್ಪಣೆ, ಪೂಜ್ಯ ಚನ್ನ ಬಸವಾನಂದ ಸ್ವಾಮೀಜಿ, ವಕೀಲ ಗಂಗಶೆಟ್ಟಿ ಪಾಟೀಲ್



ಬೀದರ್ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಮುಂದೆ ಧರಣಿ ಕುಳಿತಿರುವ ವಿವಿಧ ಸಮಾಜಗಳ ಸದಸ್ಯರು.




ಮುಖ್ಯ ಮಂತ್ರಿಗಳ ಮನೆಯ ಬಳಿ ಧರಣಿ ಸತ್ಯಾಗ್ರಹಕ್ಕೆ ಮೊದಲು ಪಾದಯಾತ್ರೆ



ಕೋಳಿ ಮೊಟ್ಟೆ ಯೋಜನೆ ಕೈಬಿಡಲು ಸಂಕೇಶ್ವರದಲ್ಲಿ ತಹಸೀಲ್ದಾರರಿಗೆ ಮನವಿ ಅರ್ಪಣೆ.ಚಿತ್ರದಲ್ಲಿ
ಡಾ||ಶಿ.ಬಾ.ಪಾಟೀಲ್, ಎಂ.ಬಿ. ಪರ್ವತರಾವ್, ಶಿವಾನಂದ,ಎಸ್.ಆರ್.ದೇಸಾಯಿ, ಬಿ.ಬಿ.ಘೋರ್ಪಡೆ,
ಮಲ್ಲಯ್ಯ ಸೂರ್ಯಕಾಂತ, ದಯಾನಂದ ಲಠೆ, ನಂದ ಕುಮಾರ ಸದಗಲಿ, ಹೆಬ್ಬಾಳ್ಳಿ ಮಲ್ಲಿಕಾರ್ಜುನ ಕುರಬೆಟ್ಟ
ಬ್ರಾಹ್ಮಣ ಸಮಾಜದ ಮುಖಂಡರು, ಜೈನ್ ಸಮಾಜ, ಸಿಂಪಿ ಸಮಾಜ, ಹಿಂದೂ ಏಕತಾ, ಶಾಲಾ ಮಕ್ಕಳೆಲ್ಲ ಪಾಲ್ಗೊಂಡಿದ್ದಾರೆ.



ದಿ: 12-12-2006ರಂದು ಬೆಳಗಾವಿಗೆ ಶರಣ ಮೇಳ ಪ್ರಚಾರಕ್ಕೆ ಆಗಮಿಸಿದ ಪೂಜ್ಯ ಗಂಗಾ ಮಾತಾಜಿಯವರು
ಹಿಂಡಲಗಾ ಜೈಲಿನಲ್ಲಿ ಉಪನ್ಯಾಸ ನೀಡಲು ಬಂದಾಗ ಸೂಪರಿಂಟೆಂಡೆಂಟ್ ಡಿ.ಬಿ.ಕಡ್ಲಿ ಸ್ವಾಗತಿಸುತ್ತಿದ್ದಾರೆ.



ಹಿಂಡಲಗಾ ಜೈಲಿನ ಬಂದಿವಾಸಿಗಳೊಬ್ಬರಿಂದ ಭಾಷಣ.



25-01-2007ರಂದು ಜಿಲ್ಲಾಧಿಕಾರಿಗಳ ಕಾರ್ಯಾಲಯದ ಬಳಿ
ಕೋಳಿ ಮೊಟ್ಟೆ ಯೋಜನೆ ಪ್ರತಿಭಟಿಸಿ ಧರಣಿ ಸತ್ಯಾಗ್ರಹ.



ಕಲ್ಯಾಣ ಪರ್ವದ ಪ್ರಚಾರದ ನಿಮಿತ್ತ ಮಹದೇಶ್ವರ ಬೆಟ್ಟದಿಂದ ಜ್ಯೋತಿ ಯಾತ್ರೆಯನ್ನು ದಿ: 31-01-2007ರಂದು ಉದ್ಘಾಟಿಸಲಾಯಿತು. ಪೂಜ್ಯ [illegible] ಮಹಾದೇವ ಸ್ವಾಮೀಜಿ, ಪೂಜ್ಯ ಮಾತೆ ಗಂಗಾದೇವಿ, ಪೂಜ್ಯ ಜ್ಞಾನೇಶ್ವರಿ, ಪೂಜ್ಯ [illegible]

ಅಖಿಲ ಭಾರತ ವೀರಶೈವ ಮಹಾಸಭೆ ಸಾಗಿ ಬಂದ ದಾರಿ ಹಾಗೂ ಸಾಗಬೇಕಾದ ರೀತಿ

- ಪೂಜ್ಯ ಶ್ರೀ ಸಿದ್ಧರಾಮ ಸ್ವಾಮಿಗಳು
ನಾಗನೂರು ರುದ್ರಾಕ್ಷಿ ಮಠ. ಬೆಳಗಾವಿ

ವಿಶ್ವಗುರು ಬಸವಣ್ಣನವರಿಂದ ಸ್ಥಾಪಿತವಾದ, ವರ್ಗ- ವರ್ಣ ಭೇದರಹಿತವಾದ ಲಿಂಗಾಯತ ಧರ್ಮವು ಹದಿನೇಳನೆಯ ಶತಮಾನದವರೆಗೆ ಅತ್ಯಂತ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಆ ವೇಳೆಗಾಗಲೇ ಗುರು ಬಸವಣ್ಣನವರ ಭಕ್ತಿತತ್ತ್ವವನ್ನು ಮೆಚ್ಚಿಕೊಂಡು ಆಂಧ್ರದ ಬ್ರಾಹ್ಮಣರು, ಲಕುಲೀಶ, ಪಾಶುಪತ ಮತ್ತು ಕಾಳಾಮುಖ ಮಠಾಧೀಶರು ಲಿಂಗಧಾರಿಗಳಾಗಿ ಈ ಧರ್ಮವನ್ನು ಸೇರಿದ್ದರೂ ತಮ್ಮ ಅಸ್ತಿತ್ವವನ್ನು ಕಾಯ್ದುಕೊಳ್ಳುವುದಕ್ಕಾಗಿ ಶ್ರಮಿಸುತ್ತಿದ್ದರು. ಲಿಂಗಾಯತ ಧರ್ಮಕ್ಕೆ ವೀರಶೈವ ಎಂಬ ಪರ್ಯಾಯ ಹೆಸರನ್ನಿಟ್ಟುಕೊಂಡಿರುವುದು, ಅದಕ್ಕೆ ಪ್ರಾಚೀನತೆಯನ್ನು ಮತ್ತು ಆಗಮ ಪ್ರತಿಷ್ಠೆಯನ್ನು ತಂದುಕೊಡುವ ಯತ್ನ ಮಾಡಿರುವುದು ಸಿದ್ಧಾಂತ ಶಿಖಾಮಣಿ, ಶ್ರೀಕರ ಭಾಷ್ಯ, ಕ್ರಿಯಾಸಾರದಂತಹ ಗ್ರಂಥಗಳನ್ನು ರಚಿಸಿಕೊಂಡಿರುವುದು ಈ ಕಾರಣಕ್ಕಾಗಿಯೆ ಎಂಬುದು ಸರ್ವಶ್ರುತ. ಈ ಗ್ರಂಥಗಳ ಮೂಲಕ ಅವರು ತಮ್ಮ ತಮ್ಮ ಗೋತ್ರ-ಸೂತ್ರಗಳನ್ನು ತಮ್ಮ ಪ್ರಭಾವ ಮತ್ತು ಸಂಪರ್ಕಕ್ಕೆ ಒಳಗಾದವರಿಗೆಲ್ಲ ಬೋಧಿಸುತ್ತಿದ್ದರು. ಇಂದು ಕೇವಲ ಜಾತಿ ಜಂಗಮರು ಮಾತ್ರ ಹೇಳಿಕೊಳ್ಳುತ್ತಿರುವ ವೀರ, ನಂದಿ, ಭೃಂಗಿ ಮುಂತಾದ ಗೋತ್ರಗಳು ಲಿಂಗಾಯತ ಧರ್ಮದಲ್ಲಿ ಇರಲಿಲ್ಲ. ಧರ್ಮಗುರು ಬಸವಣ್ಣನವರು-

ಗೋತ್ರ ನಾಮವ ಬೆಸಗೊಂಡರೆ
ಮಾತು ನೂಂಕದೆ ಸುಮ್ಮನಿದ್ದಿರಿದೇನಯ್ಯಾ?
ತಲೆಯ ಕುತ್ತಿ, ನೆಲನ ಬರೆಯುತ್ತಿದ್ದಿರಿದೇನಯ್ಯಾ?
ಗೋತ್ರ ಮಾದಾರ ಚನ್ನಯ್ಯ, ಡೋಹಾರ ಕಕ್ಕಯ್ಯನೆಂಬುದೇನು,

ಎಂದು ಹೇಳಿರುವುದನ್ನು ಗಮನಿಸಿದರೆ ಅವರ ತತ್ವಕ್ಕೆ ವಿರೋಧವಾದ ಈ ಗೋತ್ರ ಸೂತ್ರಗಳು ನಂತರ ಈ ಧರ್ಮದಲ್ಲಿ ಸೇರಿದ ವಿಷಯ ನಿಸ್ಸಂಶಯವಾಗಿದೆ. ಶ್ರೀ ಗೋವಿಂದ ಮಂಗೇಶ ಕಾಲೇಲಕರ ಅವರು ಮುಂಬೈ ಇಲಾಖೆಯಲ್ಲಿಯ ಜಾತಿಗಳು ಎಂಬ ತಮ್ಮ ಗ್ರಂಥದಲ್ಲಿ "ಜಾತಿಭೇದವನ್ನು ನಿವಾರಣೆ ಮಾಡಲಿಕ್ಕಾಗಿಯೇ ಲಿಂಗಾಯತ ಧರ್ಮವು ಹುಟ್ಟಿಕೊಂಡಿತು. ಲಿಂಗಧಾರಿಗಳು ಸಮಾನರೆಂಬುದು ಈ ಧರ್ಮದ ಸಿದ್ಧಾಂತ. ಆರಂಭದಲ್ಲಿ ಈ ತತ್ವ ಆಚರಣೆಯಲ್ಲಿದ್ದರೂ ಕಾಲಾ ನಂತರದಲ್ಲಿ ನೂರಾರು ಜಾತಿಗಳನ್ನು ಉಂಟು ಮಾಡಿತು." ಎಂದು ಹೇಳಿರುವುದು ಈ ಮಾತಿಗೆ ನಿದರ್ಶನವೆನ್ನುವಂತಿದೆ.

19ನೆಯ ಶತಮಾನ

ದೇಶದಲ್ಲಿ ಉಂಟಾದ ಮುಸಲ್ಮಾನರ ಹಾವಳಿ, ಪೇಶ್ವೆಯವರ ಪ್ರಭುತ್ವ ಕಾರಣವಾಗಿ ಲಿಂಗಾಯತರು ಸಾಮಾಜಿಕವಾಗಿ ತೀರ ಹೀನಸ್ಥಿತಿಯನ್ನು ಅನುಭವಿಸುವಂತಾಯಿತು. 19ನೆಯ ಶತಮಾನದ ವೇಳೆಗೆ ಅನಕ್ಷರತೆ, ದಾರಿದ್ರ್ಯ ಮತ್ತು ಅಜ್ಞಾನಗಳಿಂದ ಬಳಲುವಂತಾಗಿತ್ತು. ವರ್ಣವಾದಿಗಳು ಲಿಂಗಾಯತರನ್ನು ಶೂದ್ರರೆಂದು ಹೀಯಾಳಿಸತೊಡಗಿದ್ದರು. ಬಸವಾದಿ ಶಿವ ಶರಣರ ವಚನಗಳು ಮೂಲೆಗುಂಪಾಗಿ ಧಾರ್ಮಿಕ ಆಚರಣೆಗಳೂ ಲಿಂಗಾಯತರಲ್ಲಿ ಶೂನ್ಯವಾಗಿದ್ದವು. ಆ ಕಾಲದ ಕೆಲವೇ ಕೆಲವು ವಿದ್ಯಾವಂತ ಲಿಂಗಾಯತರು ಈ ಹೀನಸ್ಥಿತಿಯನ್ನು ಕಂಡು ಮಮ್ಮಲ ಮರುಗಿದರು. ಆಗಲೇ ದೇಶದಲ್ಲಿ ಇಂಗ್ಲೀಷರ ಪ್ರಭುತ್ವ ನೆಲೆಗೊಂಡಿದ್ದ ಕಾರಣ ವಿದ್ಯಾಪ್ರಸಾರ ಹಾಗು ಲಿಂಗಾಯತ ಸಮಾಜದ ಉನ್ನತಿಯ ಕಡೆಗೆ ಗಮನ ಹರಿಸಲಾರಂಭಿಸಿದರು. ಡೆಪ್ಯೂಟಿ ಚನ್ನಬಸಪ್ಪ ಅವರು ಕ್ರಿ.ಶ.1868ರಲ್ಲಿ ಬೆಳಗಾವಿಯಲ್ಲಿ ಪ್ರಾರಂಭಿಸಿದ "ಲಿಂಗಾಯತ ಬೋರ್ಡಿಂಗ್" ಈ ದಿಶೆಯಲ್ಲಿ ಪ್ರಥಮ ಹೆಜ್ಜೆ ಎನ್ನಬಹುದು.

ಲಿಂಗಾಯತ ಸಮಾಜದ ಗಣ್ಯರಾದ ಅರಟಾಳ ರುದ್ರಗೌಡರು, ಸಿರಸಂಗಿ ಲಿಂಗರಾಜ ದೇಸಾಯರು, ಗಿಲಗಂಚಿ ಗುರುಸಿದ್ದಪ್ಪ, ವಾರದ ಮಲ್ಲಪ್ಪ, ಕೆ.ಪಿ.ಪುಟ್ಟಣ್ಣ ಚೆಟ್ಟಿ ಮುಂತಾದವರು ಲಿಂಗಾಯತರನ್ನು ಸಾಮಾಜಿಕ ಹಾಗು ಧಾರ್ಮಿಕ ಹೀನಸ್ಥಿತಿಯಿಂದ ಮೇಲೆತ್ತುವ ಪ್ರಾಮಾಣಿಕ ಪ್ರಯತ್ನ ಮಾಡಿದರು. ವಿದ್ಯಾ ಪ್ರಸಾರಕ್ಕೆ ಒತ್ತುಕೊಡುವುದಲ್ಲದೆ ಧಾರ್ಮಿಕ ಶಿಕ್ಷಣಕ್ಕೆ ಸಂಸ್ಕೃತವೇ ಅತ್ಯವಶ್ಯವೆಂದು ತಿಳಿದು ಸಂಸ್ಕೃತ ಪಾಠ ಶಾಲೆಗಳನ್ನು ಪ್ರಾರಂಭಿಸಿದರು. ಸಂಸ್ಕೃತ ಭಾಷೆಯ ಉನ್ನತ ವ್ಯಾಸಂಗಕ್ಕಾಗಿ ಅನೇಕರನ್ನು ಕಾಶಿ (ಸಂಸ್ಕೃತ ವಿದ್ಯಾ ಕೇಂದ್ರ) ಗೆ ಕಳಿಸಿದರು. ಅನೇಕ ಭಿನ್ನಾಭಿಪ್ರಾಯಗಳ ಮಧ್ಯದಲ್ಲಿಯೂ ಅರಿತೋ ಅರಿಯದೆಯೋ ಅಥವಾ ದೂರಾಲೋಚನೆಯ ಕೊರತೆಯಿಂದಾಗಿಯೋ ಕೆಲವು ಅನರ್ಥಗಳು ಈ ಸಂದರ್ಭದಲ್ಲಿ ಜರುಗಿರುವುದನ್ನು ನಮ್ಮ ಇತಿಹಾಸದ ಪುಟಗಳಿಂದ ಸ್ಪಷ್ಟವಾಗಿ ತಿಳಿಯಬಹುದಾಗಿದೆ.

ಬ್ರಾಹ್ಮಣ್ಯದ ಚಪಲ

ವರ್ಣವಾದಿಗಳು ಲಿಂಗಾಯತರನ್ನು ಶೂದ್ರರೆಂದು ಕರೆಯುತ್ತಿದ್ದ ಕಾರಣ ಈ ಹೆಸರಿನಿಂದ ತಪ್ಪಿಸಿಕೊಂಡು ಬ್ರಾಹ್ಮಣರೆಂದು ಹೇಳಿಸಿಕೊಳ್ಳಲು ಪ್ರಯತ್ನ ಮಾಡಿದುದು, ಲಿಂಗಾಯತ ಎಂಬ ಹೆಸರನ್ನು ಬಳಕೆಯಲ್ಲಿ ಕಡಿಮೆಮಾಡಿ ವೀರಶೈವ ಎಂಬ ಹೆಸರನ್ನು ಹೆಚ್ಚು ಪ್ರಚಲಿತಗೊಳಿಸಿದುದು, ವೀರಶೈವ ಲಿಂಗೀಬ್ರಾಹ್ಮಣ ಎಂಬ ವಿಚಿತ್ರ ಹೆಸರನ್ನು ಹೊಂದಿದುದು ಈ ಸಮಯದಲ್ಲಿಯೇ ಎಂದು ಹರ್ಡೇಕರ್ ಮಂಜಪ್ಪ ಅವರು ತಮ್ಮ ಬಸವಮಹಾನುಭಾವನ ಶುದ್ಧಿ ಮತ್ತು ಸಂಘಟನೆ ಎಂಬ ಪುಸ್ತಕದಲ್ಲಿ ಸ್ಪಷ್ಟಪಡಿಸಿದ್ದಾರೆ. ಇದೂ ಅಲ್ಲದೆ ಬಸವೇಶ್ವರರು ವೀರಶೈವ ಮತ ಸ್ಥಾಪಕನಲ್ಲ, ಪಂಚಾಚಾರ್ಯರೇ ವೀರಶೈವ ಮತ ಸ್ಥಾಪಕರೆಂತಲೂ ಬಸವೇಶ್ವರರು ಈ ಮತದ ಉದ್ಧಾರಕರೆಂತಲೂ ಮೊದಲನೆಯ ವೀರಶೈವ ಮಹಾಸಭೆಯ ಮೀಟಿಂಗ್ ತಪ್ಪು ತೀರ್ಮಾನ ಮಾಡಿದುದರ ಕಾರಣವಾದರೂ ಈ ಬ್ರಾಹ್ಮಣ್ಯದ ಅಪೇಕ್ಷೆಯೇ ಎಂದು ಹೇಳಿದ ಅವರು ಬಸವಾದಿ ಪ್ರಮಥರ ವಿಷಯದಲ್ಲಿ ಆಗ ಎಲ್ಲರಿಗೂ ಅಪಾರ ಗೌರವವಿದ್ದರೂ ಅವರ ತತ್ವಗಳ ನಿಜ ಜ್ಞಾನದ ಅಭಾವ, ಸಂಸ್ಕೃತ ಶಿಕ್ಷಣದಿಂದುಂಟಾದ ಬ್ರಾಹ್ಮಣೀ ಪ್ರವೃತ್ತಿ, ಶೂದ್ರರೆಂಬ ಹೆಸರನ್ನು ತೆಗೆಯಿಸಿಕೊಳ್ಳುವ ಆತುರತೆ, ಇವುಗಳಿಂದಲೇ ಧರ್ಮ ವಿರೋಧಿ ಕಾರ್ಯಗಳು ಜರುಗಿದವು ಎಂಬುದನ್ನು ಸ್ಪಷ್ಟವಾಗಿ ಗುರುತಿಸಿದ್ದಾರೆ.

"ನಾನು ಹಾರುವನೆಂದರೆ ಕೂಡಲ ಸಂಗಮದೇವ ನಗುವನಯ್ಯ" ಎಂಬುದಾಗಿ ಮತ್ತು "ವರ್ಣಾನಾಂ ಬ್ರಾಹ್ಮಣೋ ಗುರುಃ ಎಂಬುದು ಹುಸಿ, ವರ್ಣಾನಾಂ ಗುರು ನಮ್ಮ ಕೂಡಲ ಸಂಗನ ಶರಣರು" ಎಂದು ಹೇಳಿರುವ ಆ ಬಸವ ಮಹಾನುಭಾವರ ಅನುಯಾಯಿಗಳು (ಧರ್ಮೀಯರು) ಬ್ರಾಹ್ಮಣರೆಂದು ಹೇಳಿಕೊಳ್ಳುವುದು ಮತ್ತು ಹಾಗೆ ಅನ್ನರು ಹೇಳಲೆಂದು ಸಲ್ಲದ ರೀತಿಯಲ್ಲಿ ನಡೆಯುವುದು ಅತ್ಯಾಶ್ಚರ್ಯವಲ್ಲವೇ? ಎನ್ನುತ್ತಾರೆ ಹರ್ಡೇಕರ ಮಂಜಪ್ಪನವರು (ರಾಷ್ಟ್ರ ಧರ್ಮ ದ್ರಷ್ಟಾರ ಪು.ಪು.448-490)

ತಪ್ಪು ನಿರ್ಣಯ ಅಂಗೀಕಾರ

ಕ್ರಿ.ಶ.1909ರಲ್ಲಿ ಬಳ್ಳಾರಿಯಲ್ಲಿ ಸೇರಿದ ವೀರಶೈವ ಮಹಾಸಭೆಯಲ್ಲಿ ಪಟ್ಟಚರಮೂರ್ತಿ ವಿರಕ್ತ-ಈ ಅಧಿಕಾರ ಸ್ಥಾನಗಳಿಗೆ ವಿದ್ಯಾಶೀಲಾದಿ ಯೋಗ್ಯತೆಯುಳ್ಳ ಅಯ್ಯಾಚಾರದ ಮನೆತನದ ಗುರುಸ್ಥಲದ ವಟುಗಳನ್ನೇ ಆರಿಸಿಕೊಳ್ಳಲು ಪ್ರತಿಯೊಂದು ಸ್ಥಳದ ವೀರಶೈವರು ಪ್ರಯತ್ನವನ್ನು ಮಾಡಬೇಕು ಎಂದು ಈ ಮಹಾಸಭೆಯವರಾದ ನಾವು ನಿರ್ಧಾರ ಮಾಡಿರುತ್ತೇವೆ. ಎಂದು ನಿರ್ಣಯ (ಠರಾವು 7) ಪಾಸು ಮಾಡುವ ಮೂಲಕ ಭಕ್ತರೆಂದು ಹೇಳಿಸಿಕೊಳ್ಳುವವರಲ್ಲಿಯೇ ಅನೇಕರು ತಮ್ಮ ಯೋಗ್ಯತೆಯಿಂದ ಗುರು-ಲಿಂಗ-ಜಂಗಮರಾಗುತ್ತಿದ್ದ ಶಾಸ್ತ್ರ ಸಮ್ಮತವಾದ ಪ್ರಾಚೀನ ಪದ್ಧತಿಯನ್ನು ತೆಗೆದು ಹಾಕಿ ಭಕ್ತರು ಮತ್ತು ಮಾಹೇಶ್ವರರು ಎಂಬೆರಡು ಜನ್ಮ ವಿಶಿಷ್ಟ ಜಾತಿಗಳನ್ನೇ ಹುಟ್ಟುಹಾಕಿರುವುದು

ಕೂಡ ಹರ್ಡೇಕರ ಮಂಜಪ್ಪನವರ ದೃಷ್ಟಿಯಲ್ಲಿ ಬ್ರಾಹ್ಮಣ್ಯದ ಹಂಬಲದಿಂದುಂಟಾದ ವಿಷಫಲ. ಹೀಗೆ 20ನೆಯ ಶತಮಾನದ ಪ್ರಾರಂಭದಲ್ಲಿ ವರ್ಣವ್ಯವಸ್ಥೆಯಲ್ಲಿ ಶ್ರೇಷ್ಠತ್ವವನ್ನು ಹೊಂದಿದ ಬ್ರಾಹ್ಮಣರಾಗಲು ವೀರಶೈವ ಪದ ಬಳಕೆಯನ್ನು ಎಲ್ಲರೂ ವ್ಯಾಪಕವಾಗಿ ಬಳಸಲು ಪ್ರಾರಂಭಿಸಿರುವುದು, ಅದಕ್ಕೆ ಪ್ರಾಚೀನತೆಯನ್ನು, ವೇದಾಗಮ ಪ್ರತಿಷ್ಠೆಯನ್ನು ತಂದು ಕೊಡಲು ಸುಳ್ಳು ದಾಖಲೆಗಳನ್ನು ಸೃಷ್ಟಿಸಿರುವುದು, ಇತಿಹಾಸವನ್ನು ಮರೆ ಮಾಚಿ ಪೌರಾಣಿಕ ಕಟ್ಟುಕತೆಗಳನ್ನು ಮುಂದೆ ಮಾಡಿರುವುದು ನಮ್ಮ ಇತಿಹಾಸದ ಅವಲೋಕನದಿಂದ ಕಂಡು ಬರುವ ಅಂಶವಾಗಿದೆ. ಈ ಎಲ್ಲಾ ಕಾರ್ಯಗಳಿಗೂ ಅಖಿಲ ಭಾರತ ವೀರಶೈವ ಮಹಾಸಭೆಯೇ ಮುಖವಾಣಿಯಂತೆ ಕಾರ್ಯ ಮಾಡಿದೆ. ಇದರ ಕುಕೃತ್ಯದ ದುಷ್ಫಲವನ್ನು ನಾವೀಗ ಸ್ವಾತಂತ್ರ್ಯಾ ನಂತರದ ಭಾರತದಲ್ಲಿ ಕಣ್ಣಾರೆ ಕಾಣುತ್ತಿದ್ದೇವೆ. ಇಂದು ಬಸವಣ್ಣನವರ ಲಿಂಗಾಯತ ಧರ್ಮ ಜಾತಿ- ಉಪಜಾತಿಗಳಲ್ಲಿ ಹರಿದು ಹಂಚಿ ಹೋಗಿದೆ. ವೈದಿಕರ ಹೋಮ- ಹವನ, ಯಜ್ಞಯಾಗಾದಿಗಳು, ಬಹುದೇವತಾ ಉಪಾಸನೆ, ಸ್ಥಾವರ ಪೂಜೆ ಇತ್ಯಾದಿಗಳು ಸೇರಿಕೊಂಡು ವೈದಿಕ ಧರ್ಮದ ಆಚರಣೆಯಲ್ಲಿ ಲಿಂಗಾಯತ ಧರ್ಮದ ಆಚರಣೆಗಳು ಕಾಣದಂತಾಗಿವೆ. ಸರಕಾರದ ಮೀಸಲಾತಿ ಸೌಲಭ್ಯವನ್ನು ಪಡೆಯಲು ಲಿಂಗಾಯತರ ಪಂಗಡ- ಒಳಪಂಗಡಗಳಲ್ಲಿ ಸ್ಪರ್ಧೆಯೇ ಏರ್ಪಟ್ಟಿದೆ. ಒಮ್ಮೊಮ್ಮೆ ಈ ಸ್ಪರ್ಧೆ ಪರಸ್ಪರ ಕಾಲೆಳೆಯುವ ಹಂತಕ್ಕೆ ಹೋಗಿರುವುದೂ ಉಂಟು. ಒಂದೊಮ್ಮೆ ಶ್ರೇಷ್ಠರೆನಿಸಿ ಸಮಾಜದ ಎಲ್ಲ ಸೌಕರ್ಯಗಳನ್ನು ಉಂಡು ಅನುಭವಿಸಿದ ಜಾತಿಯೊಂದು ಜಂಗಮ, ಬೇಡ ಜಂಗಮ, ಬುಡುಗ ಜಂಗಮ ಹೆಸರಿನಲ್ಲಿ ಹಿಂದುಳಿದ ದಲಿತರ ಸೌಕರ್ಯಗಳನ್ನು ಕಬಳಿಸಲು ಪ್ರಯತ್ನಿಸಿರುವುದು, ಯಾವಾಗಲೂ ಆಶೀರ್ವಾದ ಮಾಡುವುದೇ ನಮ್ಮ ಜನ್ಮ ಸಿದ್ಧ ಹಕ್ಕು ಎಂದು ಭಾವಿಸಿದ ಕೆಲವು ಪೀಠಾಧಿಪತಿಗಳು ಈ ಕಾರ್ಯಕ್ಕೆ ಪ್ರಮಾಣ ಪತ್ರ ನೀಡಿದಲ್ಲದೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮುಖ್ಯ ಮಂತ್ರಿಗಳನೇಕರಿಗೆ ಮನವಿ ಸಲ್ಲಿಸಿರುವುದು ಸ್ವಾರ್ಥಕ್ಕಾಗಿ ಯಾವ ಹಂತಕ್ಕಾದರೂ ಮನುಷ್ಯ ಇಳಿಯ ಬಲ್ಲ ಎಂಬುದಕ್ಕೆ ಸಾಕ್ಷಿಯಾಗಿದೆ.

ನಿರ್ಣಯಕ್ಕೆ ಪ್ರತಿ ನಿರ್ಣಯ

ಅಖಿಲ ಭಾರತ ವೀರಶೈವ ಮಹಾಸಭೆ ಮಾಡಿರುವುದೆಲ್ಲವೂ ತಪ್ಪು ಎಂದು ಹೇಳುವುದು ಈ ಲೇಖನದ ಉದ್ದೇಶವಲ್ಲ. ಕಾಲ ಕಾಲಕ್ಕೆ ಜರುಗಿದ ಅನೇಕ ಅಧಿವೇಶನಗಳಲ್ಲಿ ಹಿಂದೆ ಆಗಿ ಹೋದ ತಪ್ಪುಗಳನ್ನು ತಿದ್ದಿಕೊಳ್ಳುವ ಪ್ರಾಮಾಣಿಕ ಪ್ರಯತ್ನವೂ ನಮ್ಮ ಹಿರಿಯರಿಂದ ನಡೆದಿದೆ. ಒಮ್ಮೊಮ್ಮೆ ನಮ್ಮ ಧರ್ಮ ಹಾಗೂ ಧರ್ಮದ ಸಂವಿಧಾನಕ್ಕೆ ವಿರುದ್ಧವಾದ ತಪ್ಪುಗಳೂ ಜರುಗಿವೆ. ಅವುಗಳೆಲ್ಲವನ್ನೂ ಪರಾಮರ್ಶಿಸಿ ಮುಂದಿನ ಹೆಜ್ಜೆಯನ್ನು ಇಡಬೇಕಾಗಿದೆ. ಉದಾಹರಣೆಗಾಗಿ 1933ರಲ್ಲಿ ಧಾರವಾಡದಲ್ಲಿ ಜರುಗಿದ ಅಖಿಲ ಭಾರತ ವೀರಶೈವ ಮಹಾಸಭೆಯ ಅಧಿವೇಶನದಲ್ಲಿ - ವೀರಶೈವ ಧರ್ಮವು ಧಾರ್ಮಿಕ ಹಾಗು ಸಾಮಾಜಿಕ ವಿಷಯಗಳಲ್ಲಿ ಯಾವ ಬಗೆಯ ಜಾತಿಭೇದವನ್ನೂ ಅಂಗೀಕರಿಸುವುದಿಲ್ಲ. ಆದ್ದರಿಂದ ಅದರ ಉಪಪಂಗಡಗಳಲ್ಲಿ ಏಕೀಕರಣವು ಎಲ್ಲ ರೀತಿಯಿಂದ ತೀವ್ರವಾಗಿ ಆಗಲಿಕ್ಕೆ ಸಮಾಜದವರು ತಮ್ಮ ಶಕ್ತ್ಯಾನುಸಾರ ಪ್ರಯತ್ನಿಸಬೇಕೆಂದು ಈ ಮಹಾಸಭೆಯು ನಿರ್ಣಯಿಸುತ್ತದೆ. ಎಂದು ಹೇಳಿರುವುದು; ಕ್ರಿ.ಶ.1909ರಲ್ಲಿ ಬಳ್ಳಾರಿಯಲ್ಲಿ ಜರುಗಿದ ವೀರಶೈವ ಮಹಾಸಭೆಯ ಅಧಿವೇಶನದಲ್ಲಿ ಕೈಗೊಂಡ ಜಾತಿಭೇದ ನಿರೂಪಿಸುವ 7ನೆಯ ನಿರ್ಣಯವನ್ನು ವಿರೋಧಿಸುವುದನ್ನು ನೋಡಿದರೆ ಎರಡು ದಶಕಗಳ ಅಂತರದಲ್ಲಿಯೇ ಮಹಾಸಭೆಯ ಕಾರ್ಯಶೈಲಿಯಲ್ಲಿ ಸುಧಾರಣೆ ಕಂಡು ಬಂದಿರುವುದು ಗಮನಿಸಬಹುದಾದ ಪ್ರಮುಖ ಅಂಶವಾಗಿದೆ.

ಲಿಂಗಾಯತ ಪದ ಬಳಕೆಗೆ ವಿಶೇಷ ಒತ್ತು

ಕ್ರಿ.ಶ.1940ರಲ್ಲಿ ಅಂದಿನ ಮದ್ರಾಸ ಪ್ರಾಂತ್ಯದ ಕುಂಭಕೋಣಂದಲ್ಲಿ ನಡೆದ ಅಖಿಲ ಭಾರತ ವೀರಶೈವ ಮಹಾಸಭೆಯ ಅಧಿವೇಶನದಲ್ಲಿ ತೆಗೆದುಕೊಂಡ ಮಹತ್ವಪೂರ್ಣ ನಿರ್ಣಯಗಳನ್ವಯ 19-08-1940ರ ಶರಣ ಸಂದೇಶ ಪತ್ರಿಕೆಯಲ್ಲಿ ಆ ಅಧಿವೇಶನದ ಅಧ್ಯಕ್ಷರಾದ ಬ್ಯಾರಿಸ್ಟರ್

ಎಂ.ಎಸ್. ಸರ್ದಾರ್ ಅವರು ಸಮಾಜ ಬಾಂಧವರ ಅವಗಾಹನೆಗಾಗಿ ಪ್ರಕಟಣೆಯೊಂದನ್ನು ನೀಡಿದ್ದಾರೆ. ಅದರ ಸಾರ ಇಂತಿದೆ:- ಮುಂಬರುವ 1941ರ ಮಾರ್ಚ ಒಂದನೇ ತಾರೀಖಿನ ಜನಗಣತಿಯ ಕಾಲದಲ್ಲಿ ಲಿಂಗಾಯತರು ತಮ್ಮ ಒಳಭೇದಗಳ ಹೆಸರುಗಳನ್ನು ಬರೆಯಿಸದೇ ಅಂದರೆ ಕುಂಬಾರ, ಗಾಣಿಗ, ಬಳೆಗಾರ, ಗೌಳಿಗ ಮುಂತಾದ ಕಾಯಕಗಳ ಮೇಲಿಂದ ಬಂದ ಹೆಸರುಗಳನ್ನು ಬರೆಯಿಸದೇ ಎಲ್ಲರೂ ಲಿಂಗಾಯತರೆಂದೇ ಬರೆಯಿಸಬೇಕು. ಇಂಥ ಒಳಭೇದಗಳನ್ನು ಬರೆಯಿಸಿದರೆ ಬೇರೆ ಹಿಂದುಗಳಲ್ಲಿಯ ಆಯಾ ಜಾತಿಯವರ ಸಂಖ್ಯೆಯಲ್ಲಿಯೇ ಇವರ ಹೆಸರೂ ಸೇರಿ ಹೋಗಿ ಒಟ್ಟು ಲಿಂಗಾಯತರ ಸಂಖ್ಯೆ ಎಷ್ಟೆಂಬುದೇ ಗೊತ್ತಾಗುವುದಿಲ್ಲವೆಂತಲೂ, ಲಿಂಗಾಯತರ ಸಂಖ್ಯೆ ಪ್ರತ್ಯೇಕವಾಗಿ ಗೊತ್ತಾಗಬೇಕಿದ್ದರೆ ಒಳ ಭೇದಗಳನ್ನು ಬರೆಯಿಸದೆ ಎಲ್ಲ ಲಿಂಗಾಯತರೂ ಲಿಂಗಾಯತ ಎಂಬುದಾಗಿಯೇ ಬರೆಯಿಸಬೇಕು. ಲಿಂಗಾಯತರು ವರ್ಣಾಶ್ರಮಗಳನ್ನುಮಾನ್ಯ ಮಾಡುವುದಿಲ್ಲವಾದುದರಿಂದ ಲಿಂಗಾಯತರು ಹಿಂದುಗಳಲ್ಲವೆಂದು ವೀರಶೈವ ಮಹಾಸಭೆಯ ಅಧ್ಯಕ್ಷರ ಈ ಪ್ರಕಟಣೆಯಲ್ಲಿ ಹೇಳಲಾಗಿದೆ ಎಂದೂ ಹರ್ಡೇಕರ ಮಂಜಪ್ಪನವರು ಒಂದೆಡೆ ಸ್ಪಷ್ಟಪಡಿಸಿದ್ದಾರೆ. (ರಾಷ್ಟ್ರ ಧರ್ಮ ದ್ರಷ್ಟಾರ ಪು.1062)

ದಿನಾಂಕ 16-10-1940ರಂದು ಬೆಳಗಾವಿಯಲ್ಲಿ ಜರುಗಿದ ಅಖಿಲ ಭಾರತ ವೀರಶೈವ ಮಹಾಸಭೆಯ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಲಿಂಗಾಯತರು ಹಿಂದುಗಳಲ್ಲ ಎಂದು ಗೊತ್ತುವಳಿ ಪಾಸು ಮಾಡಿರುವುದನ್ನು ಅವರು ಮತ್ತೊಂದೆಡೆ ಉಲ್ಲೇಖಿಸಿದ್ದಾರೆ. (ಈ ಗೊತ್ತುವಳಿಗೆ ಪ್ರೊ.ಶಿ.ಶಿ.ಬಸವನಾಳ, ಎಂ. ಆರ್. ಸಾಖರೆ, ಡಾ. ಎಸ್.ಸಿ. ನಂದೀಮಠ, ಬಿ. ಪುಟ್ಟಸ್ವಾಮಯ್ಯ ಮುಂತಾದ 12 ಜನ ಗಣ್ಯರು ಸಹಿ ಮಾಡಿದ್ದಾರೆ)

ಇದೂ ಅಲ್ಲದೆ 1940ರಲ್ಲಿ ಜರುಗಿದ ಕುಂಭಕೋಣಂ ಅಧಿವೇಶನದಲ್ಲಿಯೇ- ಮದ್ರಾಸ ಸರಕಾರವು ತನ್ನ ಸರ್ಕಾರಿ ಆಜ್ಞಾ ಕ್ರಮಾಂಕ 1710 ಜುಲೈ 7, 1929ರ ಆಜ್ಞಾಪತ್ರದಲ್ಲಿ ಲಿಂಗಾಯತ ಸಮಾಜದಲ್ಲಿಯ ಎಲ್ಲ ಪಂಗಡಗಳ ಜನರನ್ನು ಎಲ್ಲ ಸಾರ್ವಜನಿಕ ಹಾಗು ಸರ್ಕಾರಿ ದಾಖಲೆಗಳಲ್ಲಿ ಲಿಂಗಾಯತರೆಂದು ಪರಿಗಣಿಸುವುದಾಗಿ ಸಾರಿದ್ದಕ್ಕಾಗಿ ಅಧಿವೇಶನವು ಮದ್ರಾಸ ಸರ್ಕಾರಕ್ಕೆ ಕೃತಜ್ಞತೆ ಸಲ್ಲಿಸುತ್ತದೆ ಮತ್ತು ಅದೇ ರೀತಿ ಮುಂಬೈ ಸರಕಾರ ಮತ್ತು ಎಲ್ಲ ಪ್ರಾಂತೀಯ ಸರಕಾರಗಳನ್ನು ಇಂಥದೇ ಸರಕಾರಿ ಆಜ್ಞಾ ಪತ್ರಗಳನ್ನು ಹೊರಡಿಸಿ ಕಾರ್ಯರೂಪಕ್ಕೆ ತರಬೇಕೆಂದು ವಿನಂತಿಸಿಕೊಳ್ಳುತ್ತದೆ. ಎಂದು ನಿರ್ಣಯ ಮಾಡಿರುವುದು ತನ್ನ ತಪ್ಪು ಹೆಜ್ಜೆಗಳನ್ನು ಸರಿಪಡಿಸಿಕೊಂಡು ಬಸವಣ್ಣನವರ ಜಾತಿ ಭೇದ ರಹಿತವಾದ ಲಿಂಗಾಯತ ಧರ್ಮವನ್ನು ತಮ್ಮದೆಂದು ಸ್ವೀಕರಿಸಿರುವುದರ ದ್ಯೋತಕವಾಗಿದೆ.

ಸಾಗಬೇಕಾದ ರೀತಿ

ಇಷ್ಟೆಲ್ಲ ನಡೆದಿರುವುದು ಸ್ವಾತಂತ್ರ್ಯ ಪೂರ್ವದಲ್ಲಿ. ಆಗ ಬ್ರಿಟಿಷರ ಆಡಳಿತವಿದ್ದ ಕಾಲ. ಮೀಸಲಾತಿಯ ಯಾವುದೇ ಆಸೆ ಆಮಿಷಗಳು ಆಗ ನಮ್ಮ ಹಿರಿಯರ ಮುಂದಿರಲಿಲ್ಲ. ಅದೇ ಪ್ರಯತ್ನವನ್ನು ಪಟ್ಟುಹಿಡಿದು ಮುಂದುವರೆಸಿದ್ದರೆ ಇಂದು ಲಿಂಗಾಯತ ಧರ್ಮವೂ ಜೈನ,ಬೌದ್ಧ, ಸಿಖ್ಖ ಧರ್ಮಗಳಂತೆ ಸ್ವತಂತ್ರ ಧರ್ಮವಾಗಿ ಕಂಗೊಳಿಸುತ್ತಿತ್ತು. ಲಿಂಗಾಯತರು ಹಿಂದುಗಳಲ್ಲವೆಂದು ಕೆಲವು ಲಿಂಗಾಯತ ಪ್ರಮುಖರು ಬಹಳ ದಿನಗಳಿಂದ ವಾದಿಸುತ್ತ ಬಂದಿದ್ದರೂ ಅವರ ಪ್ರಾಮಾಣಿಕ ಧ್ವನಿಗೆ ಆ ದಿನಗಳಲ್ಲಿ ಬೆಂಬಲ ದೊರೆಯದಿರುವುದು ನಮ್ಮ ದುರ್ದೈವವೆ. ಇಂದು ನಮಗೆ ಸ್ವಾತಂತ್ರ್ಯ ಲಭಿಸಿ ಆರು ದಶಕಗಳೇ ಸಂದಿವೆ. ಪ್ರಜಾಪ್ರಭುತ್ವ ಸರಕಾರ ಎಲ್ಲೆಡೆ ಕಾರ್ಯ ನಿರ್ವಹಿಸುತ್ತಿವೆ. ಹಿಂದುಳಿದವರಿಗಾಗಿ ಮೀಸಲಾತಿಯ ಸೌಲಭ್ಯ ಕಲ್ಪಿಸಿವೆ. ವೀರಶೈವ ಪದ ಪ್ರಯೋಗ ಕಾರಣವಾಗಿ ಹಿಂದು ಧರ್ಮಕ್ಕೆ ಸೇರಿದವರೆಂಬಂತೆ ಲಿಂಗಾಯತರನ್ನೂ (ಬ್ರಾಹ್ಮಣರಂತೆ) ಸೇರಿಸಲಾಗಿದೆ. ವೀರಶೈವವು ಅನೇಕ ರಾಜ್ಯಗಳಲ್ಲಿ ವ್ಯಾಪಿಸಿರುವ ಶೈವದ ಶಾಖೆಯಾಗಿರುವುದೇ ಈ ದುರಂತಕ್ಕೆ ಕಾರಣವೆನ್ನಬಹುದು. ಸರ್ಕಾರದ ಮೀಸಲಾತಿ ಸೌಲಭ್ಯವನ್ನು ಪಡೆಯುವುದಕ್ಕಾಗಿ ಇಂದು ನಮ್ಮ ಸಮಾಜದ ಪಂಗಡ-ಒಳಪಂಗಡಗಳು ಒಡೆದು

ಹೋಳಾಗುತ್ತಿರುವುದನ್ನು ತಪ್ಪಿಸಲು ನಮ್ಮ ಧರ್ಮದ ಎಲ್ಲ ಪಂಗಡ-ಒಳಪಂಗಡಗಳಿಗೂ ಸಮಾನ ಮೀಸಲಾತಿ ಸೌಲಭ್ಯ ದೊರಕಿಸಲು ಪ್ರಯತ್ನಿಸಬೇಕಾದುದು ಅತ್ಯವಶ್ಯವಾಗಿದೆ. ಬಸವಾದಿ ಶಿವಶರಣರು ಆಚರಿಸಿದ ತಾತ್ವಿಕ ಮೌಲ್ಯಗಳ ಹಿನ್ನಲೆಯಲ್ಲಿ ಅವರ ಅನುಯಾಯಿಗಳಾದ ನಾವು ಹಿಂದುಗಳಿಂದ ತೀರ ಭಿನ್ನ ಎಂಬುದನ್ನು ಎತ್ತಿ ತೋರಿಸಿ ಸರಕಾರದ ಕಣ್ಣು ತೆರೆಯಿಸಬೇಕಾಗಿದೆ. ವೀರಶೈವ ಪದವನ್ನು ಉಳಿಸಿಕೊಂಡು ನಾವು ಹಿಂದುಗಳಲ್ಲ ಮತ್ತು ಜೈನ, ಬೌದ್ಧ, ಸಿಖ್ಖ ಧರ್ಮಗಳಂತೆ ನಮ್ಮ ಧರ್ಮವು ಸ್ವತಂತ್ರವಾದ ಧರ್ಮ ಎಂಬುದನ್ನು ಸಿದ್ಧಪಡಿಸುವುದು ಕಷ್ಟಸಾಧ್ಯವಾದ ಮಾತು. ಒಂದೊಮ್ಮೆ ನಾವು ಸ್ವತಂತ್ರ ಧರ್ಮೀಯರು ಎನಿಸಿಕೊಂಡರೆ ಜೈನ, ಕ್ರಿಶ್ಚಿಯನ್ನರಂತೆ ಧಾರ್ಮಿಕ ಅಲ್ಪ ಸಂಖ್ಯಾತರೆನಿಸಿ ಮೀಸಲಾತಿಯ ಸೌಲಭ್ಯಗಳನ್ನು ಎಲ್ಲ ಒಳಪಂಗಡಗಳವರು ಸಮಾನವಾಗಿ ಹಂಚಿಕೊಂಡು ಬದುಕಲು ಸಾಧ್ಯವಾಗುತ್ತದೆ. ಆರ್ಥಿಕವಾಗಿ ಎಲ್ಲರೂ ಉನ್ನತಿಯನ್ನು ಸಾಧಿಸಿದಾಗ ಪಂಗಡ-ಒಳಪಂಗಡಗಳಲ್ಲಿ ವ್ಯತ್ಯಾಸಗಳೂ ಕ್ರಮೇಣ ಕರಗಲು ಸಾಧ್ಯವಾಗುವುದು. ಕ್ರಿ.ಶ.1940ರಲ್ಲಿ ಮಹಾಸಭೆಯ ಪದಾಧಿಕಾರಿಗಳು ಚಿಂತಿಸಿದಂತೆ ಸುದೀರ್ಘ 67 ವರ್ಷಗಳ ನಂತರ ಮತ್ತೆ ಈಗ ಚಿಂತಿಸಬೇಕಾದ ಅಗತ್ಯವಿದೆ. ಇದು ಪ್ರತಿಷ್ಠೆಯ ಪ್ರಶ್ನೆಯಾಗಬಾರದು. ಸಮಾಜ ಬಾಂಧವರ ಹಿತವನ್ನು ಕಾಯುವುದು, ಸಮಾಜದಲ್ಲಿ ಒಗ್ಗಟ್ಟನ್ನು ಉಳಿಸಿಕೊಂಡು ಹೋಗುವುದು ಸಮಾಜದ ಚುಕ್ಕಾಣಿಯನ್ನು ಹಿಡಿದವರ ಕರ್ತವ್ಯವಾಗಿದೆ. ಈಗ್ಗೆ ಮತ್ತೆ ಲಿಂಗಾಯತ ಮತ್ತು ವೀರಶೈವ ಶಬ್ದಗಳ ತಾಕಲಾಟ ಪ್ರಾರಂಭವಾಗಿದೆ. ಬಹುಸಂಖ್ಯಾತರು ಲಿಂಗಾಯತ ಪದ ಪ್ರಯೋಗದ ಕಡೆಗೆ ಒಲವು ತೋರುತ್ತಿದ್ದಾರೆ. ಉತ್ತರ ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಂತೂ ಶತಮಾನಗಳಿಂದ ಲಿಂಗಾಯತ ಶಬ್ದವು ಜನಮನದಲ್ಲಿ ನೆಲೆಯೂರಿ ನಿಂತಿದೆ. ಈ ವಿಷಯದಲ್ಲಿ ನಮ್ಮ ನಮ್ಮ ಸ್ವಾರ್ಥ ಪ್ರತಿಷ್ಠೆಗಳನ್ನು ಬದಿಗೊತ್ತಿ ಸಮಾಜದ ಹಿತ ಕಾಯುವ ಕಾರ್ಯವನ್ನು ನಾವೆಲ್ಲ ಮಾಡೋಣ. ಮಹಾಸಭೆಯ ಪದಾಧಿಕಾರಿಗಳೂ ಈ ದಿಶೆಯಲ್ಲಿ ಹೆಜ್ಜೆ ಹಾಕುವರೆಂದು ನಾವೆಲ್ಲ ಆಶಿಸೋಣ.

---

108 ಅಡಿ ಬೃಹತ್ ಬಸವ ಪುತ್ಥಳಿ ನಿರ್ಮಾಣ

ಬಸವ ಕಲ್ಯಾಣದ ಬಸವ ಧರ್ಮ ಪೀಠದ ಶರಣ ಶೈಲದ ಮೇಲೆ 108 ಅಡಿ ಎತ್ತರದ ಗುರು ಬಸವಣ್ಣನವರ ಮೂರ್ತಿಯ ಅಡಿಪಾಯದ ಕೆಲಸ ಬಸವಣ್ಣನವರ ಕಾರಣಿಕೋತ್ಸವದ ದಿನ 1-9-2004ರಂದು ಆರಂಭವಾಯಿತು. 24 ಅಡಿ ಭೂಮಿಯ ಕೆಳಗಿನಿಂದ ಕಾಲಮ್ (ಸ್ತಂಬ)ಗಳನ್ನು ಎತ್ತಿ 80ಅಡಿ ಉದ್ದ, 50 ಅಡಿ ಅಗಲದ 2 ಹಾಲ್ 1) ಭೂಮಿಯ ಕೆಳಗೆ 12 ಅಡಿ, 2)ಭೂಮಿಯ ಮೇಲೆ 12 ಅಡಿ ಮತ್ತು ಮೂರ್ತಿಗೆ ಅತಿ ಮುಖ್ಯ ಆಧಾರವಾದ ಬೆನ್ನುಹುರಿ ಆಗಿ, ಪೀಠದ ಸ್ಲ್ಯಾಬ್ ಪೂರ್ಣಗೊಂಡಿದೆ.

ಕೆಳಗಿನ 2 ಹಾಲ್‌ಗಳಲ್ಲಿ ಗುರು ಬಸವಣ್ಣನವರ ಜೀವನದ ಪ್ರಮುಖ ಘಟನೆಗಳನ್ನು ಮೂರ್ತೀಕರಿಸಲಾಗುವುದು. ಒಂದೊಂದು ಅಂಥ ಮಂಟಪ (ಗೂಡು)ಕ್ಕೆ ಎಷ್ಟು ಖರ್ಚು ಬರುವುದು ಎಂಬ ಬಗ್ಗೆ ವಿವರ ನಂತರ ತಿಳಿಸಲಾಗುವುದು. ಒಬ್ಬರೇ ದಾನಿಗಳು ಅಂಥ ಖರ್ಚನ್ನು ವಹಿಸಿಕೊಳ್ಳಬಹುದು.

ಇನ್ನು ಮೂರ್ತಿಯ ಆಕಾರವು ಪ್ರಾರಂಭವಾಗಲಿದೆ. ದಿ 21-1-2007ರಂದು ವಿಧ್ಯುಕ್ತವಾಗಿ ಪೂಜೆ ಮಾಡಿ, ಕಾರ್ಯಕ್ರಮ ನಡೆಸಲಾಗಿದೆ. ಈ ಕೆಲಸಕ್ಕೆ ಬೇಕಾದ ಸಾಮಗ್ರಿಗಳನ್ನು ಹೊಂದಿಸಿಕೊಳ್ಳಲಾಗುತ್ತಿದೆ. ಪ್ರಸ್ತುತ ಕೆಲಸವು ಅಖಂಡವಾಗಿ ನಡೆಯಬೇಕು. ಇದಕ್ಕೆ ಅಪಾರ ಹಣ ಬೇಕು. ಆದ್ದರಿಂದ ಸಹೃದಯರು ಉದಾರವಾಗಿ ಕಾಣಿಕೆ ನೀಡಬೇಕು. ನಿಮ್ಮ ಬಂಧು ಮತ್ತು ಪರಿಚಿತರಿಗೆ ಪ್ರೇರಣೆ ನೀಡಬೇಕು. ಈ ಪವಿತ್ರ ಕಾರ್ಯಕ್ರಮಕ್ಕೆ ನಿಮ್ಮೆಲ್ಲರ ಸಹಾಯ ಸಹಕಾರ ಬೇಕು. ಎಂಬುದನ್ನು ಆತ್ಮೀಯರ ಗಮನಕ್ಕೆ ತರುತ್ತಲಿದ್ದೇವೆ.

ಪೂಜ್ಯಶ್ರೀ ಜಗದ್ಗುರು ಮಾತೆ ಮಹಾದೇವಿ

ಬೆಂಗಳೂರು

ಸಮಸ್ಯೆ..? - ಸಮಾಧಾನ..!

ಧನರಾಜ್ ಬಿರಾದರ್, ಗುಲಬರ್ಗಾ

?ಪೇಜಾವರ ಶ್ರೀಗಳು ಕರೆ ನೀಡಿ, ದಲಿತರ ಕೇರಿಗಳಿಗೆ ತಾವು ಹೋಗುವುದು ಮಾತ್ರವಲ್ಲ ಅವರನ್ನು ಮಠಕ್ಕೂ ಆಹ್ವಾನಿಸುವುದಾಗಿಯೂ ಮತ್ತು ದಲಿತರಿಗೆ ಮಂತ್ರ ದೀಕ್ಷೆ ಕೊಡುವುದಾಗಿಯೂ ಹೇಳಿದ್ದಾರೆ. ಈ ಬಗ್ಗೆ ತಮ್ಮ ಅಭಿಪ್ರಾಯವೇನು?

★ ವೈದಿಕ ಧರ್ಮಾನುಯಾಯಿ ಮಠಾಧೀಶರ ಪೈಕಿ ಪೇಜಾವರ ಶ್ರೀಗಳು ಪರವಾಗಿಲ್ಲ; ಅವರಿಗೆ ದೇಶದ ಸಮಸ್ಯೆ ಹಿಂದು ಸಮಾಜದ ವಿಪತ್ತಿನ ಅರಿವು ಇದೆ. ಬೇರೆಯವರದು ಕೇಳಬೇಡಿರಿ. ಕಳಕಳಿಯಿಂದ ದಲಿತರ ಕೇರಿಗೂ ಹೋಗಿ ಬರುತ್ತಿದ್ದರವರು. ಈಗ ಮಂತ್ರದೀಕ್ಷೆ ಕೊಡುವುದಾಗಿ ಹೇಳುತ್ತಿದ್ದಾರೆ. ತುಂಬಾ ತಡವಾಯಿತು. 1969-70ರಲ್ಲಿ ನಾನು ಉಡುಪಿಯಲ್ಲಿ ನಡೆದ ವಿರಾಟ್ ಹಿಂದು ಸಮ್ಮೇಳನದಲ್ಲಿ ಹೇಳಿದ್ದೆ. "ದಲಿತರು, ಪರಿಶಿಷ್ಟ ಜಾತಿಯವರು ಮತಾಂತರಗೊಂಡು ಹೊರಹೋಗಬಾರದೆಂದಿದ್ದರೆ ಪ್ರತಿಯೊಬ್ಬ ಹಿಂದುವಿಗೂ ಒಂದು ರುದ್ರಾಕ್ಷಿಯನ್ನಾದರೂ ಕಟ್ಟಿ ಮಂತ್ರೋಪದೇಶ ಮಾಡಿರಿ" ಎಂದು ಭಾಷಣ ಮಾಡಿದ್ದೆ. ಆಗ ಒಂದು ಕಾಲವಿತ್ತು, ಧರ್ಮವನ್ನು ಕೊಟ್ಟರೆ ಧನ್ಯರಾದೆವು ಎಂದುಕೊಳ್ಳುತ್ತಿದ್ದರು. ಈಗಲೋ ಪೂಜೆ ಬೇಡ, ಗುರುವು ಬೇಡ, ಜಾತಿ ಜಾತಿಗಳಲ್ಲಿ ವೈರ-ಮತ್ಸರ! ಇಂಥ ಸಂದರ್ಭದಲ್ಲಿ ಮಂತ್ರೋಪದೇಶ ಯಾರಿಗೆ ಬೇಕು? ಎಲ್ಲರಿಗೂ ಬೇಕು ರಾಜಕೀಯ! ಆದ್ದರಿಂದ ಪೇಜಾವರ ಶ್ರೀಗಳು ಎಚ್ಚೆತ್ತಿರುವುದು ತಡವಾಗಿ, ಕರೆಕೊಟ್ಟಿರುವುದು ತೀರಾ ಲೇಟಾಗಿ!

ಶಿವ ಶರಣಪ್ಪ, ಬೆಂಗಳೂರು

?ಸಂಸ್ಥಾನ ಮಠ, ರಾಜಗುರು, ಸಿಂಹಾಸನ ಎಂದೆಲ್ಲ ಬಳಸುತ್ತಾರಲ್ಲ ಇದರ ಅರ್ಥವೇನು?

★ ಅರ್ಥ ಒಂದು ಕಾಲದಲ್ಲಿ ಏನೇ ಇರಲಿ, ಈಗಂತೂ ಆ ಪದಗಳು ಅರ್ಥವನ್ನು ಕಳೆದುಕೊಂಡಿವೆ. ಸುಮ್ಮನೆ ಮಠಾಧೀಶರು ಅಜ್ಞಾನದಿಂದ ಬಳಸುತ್ತಾರೆ. ಹಿಂದಿನ ಕಾಲದಲ್ಲಿ ರಾಜರ ಸಂಸ್ಥಾನಗಳಿದ್ದವು, ಅವರು ತಮ್ಮ ಸಂಸ್ಥಾನಗಳ ಧಾರ್ಮಿಕ ಸಂಪ್ರದಾಯ ಪಾಲಿಸಲು ಮಠದ ಮಾರ್ಗದರ್ಶನ ಪಡೆಯುತ್ತಿದ್ದರು. ಸಂಸ್ಥಾನಗಳೇ ಹೋದ ಮೇಲೆ ಇನ್ನು ಸಂಸ್ಥಾನಿಕ ಮಠಗಳಿಗೆ ಸ್ಥಾನವೇನಿರುತ್ತದೆ? ಹಿಂದೆ ರಾಜ ಗುರುಗಳು ಧರ್ಮ ನಿಷ್ಠರಾಗಿ ರಾಜರಿಗೆ ಮಾರ್ಗದರ್ಶನ ಮಾಡುತ್ತಿದ್ದರು. ರಾಜರು ತಪ್ಪು ಮಾಡಿದಾಗ ನಿಷ್ಠುರವಾಗಿ ಬುದ್ಧಿ ಹೇಳುತ್ತಿದ್ದರು. ಈಗಿನ ರಾಜ ಗುರುಗಳು ದಿನ ಬೆಳಗೆದ್ದರೆ ಆಧುನಿಕ ರಾಜ (ಮಂತ್ರಿಗಳ)ರ ಮುಖಸ್ತುತಿ ಮಾಡುತ್ತಾ ಅವರಿಗೆ ಯಾವ ಧರ್ಮೋಪದೇಶವನ್ನೂ ಮಾಡದೆ ಅವರ ಬಾಲಗಳಂತೆ ನಡೆದುಕೊಳ್ಳುತ್ತಾರೆ. ರಾಜ ಏರಬೇಕಾದುದು ಸಿಂಹಾಸನ. ಎಲ್ಲ ಪ್ರಾಣಿಗಳ ಮೇಲೆ ಹಿಡಿತ ಸಾಧಿಸಿ ಸಿಂಹ ಪ್ರಾಣಿರಾಜನಾದಂತೆ ರಾಜನು ತನ್ನ ಶೌರ್ಯ- ಪರಾಕ್ರಮಗಳಿಂದ ಸಾಮಂತರ ಮೇಲೆ ಹಿಡಿತ ಸಾಧಿಸಿ ಸಿಂಹಾಸನ ಏರುತ್ತಾನೆ. ಆದರೆ ಗುರುಗಳು ಆಕ್ರಮಣಕಾರಿಗಳಲ್ಲ, ಆಗಲೂ ಬಾರದು. ಅಂದಾಗ ಪೀಠ ಎಂಬ ಪದವನ್ನು ಧರ್ಮಪೀಠಗಳಿಗೆ ಬಳಸಬೇಕೇ ಹೊರತು ಸಿಂಹಾಸನ ಎಂಬ ಪದವನ್ನಲ್ಲ.

ಕೆ.ಬಸವರಾಜ, ಎಲ್.ಐ.ಸಿ. ಬೆಳಗಾವಿ

?ಚಿತ್ರದುರ್ಗದ ಮುರುಘಾ ಶರಣರು ಶ್ರೀಶೈಲದಲ್ಲಿ ಬಸವ ಮೇಳ ಎಂದು ಮಾಡಿದರು ಅವರು ಬಸವ ಸೇನೆ ಎಂಬುದನ್ನು ಸಹ ಆರಂಭಿಸಿದ್ದಾರೆ ಎಂದು ಬೆಳಗಾಂವ್‌ದಲ್ಲಿ ಕೆಲವರು ಹೇಳಿದರು. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು?

★ ಮಕ್ಕಳಿಗೆ ಹೆಸರಿಡುವುದರಲ್ಲಿ ಒಂದು ಜಾಣ್ಮೆ, ಸಂಸ್ಕೃತಿ ಇರುವಂತೆ ಸಮ್ಮೇಳನ, ಸಮಾವೇಶಗಳಿಗೆ, ಸಂಸ್ಥೆಗಳಿಗೆ, ಸಂಘಟನೆಗಳಿಗೆ ಹೆಸರಿಡುವುದರಲ್ಲೂ ಒಂದು ಅರ್ಥ, ಸಂಸ್ಕೃತಿ ಇರುತ್ತದೆ. ಚಿತ್ರದುರ್ಗದ ಮುರುಘಾ ಶರಣರು ಬಸವ ಮೇಳ ಎಂದು ಸಮಾವೇಶಕ್ಕೆ ಹೆಸರಿಟ್ಟಿರುವುದು ಅರ್ಥರಹಿತ. ಬಸವ ತತ್ವದ ಮೇಳ, ಬಸವಾನುಯಾಯಿಗಳ ಮೇಳ- ಹಾಗೆ ಇಡಬೇಕು. ಬಸವ ಮೇಳ ಎಂದರೆ ಹಲವಾರು ಬಸವಣ್ಣನವರುಗಳು ಸೇರಿದ ಕಾರ್ಯಕ್ರಮ ಎಂದಾಗುವುದು. ಇದು ಅರ್ಥವೇ ಇಲ್ಲದ್ದು. ಇನ್ನು ಬಸವ ಸೇನೆ ಎಂದು ಬಳಸುವುದು ತಪ್ಪು ಕಲ್ಪನೆ

ನೀಡುತ್ತದೆ. ಕೆಲವರು ಬೇಲಿ ಮಠ, ತಿಪ್ಪಿ ಮಠ. ಗಂಜಾಂ ಮಠ ಎಂದೆಲ್ಲ ಇಟ್ಟುಕೊಂಡಿರುತ್ತಾರೆ. ಯಾವುದಾದರೂ ಕಾಲದಲ್ಲಿ ಆ ಮಠದ ಆವರಣದಲ್ಲಿ ಬೇಲಿ ಇರಬಹುದು, ತಿಪ್ಪಿ ಮಠದ ಬಳಿ ತಿಪ್ಪೆ ಇರಬಹುದು. ಅಂಥವನ್ನು ಬದಲಿಸಿ ಶರಣ ಸಂಸ್ಕೃತಿಯ ಹೆಸರನ್ನು ಇಡುವುದು ಅತ್ಯಂತ ಸೂಕ್ತ. ಗಂಜಾಂ ಮಠ ಎಂಬುದನ್ನು ಯಾರಾದರೂ ಗಾಂಜಾ ಮಠ ಎನ್ನಲೂ ಬಹುದು. ನಮ್ಮ ಮಠಾಧಿಪತಿಗಳಿಗೆ ಏಕೆ ತಲೆ ಓಡುತ್ತಿಲ್ಲವೋ ನನಗಂತೂ ತಿಳಿಯುತ್ತಿಲ್ಲ.

? ಕರ್ನಾಟಕ ಸರ್ಕಾರ ಕೋಳಿ ಮೊಟ್ಟೆ ತಿನ್ನಿಸುವ ಯೋಜನೆಯನ್ನು ರೂಪಿಸಿದಾಗ ಶರಣ ಸಂಸ್ಕೃತಿ ಉತ್ಸವದ ನೇತಾರರಾದ ಮುರುಘಾ ಶರಣರು ಏಕೆ ಸ್ವಲ್ಪವಾದರೂ ತುಟಿ ಬಿಚ್ಚಲಿಲ್ಲ ?

★ ಅವರು ಮುರುಗಿ(ಕೋಳಿ) ಸಂಪ್ರದಾಯದವರಲ್ಲವೆ? ಅವರು ತುಟಿ ಬಿಚ್ಚದೆ ಇರುವುದಕ್ಕೆ ಸಂತೋಷ ಪಡಿ. ಏಕೆಂದರೆ ಈಗಾಗಲೇ ತುಟಿ ಬಿಚ್ಚಿ, ಲಿಂಗ ಕಟ್ಟಿಕೊಂಡವರೂ ಮಾಂಸಾಹಾರ ಮಾಡಿದರೆ ತಪ್ಪೇನಿಲ್ಲ ಎಂದು ಬಡಬಡಿಸಿ ಛೀಮಾರಿ ಹಾಕಿಸಿಕೊಂಡ ಧೀಮಂತರು ಅವರಲ್ಲವೆ?.

ಸಿ.ಬಿ. ದೇವನೂರು, ಭೀಮರಾಯನ ಗುಡಿ.

?ಬಸವ ಮಾರ್ಗ ಎನ್ನುವ ಪತ್ರಿಕೆಯಲ್ಲಿ ನವೆಂಬರ್ ಸಂಚಿಕೆಯ 15ನೆಯ ಪುಟದಲ್ಲಿ ಒಂದು ಬರಹವಿದೆ. ಪೂಜ್ಯ ಸಿದ್ಧಗಂಗಾ ಶ್ರೀಗಳನ್ನು ಒಬ್ಬರು ಸಂದರ್ಶಿಸಿದಾಗ ನೀವು ತಾಯತ, ಕರಿದಾರ, ಕಟ್ಟುವುದು ಸರಿಯೇ? ಎಂದು ಪ್ರಶ್ನಿಸಿದ್ದಾರೆ. ಅದಕ್ಕೆ ಶ್ರೀಗಳು ಉತ್ತರಿಸಿದ್ದಾರೆ, "ಮನಸ್ಸಿನ ಸಮಾಧಾನಕ್ಕಾಗಿ ಕಟ್ಟುತ್ತೇವೆ. ಇಲ್ಲದಿದ್ದರೆ ಆ ಜನ ವೈಚಾರಿಕತೆ ಹೇಳಿದರೆ ಅರ್ಥ ಮಾಡಿಕೊಳ್ಳುವುದಿಲ್ಲ; ಮತ್ತು ಬೇರೆ ಮಾರ್ಗಗಳಿಗೆ ಹೋಗುತ್ತಾರೆ. ಅನ್ಯ ಧರ್ಮಗಳಿಗೆ ಮತಾಂತರ ಹೊಂದುತ್ತಾರೆ. ಇದನ್ನು ತಪ್ಪಿಸಲು ಕಟ್ಟುತ್ತೇವೆ. ವೈಜ್ಞಾನಿಕವಾಗಿ ಸರಿಯಾಗಲಿಕ್ಕಿಲ್ಲ ಆದರೆ ಮನೋವೈಜ್ಞಾನಿಕವಾಗಿ ಹಾಗೂ ಸಾಮಾಜಿಕವಾಗಿ ಧಾರ್ಮಿಕವಾಗಿ ಇದು ತುಂಬಾ ಸರಿ" ಎಂದು ಹೇಳಿದ್ದಾರೆ. ಈ ಬಗ್ಗೆ ತಮ್ಮ ಅಭಿಪ್ರಾಯವೇನು?

★ ಲಿಂಗಾಂಗ ಯೋಗಿ ಸಿದ್ಧರಾಮೇಶ್ವರರು ತಮ್ಮೊಂದು ವಚನದಲ್ಲಿ ಹೀಗೆ ಹೇಳುತ್ತಾರೆ.

ಜಂಗಮವಾಗಿ ಫಲವೇನು,
ನೋಡಿ, ಮನದೆರೆದು ಮಾತನಾಡಿಸಿ, ಜನ ಜನನ ವಿಪಿನ
ದಾವಾನಲವಾಗದನ್ನಕ್ಕ? ಜಂಗಮವಾಗಿ ಫಲವೇನು
ಭಕ್ತನ ತನು ತಾಪತ್ರಯವ ನೋಡಿ ಮನದೆರೆದು ಮಾತನಾಡಿಸಿ ಮರುಗದನ್ನಕ್ಕ?
ಜಂಗಮವಾಗಿ ಫಲವೇನು,
ಭಕ್ತ ವಾಂಛಿತಾರ್ಥಂಗಳನರಿದು, ಪೂಜಾ ಮುಖದಿಂ ವಿಭೂತಿಯ ಕೊಟ್ಟು
ಆತನ ಪ್ರಪಂಚ ಸಂಭ್ರಮವ ನೋಡದನ್ನಕ್ಕ?
ಜಂಗಮವಾಗಿ ಫಲವೇನಯ್ಯ,
ನಮ್ಮ ಕಪಿಲಸಿದ್ಧ ಮಲ್ಲಿಕಾರ್ಜುನನ ಕೂಡಿ,
ಸುಭಕ್ತರ ಹಸ್ತದಲ್ಲಿ ಕೊಟ್ಟು ಮೋಹಮಾಡದನ್ನಕ್ಕ?

(ಸಿದ್ಧರಾಮೇಶ್ವರರ ವಚನಗಳು. ಸಂಖ್ಯೆ 552)

ಗುರು-ಜಂಗಮರದು ಒಂದು ಜವಾಬ್ದಾರಿಯುತ ಸ್ಥಾನ. ಅವರು ಮನೋವೈದ್ಯರ ಕೆಲಸ ಮಾಡುವುದೇ ಅಲ್ಲದೆ ಸಮಾಜ ಸುಧಾರಕರೂ ಆಗಿ ಕೆಲಸ ಮಾಡಬೇಕು. ಮನೋ ದೌರ್ಬಲ್ಯದಿಂದ ಜನರು ಗಾಬರಿ, ಭಯ-ಭ್ರಾಂತಿಗೆ ಒಳಗಾಗುತ್ತಾರೆ. ಅವರ ಮೂಢ ನಂಬಿಕೆ ಅಜ್ಞಾನಗಳನ್ನು ಒಳಗೇ ಇಟ್ಟು ಬರೀ ಕರಿದಾರ, ತಾಯತ ಕಟ್ಟಿ ಕಳಿಸುವುದು ಮಂತ್ರವಾದಿಗಳ ಕೆಲಸವೇ ವಿನಾ ಗುರು-ಜಂಗಮರದಲ್ಲ. ಅಷ್ಟಾವರಣಗಳಲ್ಲಿ ಬರುವ ಗುರು ಲಿಂಗ ಜಂಗಮ ವಿಭೂತಿ ರುದ್ರಾಕ್ಷಿ ಮಂತ್ರ ಕರುಣೋದಕ ಕರುಣಿ ಪ್ರಸಾದಗಳ ಮೂಲಕ ಮಾತ್ರವೇ ಅನುಗ್ರಹಿಸಬೇಕು. "ಪೂಜಾ ಮುಖದಿಂ ವಿಭೂತಿಯ ಕೊಟ್ಟು" ಎಂದು ಸಿದ್ಧರಾಮೇಶ್ವರರು ಹೇಳುವಂತೆ ಲಿಂಗಾಯತರು ಅಥವಾ ಲಿಂಗಾಯತ ಧರ್ಮವನ್ನು ಸ್ವೀಕರಿಸುವವರಾಗಿದ್ದರೆ ಇಷ್ಟಲಿಂಗ ಕೊಡಬೇಕು. ಬೇರೆಯವರಿದ್ದರೆ ವಿಭೂತಿ, ರುದ್ರಾಕ್ಷಿ, ಮಂತ್ರ ಕೊಡಬೇಕು. ತಮ್ಮ ಕಷ್ಟ ಕಾರ್ಪಣ್ಯ ಹರಿದುಕೊಳ್ಳಲು ಗುರು

ಬಸವಣ್ಣನವರ ಪೂಜೆ, ಇಷ್ಟಲಿಂಗ ಪೂಜೆ ಮಾಡಲು ಬೋಧಿಸಬೇಕು. ಮತಾಂತರ ಮಾಡುವ ಕ್ರೈಸರು ಹಿಂದುಗಳ್ಳ ಇಂಥ ಮೂಢ ಆಚರಣೆ ವಿಡಂಬಿಸಿ, ಏಕದೇವೋಪಾಸನೆ ಬೋಧಿಸಿ ಜನರನ್ನು ತಮ್ಮ ಧರ್ಮಕ್ಕೆ ಆಕರ್ಷಿಸುತ್ತಾರೆಂಬುದು ಗಮನಾರ್ಹ.

ದಯಣ್ಣ, ಮೈಸೂರು

?ಕರ್ನಾಟಕ ಸರ್ಕಾರವು ಪ್ರಾಥಮಿಕ 1ನೆಯ ತರಗತಿಯಿಂದ 7ನೆಯ ತರಗತಿಯವರೆಗೆ ಬಿಸಿಯೂಟದಲ್ಲಿ ಮೊಟ್ಟೆಯನ್ನು ಮಕ್ಕಳಿಗೆ ಕೊಡಬೇಕು ಎಂಬ ಯೋಜನೆ ಕೈಗೊಂಡಾಗ ತಾವು ಪ್ರತಿಭಟಿಸಿದಿರಿ. ಅಕ್ಷರಶಃ ಬೀದಿಗಿಳಿದು ಪಾದ ಯಾತ್ರೆ, ಧರಣಿ ಸತ್ಯಾಗ್ರಹ ಮಾಡಿದಿರಿ. ಇದು ಸರಿಯೇ? ಬೇರೆ ಮಠಾಧೀಶರು ಹೋರಾಡುವುದಿರಲಿ ಒಂದು ಪತ್ರಿಕಾ ಹೇಳಿಕೆ ಸಹ ಕೊಡಲಿಲ್ಲ.

★ ಉದಯ ಟಿ.ವಿ ಯಲ್ಲಿ ಒಂದು ಸಂದರ್ಶನ (18-01-2007) ನಡೆಯಿತು. ಮಾಜಿ ಶಿಕ್ಷಣ ಸಚಿವ ವಿಶ್ವನಾಥ ಸಹ ಮಠಾಧಿಪತಿಗಳಿಗೇಕೆ ಮೊಟ್ಟೆಯ ಉಸಾಬರಿ ಎಂದು ಪ್ರಶ್ನಿಸಿದರು. ಆಗ ನಾನು ಹೇಳಿದೆ "ಧಾರ್ಮಿಕ ಆಚರಣೆ, ನೀತಿ-ನಿಯಮ ರೂಪಿಸುವವರು ಗುರುಗಳು, ಮಠಾಧೀಶರು" ಎಂದು. ಜನರ ಧಾರ್ಮಿಕ ನಡೆ-ನುಡಿ, ಆಚಾರ-ವಿಚಾರ, ನೀತಿ ನಿಯಮಗಳನ್ನು ತಮ್ಮ ತಮ್ಮ ಧರ್ಮಶಾಸ್ತ್ರಗಳ ಹಿನ್ನೆಲೆಯಲ್ಲಿ ಬೋಧಿಸುವವರು, ರೂಪಿಸುವವರು ಧರ್ಮಗುರುಗಳೇ ವಿನಾ ರಾಜಕಾರಣಿಗಳಲ್ಲ. ಹೇಗೆ ದೇಶದ ಗಡಿಯನ್ನು ರಕ್ಷಿಸುವುದು ಗಡಿ ಭದ್ರತಾ ಪಡೆಯ ಕೆಲಸವೋ ಹಾಗೇ ಧರ್ಮ, ನೀತಿ, ಆಚಾರ - ವಿಚಾರಗಳನ್ನು ರಕ್ಷಿಸುವವರು ಗುರುಗಳು, ಧರ್ಮಾಧಿಕಾರಿಗಳು. ತನ್ನ ಧಾರ್ಮಿಕ ಸಂಸ್ಕೃತಿ, ಆಚರಣೆಗೆ ಚ್ಯುತಿ ಬಂದಾಗ ಹೋರಾಡ ಬೇಕಾದುದು ಮಠಾಧೀಶರ ಕರ್ತವ್ಯ.

ನಮ್ಮ ಮಠಾಧೀಶರು ಪ್ರತಿಭಟಿಸುವುದಿರಲಿ ಒಂದು ಪತ್ರಿಕಾ ಹೇಳಿಕೆ ಸಹ ಕೊಡದೆ ಇರುವುದು ಬಹಳ ವಿಷಾದನೀಯ. ದಿನ ಬೆಳಗೆದ್ದರೆ ಅವರ ಹಿಂದೆ-ಮುಂದೆ-ಅಕ್ಕ-ಪಕ್ಕದಲ್ಲಿ ಮುಖ್ಯ ಮಂತ್ರಿಗಳಾದಿಯಾಗಿ ಇಡೀ ಸಚಿವ ಸಂಪುಟವೇ ಇರುವಂಥ ಪ್ರಭಾವ ಇರುವಾಗ ಏಕೆ ಸುಮ್ಮನೆ ಕೂತರೋ! ಖಾಸಗಿಯಾಗಿ ಹೇಳಿದ್ದೇವೆ ಎಂದು ಸಮರ್ಥಿಸಿಕೊಳ್ಳಬಹುದು. ಬಹಿರಂಗದಲ್ಲಿ ಸಮಾಜ-ಧರ್ಮಗಳ ಪರವಾಗಿ ಮಾತನಾಡುವದು,ಅವಕ್ಕೆ ಸಂಕಷ್ಟ ಬಂದಾಗ ಪ್ರತಿಭಟಿಸುವುದೇ ಗಣಾಚಾರ; ಅದು ಜಂಗಮನ ಕಾಯಕ ಮತ್ತು ಕರ್ತವ್ಯ.

ಎಳನಡುವಿನ ಸೋಮಶೇಖರಪ್ಪ, ತೋಟದ ಮನೆ

ಪ್ರ.1? ಶ್ರೀ ಸಿದ್ಧರಾಮೇಶ್ವರ ಜಯಂತಿ ಉತ್ಸವ ಸಮಿತಿಯವರು ಪ್ರಕಟಿಸಿದ ಸ್ಮರಣ ಸಂಚಿಕೆಯೊಂದರಲ್ಲಿ ವೇದಮೂರ್ತಿ ಟಿ.ಎಸ್. ಗುರುಸಿದ್ಧಶಾಸ್ತ್ರಿ ಎಂಬುವವರು ತಮಿಳುನಾಡಿನ ಕಂಚೀಪುರದ ಪಲ್ಲವ ವಂಶದ ರಾಜರು ಪರಮಶಿವೋಪಾಸಕರು; ಕಾಮ ಮಹಾರಾಜನು ಮಾಮಲ್ಲ ಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದನು. ಅವನು ಶಿರದಲ್ಲಿ ಲಿಂಗವನ್ನು ಧರಿಸಿದ್ದನು. ಆದ್ದರಿಂದ ವೀರಶೈವ ಮತದಲ್ಲಿ ಕಂಡು ಬರುವ ಲಿಂಗಧಾರಣೆ ಪುರಾತನವಾದುದು. 1500 ವರ್ಷಗಳ ಹಿಂದೆಯೇ ಪಲ್ಲವರಾಜರು ಲಿಂಗಧಾರಿಗಳಾಗಿದ್ದರು ಎಂದು ಬರೆದಿದ್ದಾರೆ. (ಪುಟ.53-54) ಇದಕ್ಕೆ ತಮ್ಮ ಅಭಿಪ್ರಾಯವೇನು?

★ ಬೆಟ್ಟ ಅಗೆದು ಇಲಿ ತೆಗೆದಂತೆ ಅದೂ ಸತ್ತ ಇಲಿಯನ್ನು- ವೇದಮೂರ್ತಿ ಗುರುಸಿದ್ಧ ಶಾಸ್ತ್ರಿಗಳದ್ದಾಗಿದೆ. 1)ವೀರಶೈವ ಮತ ಪುರಾತನ, ಶೈವ ಪಂಥಗಳಲ್ಲಿ ಒಂದು 2) ಚರಲಿಂಗಗಳನ್ನು ಅಂದರೆ ದೇವಾಲಯಗಳಲ್ಲಿರುವ ಸ್ಥಾವರ ಲಿಂಗದ ಚುಳುಕಾದ ಗಾತ್ರದವು, ಧರಿಸುವ ಸಂಪ್ರದಾಯ ಪುರಾತನ. ಕೆಲವರು ಬುಟ್ಟಿಗಳಲ್ಲಿ, ಚೀಲಗಳಲ್ಲಿ ಇಡುತ್ತಿದ್ದರು; ಮತ್ತೆ ಕೆಲವರು ತಲೆಯ ಮೇಲೆ ಧರಿಸುತ್ತಿದ್ದರು; ಸನ್ಯಾಸಿಗಳು ಜಟೆಯೊಳಗೆ ಇಟ್ಟುಕೊಳ್ಳುತ್ತಿದ್ದರು. ದಕ್ಷಿಣ ಭಾರತದ ರಾಜರು, ಲಂಕಾ ಚಕ್ರಾಧಿಪತಿ ರಾವಣ ಮುಂತಾದವರೆಲ್ಲರೂ ಅಪ್ಪಟ ಶಿವ ಭಕ್ತರು,ಪರಮ ಶಿವೋಪಾಸಕರು.ಲಿಂಗಾಯತ ಧರ್ಮದ ಇಷ್ಟಲಿಂಗವು ದೇವ ಸೂಚಕ, ಗೋಳಾಕಾರ ಉಳ್ಳುದು; ಇದರ ಜನಕರು ಬಸವಣ್ಣನವರು; ಇಷ್ಟಲಿಂಗಾಧಾರಿತ ಲಿಂಗಾಯತ ಧರ್ಮ ಬಸವಣ್ಣನವರಿಂದ ಬಂದಿರುವಂಥದು:

ಬಸವ ಕಲ್ಯಾಣದ ಕಲ್ಯಾಣ ಪರ್ವಕ್ಕೆ ಧನ ಸಂಗ್ರಹ - ಸಹಾಯಕ್ಕೆ ಮನವಿ

ಶರಣ ಬಂಧುಗಳೇ,

2007ರ ಜನವರಿ 11ರಿಂದ 15ರ ವರೆಗೆ ನಡೆದ 20ನೆಯ ಶರಣ ಮೇಳ ತಮ್ಮೆಲ್ಲರ ಸಹಾಯ ಸಹಕಾರಗಳಿಂದ ಅಭೂತಪೂರ್ವ ಯಶಸ್ಸನ್ನು ಕಂಡಿದೆ. ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೋಕಿನ ಆಳತೆ ಗ್ರಾಮದ ವ್ಯಾಪ್ತಿಯಲ್ಲಿ ಬರುವ ಅಲ್ಲಮ ಪ್ರಭು ಗಿರಿಯಲ್ಲಿ 2007ರ ಮಾರ್ಚ್ 18, 19 ಮತ್ತು 20ರಂದು ಎರಡನೆಯ ಲಿಂಗಾಯತ ಗಣ ಮೇಳವು ನಡೆಯಲಿದ್ದು. ಇನ್ನು ಮುಂದೆ ಪ್ರತಿ ವರ್ಷದ ಚೈತ್ರ ಮಾಸದ ಯುಗಾದಿ ಅಮವಾಸ್ಯೆ,ಯುಗಾದಿ ಪಾಡ್ಯ ಮತ್ತು ಮರುದಿನದಂದು ಈ ಲಿಂಗಾಯತ ಗಣ ಮೇಳವು ನಡೆಯಲಿದೆ. ಅದೇ ರೀತಿ 2007ರ ಮೇ 1,2 ಮತ್ತು 3ರಂದು ಬಸವ ಕಲ್ಯಾಣದಲ್ಲಿ 6ನೆಯ ಕಲ್ಯಾಣ ಪರ್ವವು ನಡೆಯಲಿದೆ.

ಶರಣ ಮೇಳದ ನಿರ್ವಹಣೆಗೆ ರಸೀತಿ ಪುಸ್ತಕಗಳನ್ನು ಅಂಚೆಯಲ್ಲಿ ನಾವು ಕಳಿಸುತ್ತೇವೆ. ಪುನಃ ರಸೀತಿ ಪುಸ್ತಕಗಳನ್ನು ಕಳಿಸಲು ನಮಗೆ ಬಹಳ ಸಂಕೋಚ ಎನಿಸುತ್ತದೆ. ಆದರೆ ಅವು ಸಹ ಅನಿವಾರ್ಯ ಕಾರ್ಯಕ್ರಮಗಳು. ಶರಣರ ಕ್ಷೇತ್ರಗಳ ಸಂರಕ್ಷಣೆ, ಪುನರುತ್ಥಾನ ದೃಷ್ಟಿಯಿಂದ ಗಣ ಪರ್ವಗಳನ್ನು ಹಮ್ಮಿಕೊಳ್ಳಲೇಬೇಕಾಗಿದೆ. ಇದರಿಂದ ನಮಗೂ ಮಾನಸಿಕ ಒತ್ತಡ; ಅವಿಶ್ರಾಂತ ಕೆಲಸವಾಗುತ್ತದೆಂಬುದನ್ನು ನೀವು ಬಲ್ಲಿರಿ. ಜೊತೆಗೆ ನಮ್ಮ ಸಂಸ್ಥೆಯ ಮುಖ್ಯಸ್ಥರಿಗೆ, ಸಿಬ್ಬಂದಿಗೆ ಸಹ ಬಹಳ ಶ್ರಮ, ಬಳಲಿಕೆ. ಆದರೂ, ಬೇರೆ ಬೇರೆ ಭಾಗಗಳಲ್ಲಿ ಸಂಸ್ಥೆಗಳು ಸ್ಥಾಯಿಯಾಗಿ, ವಾರ್ಷಿಕ ಕಾರ್ಯಕ್ರಮಗಳು ನಡೆಯುವಂತಾದರೆ ಸಂಘಟನಾ ಕಾರ್ಯ ಸುಸೂತ್ರವಾಗಿ ಸಾಗುವುದೆಂದು ತ್ವರಿತಗತಿಯಲ್ಲಿ ಕಾರ್ಯೋನ್ಮುಖರಾಗಬೇಕಾಗಿದೆ. ಈ ದೃಷ್ಟಿಯಿಂದ ಆರ್ಥಿಕವಾಗಿ ಸಶಕ್ತರು ಮತ್ತು ಪ್ರಾಜ್ಞರು ನಮ್ಮ ಕಾರ್ಯದಲ್ಲಿ ಕೈಜೋಡಿಸುವುದು ಅಗತ್ಯವಿದೆ. ವೈಯಕ್ತಿಕವಾಗಿ ಅಂಥವರು ನೆರವು ನೀಡಲು ಮುಂದಾಗಿರಿ. ಮೇ 1, 2, ಮತ್ತು 3ರಂದು ನಡೆಯುವ ಕಲ್ಯಾಣ ಪರ್ವದ ರಸೀತಿ ಪುಸ್ತಕಗಳನ್ನು ನೇರವಾಗಿ ಕಳಿಸುವುದಕ್ಕೂ ನಮಗೆ ಸಂಕೋಚ. ಆದ್ದರಿಂದ ಆದಿ ಶರಣರ ಬಗ್ಗೆ ಅಭಿಮಾನ ಉಳ್ಳವರು, ಶರಣರ ಕ್ಷೇತ್ರಗಳ ಅಭಿವೃದ್ಧಿ ಅತ್ಯಗತ್ಯ ಎಂದು ಭಾವಿಸುವವರು ಫೋನ್ ಮಾಡಿ, ಪತ್ರ ಬರೆದು ರಸೀತಿ ಪುಸ್ತಕ ಮತ್ತು ಕರಪತ್ರಗಳನ್ನು ತರಿಸಿಕೊಂಡು ದೇಣಿಗೆ ಸಂಗ್ರಹಿಸಿ ಕೊಟ್ಟು ಗಣ ಪರ್ವಗಳಲ್ಲಿ ತಾವೂ ಭಾಗಿಗಳಾಗಿ ಕೃತಾರ್ಥರಾಗಬೇಕೆಂದು ಕೋರುತ್ತೇವೆ. ಫೋನ್ : 080-23325335 / 23322790

ಪೂಜ್ಯ ಶ್ರೀ ಬಸವ ಕುಮಾರ ಸ್ವಾಮೀಜಿ

ಬಸವ ಮಂಟಪ, 2035, 20ನೇ ಮೇನ್ 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು - 560010

ಪೂಜ್ಯ ಶ್ರೀ ಮಾತಾಜಿಯವರ 62ನೆಯ ವರ್ಧಂತಿ

ಪ್ರಥಮ ಮಹಿಳಾ ಜಗದ್ಗುರು, ಬಸವ ಧರ್ಮದ ಪುನರುತ್ಥಾರಕರು, ಕ್ರಾಂತ್ರಿಕಾರಿ ಧರ್ಮ ಪ್ರಸಾರಕರು, ಬಸವ ಧರ್ಮ ಪೀಠದ ಅಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು

ಮಹಾ ಜಗದ್ಗುರು ಮಾತೆ ಮಹಾದೇವಿ

ಅವರ 62ನೆಯ ವರ್ಧಂತಿ ಉತ್ಸವವನ್ನು ಬಸವ (ಮಂಗಳ) ವಾರ ದಿ: 13-3-2007 ರಂದು ಅವರ ದಿವ್ಯ ಸನಿಧಿಯಲ್ಲಿ ಬೆಳಗ್ಗೆ 11 ಗಂಟೆಗೆ ಬೆಂಗಳೂರಿನ ರಾಜಾಜಿನಗರದ 2ನೆಯ ಬ್ಲಾಕ್, 20ನೆಯ ಮುಖ್ಯ ರಸ್ತೆಯಲ್ಲಿ (ಸಿಟಿ ಹಾಸ್ಪಿಟಲ್ ಪಕ್ಕ). ಇರುವ ಬಸವ ಮಂಟಪದಲ್ಲಿ ಏರ್ಪಡಿಸಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಸದ್ಭಕ್ತರು ಆಗಮಿಸಬೇಕೆಂದು ಕೋರುತ್ತೇವೆ.

★ ಸರ್ವರಿಗೂ ಆದರದ ಸುಸ್ವಾಗತ ★

ಪೂಜ್ಯ ಬಸವ ಕುಮಾರ ಸ್ವಾಮೀಜಿ

ವಿಶ್ವ ಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್

ನಂಬಿದವರಿಗೆ ಇಂಬು, ನಂಬಿಗಿಲ್ಲದವರ ಎದೆಯೊಳಂಬು ನೀನೆ ಬಸವ ಲಿಂಗ

-ಮಾತಾಜಿ

ಈ ಪದ ಪುಂಜವನ್ನು ಬಹಳ ಹಿಂದೆಯೇ ಪಾಲ್ಕುರಿಕೆ ಸೋಮನಾಥ ಕವಿ ಬರೆದನು; ಸಾಂಪ್ರದಾಯಿಕವಾಗಿ ಜನರು ಹಾಡುತ್ತಿದ್ದರು.

ಒಂದು ದಿವಸ ಓರ್ವ ಬಸವ ಭಕ್ತೆ ಉದ್ವೇಗಕ್ಕೆ ಒಳಗಾಗಿದ್ದಳು. ಏಕೆಂದರೆ ಒಬ್ಬನೇ ಮಗ ವಿಪರೀತ ತುಂಟತನ ಮಾಡುತ್ತಿದ್ದ. ಉಪಟಳ ತಡೆಯಲಾರದಾದಳು (ಹಿಂದೊಮ್ಮೆ ನಮ್ಮ ಪ್ರೀತಿಯ ಭಕ್ತಳೋರ್ವಳು ಫೋನ್ ಮಾಡಿ ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. ಏಕೆ ಅಂದಾಗ, ಇಬ್ಬರು ಗಂಡು ಮಕ್ಕಳು, ಇವರ ತುಂಟತನ ತಡೆಯಲು ಆಗುತ್ತಿಲ್ಲ. ನನಗೆ ಏಕಿಂಥ ಮಕ್ಕಳಾದವು? ಆಕೆಯ ಅಳು ನೋಡಿ ನನಗೆ ನಗು ಬಂತು. ಹುಚ್ಚಮ್ಮ, ಮಕ್ಕಳೇ ಹಾಗೇ! ಅದರಲ್ಲೂ ಗಂಡು ಮಕ್ಕಳು ಹೆಣ್ಣು ಮಕ್ಕಳಿಗಿಂತ ಹೆಚ್ಚು ತುಂಟತನ ಮಾಡುತ್ತವೆ. ಸಂಸಾರ ಎಂದರೆ ಮತ್ತೇನು? ಮಕ್ಕಳು ತುಂಟತನ ಮಾಡದೆ ದೊಡ್ಡವರು ಮಾಡುವರೆ? ಅದಕ್ಕೆಲ್ಲ ಇಷ್ಟು ಅಳುತ್ತಾರೆಯೆ ಎಂದು ಸಮಾಧಾನ ಮಾಡಿದೆ.) ಸಿಟ್ಟು ಬಂದು ಮಗುವನ್ನು ಚೆನ್ನಾಗಿ ಹೊಡೆದು, ನಂತರ ಗುರು ಬಸವಣ್ಣನವರ ಮುಂದೆ ಕುಳಿತು, ಅಳುತ್ತಾ ಜಗಳವಾಡಿ, ಇಂಥ ಮಗನನ್ನು ಏಕೆ ಕೊಟ್ಟೆ? (ಸ್ವಾಮಿ ವಿವೇಕಾನಂದರು ಬಾಲಕನಿದ್ದಾಗ ತುಂಬಾ ತುಂಟರಿದ್ದರಂತೆ; ಆಗ ನಿಯಂತ್ರಿಸಲಾರದೆ ತಾಯಿಯು ಶಿವನನ್ನು ನೀನು ಬಾ ಎಂದರೆ ತಾನು ಬರದೆ ಯಾವುದೋ ಭೂತವನ್ನು ಕಳಿಸಿದ್ದಾನೆ. ಎಂದು ಹಲುಬುತ್ತಿದ್ದಳಂತೆ. ತುಂಟ ಮಕ್ಕಳು ಕ್ರಿಯಾಶೀಲರಿರುತ್ತಾರೆ. ಅವರನ್ನು ಸರಿಯಾಗಿ ರೂಪಿಸಿದರೆ ತುಂಬಾ ಮೇಧಾವಿಗಳಾಗುತ್ತಾರೆ.) ನಾನಿನ್ನು ನಿನ್ನ ಪೂಜೆ ಮಾಡುವುದಿಲ್ಲ." ಎಂದು ಹೇಳಿದಳಂತೆ. ಹೀಗೆಲ್ಲ ಆಲೋಚಿಸಬಾರದು ಎಂದು ಅಂತರ್ಮನವು ಹೇಳುತ್ತಿದ್ದರೂ ಸಹ ನಿನ್ನ ಜೊತೆ ಜಗಳವಾಡದೆ ಏನು ಮಾಡಲಿ? ಎಂದುಕೊಂಡಳಂತೆ.

ಅಂದು ರಾತ್ರಿ ಕಳೆದು ಬೆಳಗಾಗುವುದರಲ್ಲಿ ಬೇರೆ ಊರಿಗೆ ಎನ್.ಸಿ.ಸಿ. ಕ್ಯಾಂಪ್‌ಗೆ ಹೋಗಿದ್ದ ಮಗಳಿಗೆ ಆರೋಗ್ಯದ ಬಹುದೊಡ್ಡ ತೊಂದರೆ ಕಾಣಿಸಿಕೊಂಡು ಸುದ್ದಿ ಬಂದು ಗಾಬರಿಯಾಗಿದೆ. ಆಗ ಪಶ್ಚಾತ್ತಾಪದ ಕಣ್ಣೀರು ಉದುರಿ ಗುರು ಬಸವಣ್ಣನವರ ಮುಂದೆ ಕ್ಷಮೆ ಕೇಳಿ, ಮಗಳು ಇದ್ದಲ್ಲಿಗೆ ಹೋಗಿ ಕರೆದುಕೊಂಡು ಬಂದು, ಸ್ನಾನ ಮಾಡಿಸಿ, ಬಸವ ಪೂಜೆ ಮಾಡಿಸಿ ಆಶೀರ್ವಾದಕ್ಕೆ ಕರೆ ತಂದರು. ಭಸ್ಮ ಧರಿಸಿ, 'ಆಶೀರ್ವದಿಸಿ ಎಂದೂ ಬಸವ ಗುರುವಿನ ಕೃಪೆಯಲ್ಲಿ ಅವಿಶ್ವಾಸ ಮಾಡಬಾರದು.' ಎಂದು ಹಿತೋಪದೇಶ ಮಾಡಿ ಕಳಿಸಿದೆವು.

ಅದೇ ರೀತಿ ಮತ್ತೊಂದು ಪ್ರಸಂಗ ನಡೆಯಿತು. ಓರ್ವ ಶರಣೆ ನಮ್ಮ ಪ್ರೀತಿ ಅಭಿಮಾನಕ್ಕೆ ಪಾತ್ರರಾದವರು, ಇದ್ದಕ್ಕಿದಂತೆಯೇ ಮನಸ್ಸು ಕೆಡಿಸಿಕೊಂಡರು. ಬೇರೆಯವರು ಹಿತೋಪದೇಶ ಮಾಡಿದಾಗ ತೀವ್ರ ಪ್ರತಿಕ್ರಿಯೆ ವ್ಯಕ್ತಪಡಿಸಿ ಅಪಶಬ್ದವೊಂದನ್ನು ನುಡಿದರು. ಗುರು ಬಸವಣ್ಣನವರ ಪವಿತ್ರ ಸ್ಥಾನದಲ್ಲಿ ನಿಂತು ಕೆಟ್ಟ ಮಾತನ್ನಾಡಿದ ಸ್ವಲ್ಪ ಹೊತ್ತಿನಲ್ಲೇ ಕಾಲು ಜರುಗಿ, ಉಳುಕಿ ನಡೆಯದಾರದಷ್ಟು ನೋವು-ಬಾವು ಉಂಟಾಯಿತು. ಈ ವಿಷಯ ನಂತರ ತಿಳಿದಾಗ ಬೂಮ್ ರ್‍ಯಾಂಗ್ ಕರ್ಮದ ನೆನಪಾಯಿತು. ಯಾರನ್ನಾದರೂ ದೂಷಿಸಿದಾಗ ಅಲ್ಲಿ ಸತ್ಯವು ಇಲ್ಲದಿದ್ದಾಗ ಆ ಕರ್ಮವು ವಾಪಸ್ಸು ಬಂದು ದೂಷಕರಿಗೇ ಬಡಿಯುವುದು ಬೂಮ್ ರ್‍ಯಾಂಗ್ ಕರ್ಮ. "ಗುರು ಬಸವಣ್ಣನವರು ಎಡದ ಕೈಯಲ್ಲಿ ಹಾಲು ಬಟ್ಟಲು ಅಂದರೆ ಅನುಗ್ರಹ ಹಿಡಿದ ಕರುಣಾಮಯಿ ಹೇಗೋ ಹಾಗೆ ಬಲದ ಕೈಯಲ್ಲಿ ಓಜುಗಟ್ಟೆಗೆ ಅಂದರೆ ತಪ್ಪು ಮಾಡಿದಾಗ ಶಿಕ್ಷಿಸುವ ಕೋಲು ಹಿಡಿವ ದಂಡಾಧೀಶರೂ ಅಹುದು." ಎಂಬುದನ್ನು ಭಕ್ತರು ಅರಿತುಕೊಳ್ಳಬೇಕು.

ಮಹಾರಾಷ್ಟ್ರ ಮಾತ್ರವಲ್ಲ ನವದೆಹಲಿಯಲ್ಲೂ ಬಸವ ಧ್ವಜ ಹಾರಿಸಿದ ಸಂಭ್ರಮದೊಂದಿಗೆ

ಇತಿಹಾಸ ಸೃಷ್ಟಿಸಿದ 20ನೆಯ ಶರಣ ಮೇಳ

ಬಸವನ ಬೆಳಕೆ ಎಲ್ಲಾಡಿ ಬಂದೆ
ಭಾರತವೆಲ್ಲಾ ಸುತ್ತಾಡಿ ಬಂದೆ
ಬಸವನ ಬೆಳಕೆ ಎಲ್ಲಾಡಿ ಬಂದೆ
ಕನ್ನಡ ವನದಲ್ಲಿ ನಲಿದಾಡಿ ಬಂದೆ............

ಎಂಬ ಕವಿ ವಾಣಿಯಂತೆ ಬಸವ ಧರ್ಮದ ಕಿರಣಗಳನ್ನು ಕನ್ನಡ ನಾಡಿನಲ್ಲಿ ಯಶಸ್ವಿಯಾಗಿ ಮಾತ್ರವಲ್ಲದೇ ನೆರೆಯ ನಾಡುಗಳಾದ ತಮಿಳುನಾಡು, ಆಂಧ್ರನಾಡು ಮಾತ್ರವಲ್ಲದೇ ಮಹಾರಾಷ್ಟ್ರ ರಾಜ್ಯದ ಅಲ್ಲಮ ಗಿರಿ, ರಾಷ್ಟ್ರದ ರಾಜಧಾನಿ ನವದೆಹಲಿಯಲ್ಲಿಯೂ ಬಸವ ಧರ್ಮ ಪೀಠದ ಶಾಖೆಗಳನ್ನು ಪ್ರಾರಂಭಿಸಿ ಅಕ್ಷರಶಃ ಬಸವನ ಬೆಳಕನ್ನು ಕನ್ನಡ ವನದಲ್ಲಿ ನಲಿದಾಡಿಸಿದ್ದು ಮಾತ್ರವಲ್ಲದೇ ಭಾರತವೆಲ್ಲಾ ಸುತ್ತಾಡಿಸಿದ ಅದ್ಭುತ ಸಾಧನೆಗಳ ಸವಿ ನೆನಪಿನೊಂದಿಗೆ ಸಮಾವೇಶಗೊಂಡ, ಸಂಪನ್ನಗೊಂಡ 20ನೆಯ ಶರಣ ಮೇಳ ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಿಂದ ಬರೆಯಲ್ಪಡುತ್ತದೆ.

ಬಸವ ಪೀಠವು ಎದ್ದು । ಒಸೆದು ನಾಣ್ಯವು ಹುಟ್ಟಿ
ಬಸವನಾ ಮುದ್ರೆ ಮೆರೆದಾವು । ಧರೆಯವಗೆ
ವಶವಾಗದಿವುದೇ ಸರ್ವಜ್ಞ ॥

ಬಸವ ಧರ್ಮ ಪೀಠದಿಂದ 18ನೆಯ ಶರಣ ಮೇಳದ ಬೃಹತ್ ವೇದಿಕೆಯ ಮೂಲಕ ಭಾರತ ಸರ್ಕಾರಕ್ಕೆ ಆಗ್ರಹಿಸಲ್ಪಟ್ಟು ಮತ್ತು ಪ್ರಯತ್ನಿಸಲ್ಪಟ್ಟು ಕೇವಲ ಒಂದೂವರೆ ವರ್ಷದಲ್ಲಿ ರಾಷ್ಟ್ರದ ಗೌರವಾನ್ವಿತ ಪ್ರಧಾನ ಮಂತ್ರಿಯವರಿಂದ ಲೋಕಾರ್ಪಣೆ ಗೊಂಡಿರುವ ಬಸವ ನಾಣ್ಯ ಕವಿ ಸರ್ವಜ್ಞನ ಸಂಕಲ್ಪ - ನಿರೀಕ್ಷೆಯು ನಿಜಗೊಂಡ ಧನ್ಯತಾ ಭಾವ ಹೊಂದಿದ ಶರಣ ಸಮೂಹ ಸಮಾವೇಶಗೊಂಡಿದ್ದು 20ನೆಯ ಶರಣ ಮೇಳದ ವಿಶೇಷತೆ.

ಪರಮ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರಿಂದ ದಿ: 9ರಂದು ಧರ್ಮಸಂಹಿತೆ ವಚನ ಸಾಹಿತ್ಯ ಪಠಣ ಸಪ್ತಾಹದ ಉದ್ಘಾಟನೆಯೊಂದಿಗೆ ಪ್ರಾರಂಭವಾದ ಶರಣ ಮೇಳದ ಉತ್ಸವದ ಧಾರ್ಮಿಕ ವಿಧಿ- ವಿಧಾನಗಳು, ಧರ್ಮ ಚಿಂತನ ಗೋಷ್ಠಿ, ಉದ್ಘಾಟನಾ ಸಮಾರಂಭ, ಬಸವ ಧರ್ಮ ಪೀಠಾರೋಹಣ, ಸಮುದಾಯ ಪ್ರಾರ್ಥನೆ, ಗಣಲಿಂಗ ದರ್ಶನ, ಪಥ ಸಂಚಲನ, ಬಸವೈಕ್ಯ ಮಂಟಪ ದರ್ಶನ, ಸಾಮೂಹಿಕ ಇಷ್ಟಲಿಂಗಾರ್ಚನೆ, ಮುಂತಾದ ಧಾರ್ಮಿಕ ಆಚರಣೆಗಳ ಸಮುಚ್ಚಯದೊಂದಿಗೆ ದಿ: 15ರವರೆಗೆ ಜರುಗಿದ ಶರಣ ಮೇಳ ಅದ್ಭುತ ಯಶಸನ್ನು ಕಂಡಿತು.

ಬಾಗಲ ಕೋಟೆ ಸಂಸದ ಪಿ.ಸಿ ಗದ್ದೀಗೌಡರ ಅಭಿಮತ:

ಲಿಂಗಾಯತ ಧರ್ಮ ಜಾಗೃತಿಯಲ್ಲಿ ಮಾತಾಜಿಯವರ ಪ್ರಯತ್ನ ಸದಾ ಸ್ಮರಣೀಯ. ಮನುಷ್ಯನ ಜನ್ಮ ಸಾರ್ಥಕತೆ ಇರುವುದು ಬಸವ ತತ್ವ ಅರಿತು ಅಳವಡಿಸಿಕೊಳ್ಳುವುದರಲ್ಲಿದೆ. ಈ ದಿಶೆಯಲ್ಲಿ ಲಿಂಗಾಯತ ಧರ್ಮ ನಿಷ್ಠರನ್ನು ಒಂದೆಡೆ ಸೇರಿಸಿ ಸಮಾಜ ಜಾಗೃತಿಗೆ ಶ್ರಮಿಸುತ್ತಿರುವ ಪೂಜ್ಯ ಮತಾಜಿಯವರ ಕಾರ್ಯ ಸದಾ ಸ್ಮರಣೀಯ ಮತ್ತು ಶ್ಲಾಘನೀಯ ಎಂದು ಬಾಗಲ ಕೋಟೆ ಕ್ಷೇತ್ರದ ಲೋಕ ಸಭೆ ಸದಸ್ಯ ಶರಣ.ಪಿ.ಸಿ. ಗದೀಗೌಡರ ಅಭಿಪ್ರಾಯ ಪಟ್ಟರು. ಅವರು 20ನೆಯ ಶರಣ ಮೇಳವನ್ನು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಮಾತನಾಡುತ್ತಿದ್ದರು. ಬಸವಣ್ಣನವರು ಕಾಯಕ ತತ್ವಕ್ಕೆ ನೀಡಿದ ಮಹತ್ವ ಅದ್ಭುತವಾದುದ್ದು. ಕಾಯಕ ರಹಿತ ಧನಾರ್ಜನೆ ಅವರಿಗೆ ವರ್ಜವಾಗಿತ್ತು. ಆದರೆ ಇಂದು ದಿಢೀರ್ ಶ್ರೀಮಂತನಾಗಬೇಕು ಮತ್ತು ಕೇವಲ ಅಧಿಕಾರ ಪಡೆಯಬೇಕು ಎಂಬ ಆಲೋಚನೆಯಿಂದ ಜನ ವಾಮ ಮಾರ್ಗಗಳಿಂದ ಶ್ರೀಮಂತಿಕೆ - ಅಧಿಕಾರ ಗಳಿಸುತ್ತಿರುವುದರಿಂದ ಸಮಾಜದಲ್ಲಿಂದು ಅಶಾಂತಿ ಕ್ಷೋಭೆ ಉಂಟಾಗುತ್ತಿದೆ, ಎಂದು ವಿಶ್ಲೇಷಿಸಿದ ಅವರು ಸಮಾಜಕ್ಕೆ ಅಂಟಿದ ಮೌಢ್ಯಗಳು ದೂರವಾಗಬೇಕಾದರೆ ಶರಣ ಮೇಳದಂತಹ ಆದರ್ಶ ಕಾರ್ಯಕ್ರಮಗಳಿಂದ

'ಮಾತ್ರ ಸಾಧ್ಯವಿದೆ. ಮಾನವನ ಜೀವನಕ್ಕೆ ಗುರುವಿನ ಆದರ್ಶ ಮಾರ್ಗದರ್ಶನ ಅಗತ್ಯವಿದೆ. ಮನುಷ್ಯನಿಗೆ ಜೀವನೋತ್ಸಾಹ ಆತ್ಮವಿಶ್ವಾಸ ಬೇಕಾದರೆ ಧಾರ್ಮಿಕ ಸಂಸ್ಕಾರ ಬೇಕು. ಅಂತಹ ಧಾರ್ಮಿಕ ಸಂಸ್ಕಾರವನ್ನು ಬಸವ ಧರ್ಮ ಪೀಠ ಯಶಸ್ವಿಯಾಗಿ ನೀಡುತ್ತಾ ಬಂದಿದೆ ಎಂದು." ನುಡಿದರು.

ಸಮಾರಂಭದ ದಿವ್ಯ ಸಾನಿಧ್ಯ ವಹಿಸಿದ್ದ ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀ ಮಾಹಾ ಜಗದ್ಗುರು ಮಾತೆ ಮಹಾದೇವಿಯವರು ಆಶೀರ್ವಚನ ನೀಡಿ ಅಧ್ಯಾತ್ಮಿಕ ಹಿನ್ನೆಲೆಯಿರುವ ಐತಿಹಾಸಿಕ ಸ್ಥಳವಾಗಿರುವ ಕೂಡಲ ಸಂಗಮಕ್ಕೆ ಮಹೋನ್ನತವಾದ ಶಕ್ತಿಯಿದೆ. ಶತಮಾನಗಳಿಂದ ಸಮಾಜದಲ್ಲಿ ಆಳವಾಗಿ ಬೇರೂರಿದ್ದ ಮೂಢ ನಂಬಿಕೆ, ಕಂದಾಚಾರ, ಕೀಳರಿಮೆಗಳಂಥವುಗಳನ್ನು ಹೋಗಲಾಡಿಸಲೆಂದು ವಿಶ್ವಗುರು ಬಸವಣ್ಣನವರು 12ನೆಯ ಶತಮಾನದಲ್ಲಿ ಲಿಂಗಾಯತ ಧರ್ಮವನ್ನು ಸಂಸ್ಥಾಪಿಸಿದರು. ಜಾತಿ, ವರ್ಣ, ವರ್ಗ, ಲಿಂಗ ಭೇದವಿಲ್ಲದ ಆದರ್ಶ ಕಲ್ಯಾಣ ರಾಜ್ಯವನ್ನು ರೂಪಿಸಿದರು ಎಂದು ಮಾತಾಜಿ ಸ್ಮರಿಸಿಕೊಂಡರು.

"ಸಮಾಜಕ್ಕೆ ಧರ್ಮ ಸಂಸ್ಕಾರದ ಆಗತ್ಯವಿದೆ ಪ್ರತಿಯೊಬ್ಬರಿಗೂ ಪ್ರಾರ್ಥನೆಬೇಕು. ಪ್ರತಿ ವರ್ಷವೂ ಬಸವ ತತ್ವಾನುಯಾಯಿಗಳೆಲ್ಲರೂ ಒಂದೆಡೆ ಸೇರಿ ಸಹೋದರ ಭಾವನೆಯಿಂದ ಇಲ್ಲಿನ ಧಾರ್ಮಿಕ ವಿಧಿ ವಿಧಾನಗಳಲ್ಲಿ ಪಾಲ್ಗೊಂಡು ಬಸವಣ್ಣನವರ ವಿಚಾರಗಳನ್ನು ನಾಡಿನೆಲ್ಲೆಡೆ ಪ್ರಸಾರಗೊಳಿಸಲು ಅಣಿಗೊಳಿಸುವದೇ ಶರಣ ಮೇಳದ ಉದ್ದೇಶ. ರಾ.ಬ.ದಳ ಹಾಗೂ ಲಿಂಗಾಯತ ಧರ್ಮ ಮಹಾ ಸಭಾ ಶಾಖೆಗಳ ಶರಣರು ಈ ಕೈಂಕರ್ಯವನ್ನು ಯಶಸ್ವಿಯಾಗಿ ಮಾಡುತ್ತಿದ್ದಾರೆ." ಎಂದು ಮಾತಾಜಿ ನುಡಿದರು.

ಆಂಧ್ರ ಪ್ರದೇಶ ರಾಷ್ಟ್ರೀಯ ಬಸವ ದಳದ ಅಧ್ಯಕ್ಷ ಶರಣ ಸುಭಾಷ ಪಾಟೀಲ್ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಸಮಾರಂಭದಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ, ಪೂಜ್ಯ ಚನ್ನಬಸವಾನಂದ ಸ್ವಾಮೀಜಿ, ಪೂಜ್ಯ ಬಸವ ಕುಮಾರ ಸ್ವಾಮೀಜಿ, ಬಸವ ಧರ್ಮ ಪೀಠದ ಜಂಗಮ ಮೂರ್ತಿಗಳೂ ಸೇರಿದಂತೆ ಮುಂಬೈನ ಉದ್ಯಮಿ ಆರ್.ಬಿ.ಹೆಬ್ಬಳ್ಳಿ, ಬಸವ ಕಲ್ಯಾಣದ ಬಸವೇಶ್ವರ ಇಂಜನಿಯರಿಂಗ್ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಧನರಾಜ ತಾಡಂಪಳ್ಳಿ, ಕೂಡಲ ಸಂಗಮದ ಹಿರಿಯರಾದ ಜಿ.ಜಿ.ಪಾಟೀಲ್ ಮುಂತಾದವರು ಉಪಸ್ಥಿತರಿದ್ದರು.

ಪೂಜ್ಯ ಮಾತಾಜಿಯವರಿಂದ ಪೀಠಾರೋಹಣ ಸಂದೇಶ

"ಅನುಭವ ಮಂಟಪದಲ್ಲಿ ಸಮಾವೇಶಗೊಂಡಿದ್ದ 770 ಅಮರಗಣಂಗಳಲ್ಲಿ ಒಬ್ಬೊಬ್ಬರು ಸಹ ಅದ್ಭುತವಾದ ಅಧ್ಯಾತ್ಮಿಕ, ಸಾಹಿತ್ಯಿಕ ಶಕ್ತಿ ಹೊಂದಿದವರಾಗಿದ್ದರು. ಆದರೆ ಅವರೆಲ್ಲರಿಗೂ ಸಹ ಗುರು ಬಸವಣ್ಣನವರು ಕೇಂದ್ರ ವ್ಯಕ್ತಿಯಾಗಿ, ಗುರುವಾಗಿದ್ದ ಕಾರಣ ಅವರೆಲ್ಲರ ಸಾಂಘಿಕ ಪ್ರಯತ್ನದಿಂದ ಲಿಂಗಾಯತ ಧರ್ಮವು ನಾಡಿನಾದ್ಯಂತ ಪ್ರಸರಣಗೊಳ್ಳಲು ಕಾರಣವಾಯಿತು." ಎಂದು ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶೀ ಮಹಾ ಜಗದ್ಗುರು ಮಾತೆ ಮಹಾದೇವಿ ತಾಯಿಯವರು ಅಭಿಪ್ರಾಯ ಪಟ್ಟರು. ಅವರು 20ನೆಯ ಶರಣ ಮೇಳದಲ್ಲಿ ಬಸವ ಧರ್ಮ ಪೀಠದ 16ನೇ ವಾರ್ಷಿಕೋತ್ಸವದಂದು ಬಸವ ಧರ್ಮದ ಮಹಾ ಜಗದ್ಗುರು ಪೀಠಾರೋಹಣ ಗೈದು ಸಹಸ್ರಾರು ಶರಣ - ಶರಣೆಯರಿಂದ ಗುರು ವಂದನೆ ಸ್ವೀಕರಿಸಿದ ನಂತರ ಪೀಠಾರೋಹಣದ ದಿವ್ಯ ಸಂದೇಶ ನೀಡಿ ಮಾತನಾಡಿದರು.

ವ್ಯೋಮಕಾಯಸಿದ್ಧ ಅಲ್ಲಮ ಪ್ರಭುದೇವರು ಕಲ್ಯಾಣದ ಅನುಭವಮಂಟಪಕ್ಕೆ ಬರದಿದ್ದರೆ ಅವರು ಒಬ್ಬ ಯೋಗಿಯಾಗಿರುತ್ತಿದ್ದರು. ಜಗನ್ಮಾತ ಅಕ್ಕಮಹಾದೇವಿ ತಾಯಿಯವರು ಕಲ್ಯಾಣದತ್ತ ಅಡಿಯಿಡದಿದ್ದರೆ ಅವರು ಆ ಪ್ರಾಂತ್ಯದಲ್ಲ ಪೂಜ್ಯನೀಯ ಖ್ಯಾತ ನಾಮರಾಗಿರುತ್ತಿದ್ದರು. ಲಿಂಗಾಂಗ ಯೋಗಿ ಸಿದ್ಧರಾಮೇಶ್ವರರು ಕಲ್ಯಾಣದ ಪ್ರಭಾವಲಯದಲ್ಲಿ ಸೇರದಿದ್ದರೆ ಕೇವಲ ಸೊಲ್ಲಾಪುರ ಪ್ರಾಂತ್ಯದ ರಾಜ ಗುರುವಾಗಿರುತ್ತಿದ್ದರು. ಆದರೆ ಅವರೆಲ್ಲರೂ ವ್ಯಕ್ತಿಗತ ಕೀರ್ತಿ ವಾರ್ತೆಗಾಗಿ -ಸ್ವಂತಿಕೆಗಾಗಿ ಗಮನಹರಿಸದೆ. ಸಮಷ್ಟಿ ಹಿತಕ್ಕಾಗಿ ಕಲ್ಯಾಣದಲ್ಲಿ ಸಂಗಮವಾದ ಕಾರಣವೇ ಲಿಂಗಾಯತ ಎಂಬ ವಿಶ್ವಮಾನ್ಯ ವೈಜ್ಞಾನಿಕ ವೈಚಾರಿಕ ತತ್ವ ವಿಶೇಷವುಳ್ಳ ಧರ್ಮವು ನಾಡಿನಾದ್ಯಂತ ಪಸರಿಸಿತು ಮಾತ್ರವಲ್ಲ ಪ್ರಭುದೇವರು, ಅಕ್ಕ, ಸಿದ್ಧರಾಮೇಶ್ವರರ ಕೀರ್ತಿ ದೇಶದಾದ್ಯಂತ ವಿಸ್ತರಿಸಲು ಸಾಧ್ಯವಾಯಿತಲ್ಲದೆ ಅವರು ಈ ಧರ್ಮದ ಗಣಾಧೀಶರಾಗಲು ಕಾರಣವಾಯಿತು." ಎಂದು ವಿಶ್ಲೇಷಿಸಿದ ಮಾತಾಜಿ " ಬಸವ ಧರ್ಮವನ್ನು ವಿಶ್ವದಾದ್ಯಂತ ಪ್ರಚಾರ ಗೈಯುವ ಮಹಾ ಸಂಕಲ್ಪ ಹೊಂದಿರುವ ನಾವೆಲ್ಲ

ವ್ಯಕ್ತಿಗತ ಪ್ರತಿಷ್ಠೆ ಬದಿಗೊತ್ತಿ ದುಡಿಯಬೇಕು. ಇಂಥ ಒಂದು ಅದ್ಭುತ ಪಾಠವನ್ನು ಅನುಭವ ಮಂಟಪದ ಶರಣ ಸಂಕುಲವನ್ನು ನೋಡಿ ನಾವು ಕಲಿಯಬೇಕು." ಎಂದು ಮಾತಾಜಿ ನುಡಿದರು.

ತಾಯಿ ತನ್ನ ಮಕ್ಕಳನ್ನು ಬಹುದಿನಗಳಿಂದ ಕಾಣದಿದ್ದರೆ ಹೇಗೆ ಅವಳ ಹೃದಯ ಮಕ್ಕಳನ್ನು ನೋಡಲು ಮತ್ತು ವಾತ್ಸಲ್ಯವನ್ನು ಧಾರೆ ಎರೆಯಲು ಹಂಬಲಿಸುವುದು. ಅದೇ ರೀತಿ ನಮ್ಮ ಹೃದಯದಲ್ಲಿ ನಿಮ್ಮೆಲ್ಲರನ್ನು ಕಾಣಲು ಹಂಬಲಿಸುವುದು. ಇದು ಗುರು ಶಿಷ್ಯ ಸಂಬಂಧ ಮಾತ್ರವಲ್ಲ ತಾಯಿ-ಮಕ್ಕಳ ಸಂಬಂಧ ಎಂದು ಮಾತಾಜಿ ಭಾವ ಪರವಶರಾಗಿ ನುಡಿಯುತ್ತಿದ್ದಾಗ ಏಕಾಗ್ರತೆಯಿಂದ ಶಾಂತವಾಗಿ ಸಂದೇಶ ಶ್ರವಣಗೈಯುತ್ತಿದ್ದ ಲಕ್ಷಾಂತರ ಶರಣ ಬಂಧುಗಳ ಕಣ್ಣಾಲಿಗಳಲ್ಲಿ ಅಶ್ರು ಧಾರೆ ಹರಿಯುತ್ತಿತ್ತು. ಶರಣ ಮೇಳ ನಿಮ್ಮೆಲ್ಲರನ್ನು ಧರ್ಮ ಕ್ಷೇತ್ರವೆಂಬ ಈ ಧಾರ್ಮಿಕ ಮಹಾಮನೆಯಲ್ಲಿ ಸಮಾಗಮ ಗೊಳಿಸುತ್ತದೆ. ಆದ್ದರಿಂದ ಎಂತಹ ಸನ್ನಿವೇಶದಲ್ಲೂ ಶರಣ ಮೇಳಕ್ಕೆ ತಾವೆಲ್ಲ ಆಗಮಿಸಿ ಧಾರ್ಮಿಕ ಸಹೋದರತ್ವ ಮೆರೆಯಬೇಕು." ಎಂದೂ ಮಾತಾಜಿ ಸೂಚಿಸಿದರು.

ಧರ್ಮಗುರು ಬಸವಣ್ಣನವರ ದಿವ್ಯ ಸಂದೇಶವನ್ನು ಅರಿಯುವ ಪ್ರೌಢತೆ, ಆತ್ಮ ಶಕ್ತಿ ಇನ್ನೂ ಲಿಂಗಾಯತ ಸಮಾಜದಲ್ಲಿ ಅಷ್ಟಾಗಿ ರೂಢಿಗೊಂಡಿಲ್ಲದಿರುವದಕ್ಕೆ ವಿಷಾದ ವ್ಯಕ್ತ ಪಡಿಸಿದ ಮಾತಾಜಿ ಇದಕ್ಕೆ ಕಾರಣ ಅಜ್ಞಾನ ಹಾಗೂ ಮೂಢನಂಬಿಕೆ ಎಂದು ವಿಮರ್ಶಿಸಿದರು. 850 ವರ್ಷಗಳ ತರುವಾಯ ಈಗಲಾದರೂ ನಮ್ಮ ಸಮಾಜ ಎಚ್ಚರವಾಗಬೇಕು. ಅಂದು ವಚನ ಸಾಹಿತ್ಯವನ್ನು ಶರಣರು ಪ್ರಾಣತ್ಯಾಗ ಮಾಡಿ ಸಂರಕ್ಷಿಸಿದ್ದಾರೆ. ಅದನ್ನು ಮನೆ-ಮನೆಗೆ ತಲುಪಿಸಬೇಕು, ಆ ಮೂಲಕ ಬಸವ ಕಿರಣಗಳಾಗಿ ನಾವು ನೀವೆಲ್ಲ ಕಾರ್ಯ ಮಾಡಬೇಕು." ಎಂದು ಪೂಜ್ಯ ಮಾತಾಜಿಯವರು ಕರೆಕೊಟ್ಟರು.

ಗಂಗಾ ಮಾತಾಜಿಯವರಿಂದ ಗುರು ವಂದನೆ

"ಸತ್ಯ ಶರಣರು ಉಳವಿಗೆ ಸಾಗಿ 770 ವರುಷಗಳ ತರುವಾಯ ಮತ್ತೆ ಬರುವದಾಗಿ ಕಾಲಜ್ಞಾನ ವಚನಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ. ಅಂದರೆ ಅವರು ಭೌತಿಕ ಶರೀರಧಾರಿಗಳಾಗಿ ಬರುವುದಿಲ್ಲ ನಿಮ್ಮಂತಹ ಶರಣ ಬಂಧುಗಳ ರೂಪದಲ್ಲಿ ಆಗಮಿಸಿದ್ದಾರೆ. ನೀವೆಲ್ಲ ಅಂದಿನ ಕಲ್ಯಾಣದ ಅನುಭವ ಮಂಟಪ ಪರಂಪರೆಯ ವಾರಸುದಾರರು, ತಾವೆಲ್ಲ ಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ ಲಿಂಗೈಕ್ಯ ಕ್ಷೇತ್ರವಾದ ಈ ಪವಿತ್ರ ಭೂಮಿಯಲ್ಲಿ ಸಮಾಗಮಗೊಳ್ಳಲು ಬಸವ ಧರ್ಮ ಪೀಠದಿಂದ ಜರುಗುತ್ತಿರುವ ಶರಣಮೇಳ ಕಾರಣವಾಗಿದೆ. ಇದೆಲ್ಲ ಆದಿ ಶರಣ ಸಂಕಲ್ಪದ ಪ್ರತಿಫಲವೇ ಆಗಿದೆ." ಎಂದು ಧಾರವಾಡ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠದ ದ್ವಿತೀಯ ಮಹಿಳಾ ಜಗದ್ಗುರು ಮಾತೆ ಗಂಗಾದೇವಿಯವರು ಅಭಿಪ್ರಾಯ ಪಟ್ಟರು. ಅವರು ಪೂಜ್ಯ ಮಾತಾಜಿಯವರ ಬಸವ ಧರ್ಮದ ಮಹಾ ಜಗದ್ಗುರು ಪೀಠಾರೋಹಣ ಮಾಡುವ ಶುಭ ಸಂದರ್ಭದಲ್ಲಿ ಗುರು ವಂದನಾ ಭಾಷಣ ಮಾಡಿದರು. ವಿಶ್ವಗುರು ಬಸವಣ್ಣನವರ ದಿವ್ಯ ಸಂದೇಶಗಳನ್ನು ವಿಶ್ವದಾದ್ಯಂತ ಪ್ರಚಾರಗೊಳಿಸುವ ಧ್ಯೇಯದೊಂದಿಗೆ ಪ್ರಾರಂಭವಾದ ಬಸವ ಧರ್ಮ ಪೀಠದ ಕೈಂಕರ್ಯವನ್ನು ಅತ್ಯಂತ ಯಶಸ್ವಿಯಾಗಿ ಪೂರೈಸುತ್ತಿರುವುದು ಕಲ್ಯಾಣದ ಶರಣರ ಕಾಲಜ್ಞಾನ ಸಾಕಾರಗೊಳಿಸುತ್ತ ಸಾಗಿದೆ ಎಂದರು.

> ಹಸಿದೊಡೆ [illegible] ಮುದ್ದು | ಬಸಲಿಗೆ [illegible] ಮುದ್ದು
> ಬಸಿರಲಿ ಬಂದ ಶಿಶು ಮುದ್ದು | ಲೋಕಕ್ಕೆ
> ಬಸವಣ್ಣನೇ ಮುದ್ದು ಸರ್ವಜ್ಞ ||

ಸಮಾನತೆ- ಶರಣರ ಕ್ರಾಂತಿಯ ಫಲಶ್ರುತಿ

"ಕಲ್ಯಾಣ ಕ್ರಾಂತಿ ಹೆಣ್ಣು-ಹೊನ್ನು- ಮಣ್ಣಿಗಾಗಿ ನಡೆಯದೆ ಅಂದಿನ ವ್ಯವಸ್ಥೆಯಲ್ಲಿ ಶೂದ್ರಾತಿ ಶೂದ್ರರೆಂದು ಪರಿಗಣಿಸಲ್ಪಟ್ಟು ಸಾಮಾಜಿಕ ನ್ಯಾಯದಿಂದ ವಂಚಿತರಾಗಿದ್ದ ಜನರ ಉದ್ಧಾರಕ್ಕಾಗಿ ನಡೆಯಿತು. ಗುರು ಬಸವಣ್ಣನವರು ಅಂದು ದಲಿತೋದ್ಧಾರ ಕಾರ್ಯ ಮಾಡದಿದ್ದರೆ ಇಂದು ನನ್ನಂತಹ ಜನ ಉನ್ನತ ಸ್ಥಾನವನ್ನು ಅಲಂಕರಿಸಲು ಸಾಧ್ಯವಾಗುತ್ತಿರಲಿಲ್ಲ ಎಂದು ರಾಜ್ಯದ ಯುವ ಜನ ಹಾಗೂ ಹಾಗೂ ಕ್ರೀಡಾ ಸಚಿವ ಹನುಮಂತಪ್ಪ ಆಲ್ಕೋಡ ಅಭಿಪ್ರಾಯ ಪಟ್ಟರು.

ಅವರು ಶರಣ ಮೇಳ ಉತ್ಸವದ ಪ್ರಮುಖ ಘಟ್ಟವಾದ ಪೀಠಾರೋಹಣ ಸಮಾರಂಭದ ಉದ್ಘಾಟಕರಾಗಿ ಆಗಮಿಸಿ ಮಾತನಾಡುತ್ತಿದ್ದರು. ಭಾರತೀಯ ಸಂವಿಧಾನವು ಪ್ರತಿಪಾದಿಸುವ ಎಲ್ಲ ಅಂಶಗಳನ್ನು ಸಹ ಕಲ್ಯಾಣದ ಶರಣರ ವಚನ ಸಾಹಿತ್ಯದಲ್ಲಿ ಕಾಣಬಹುದು. ವೈದಿಕ ವ್ಯವಸ್ಥೆ ವಿಜೃಂಭಿಸುತ್ತಿದ್ದ ಕಾಲ ಘಟ್ಟದಲ್ಲಿ ಸಂಸ್ಕೃತವೇ ದೇವ ಭಾಷೆ ಎಂಬ ಆ ಭಾವ ತುಂಬಿರುವಾಗ ವರ್ಣಾಶ್ರಮ ವ್ಯವಸ್ಥೆಯನ್ನು ವಿರೋಧಿಸಿದ ವಿಶೇಷ ಕೀರ್ತಿ ಶ್ರೀ ಗುರು ಬಸವಣ್ಣನವರಿಗೆ ಸಲ್ಲುತ್ತದೆ.'' ಹಾಗೂ ಕ್ರೀಡಾ ಸಚಿವ ಹನುಮಂತಪ್ಪ ಆಲ್ಕೋಡ ಅಭಿಪ್ರಾಯ ಪಟ್ಟರು.

''ವಚನ ಸಾಹಿತ್ಯಕ್ಕೆ ಪ್ರತಿಗಾಮಿ ಶಕ್ತಿಗಳಿಂದ ತೊಂದರೆ ಬಂದಾಗ ಕಲ್ಯಾಣವನ್ನು ಶರಣರು ತೊರೆಯಬೇಕಾಯಿತು. ತಾವು ಅಧಿಕಾರ - ಜೀವಕ್ಕಾಗಿ ಹೋರಾಡದೆ ತತ್ವಬದ್ಧರಾದರು ವೈಯಕ್ತಿಕ ಸುಖ-ಸಂತೋಷ ತ್ಯಾಗ ಮಾಡಿ ವಚನಗಳನ್ನು ಹೊತ್ತು ಸಹ್ಯಾದ್ರಿ ಪರ್ವತ ಶ್ರೇಣಿಯ ಅರಣ್ಯದ ಗವಿಗಳಲ್ಲಿ ಉಳಿದರು ಎಂದು ವಿಶ್ಲೇಷಿಸಿದ ಸಚಿವರು, ಶರಣರು ಕಲ್ಯಾಣ ಬಿಡುವಾಗ ಧನ, ಕನಕ, ವಜ್ರ-ವೈಢೂರ್ಯ ಹೊತ್ತು ತರದೆ ವಚನ ಸಾಹಿತ್ಯ ತಂದರು. ವಚನಗಳು ಉಳಿದವೆಂದೇ ಇಂದು ಈ ದೇಶದಲ್ಲಿ ಸ್ವಲ್ಪವಾದರೂ ಸಮಾನತೆ ಎಂಬುವುದು ಇದೆ ಎಂದು ಅವರು ಹೇಳಿದರಲ್ಲದೆ ಪೂಜ್ಯ ಮಾತಾಜಿಯವರು ತಮ್ಮ ಪ್ರಚಾರ ವೈಖರಿಯಿಂದ ಬಸವ ತತ್ವವನ್ನು ನಾಡಿನಾದ್ಯಂತ ಪಸರಿಸುತ್ತಿರುವುದು ನಮಗೆಲ್ಲ ಅಭಿಮಾನದ ಸಂಗತಿಯಾಗಿದೆ. ಅವರ ವಿಚಾರಗಳಿಗೆ ತಕ್ಕಂತೆ ಸಮಾಜ ರೂಪುಗೊಳ್ಳಬೇಕಾಗಿದೆ.''ಎಂದು ಅವರು ಹೇಳಿದರು.

ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ|| ರಾಜಣ್ಣ ವೈದ್ಯ, ಮುಂಬಯಿಯ ಹಿರಿಯ ಉದ್ಯಮಿ ಆರ್.ಬಿ. ಹೆಬ್ಬಳ್ಳಿ, ತಮಿಳುನಾಡಿನ ಗುರು ಬಸಪ್ಪ ಕಾಟೇರಿ, ಚಂದ್ರಶೇಖರ್ ಉಪಸ್ಥಿತರಿದ್ದ ಸಹಸ್ರಾರು ಶರಣ - ಶರಣೆಯರು ಪುಷ್ಪಮಾಲೆ ಹಾಕಿ ಆರತಿ ಬೆಳಗಿ ಗುರು ವಂದನೆಯನ್ನು ಸಲ್ಲಿಸಿದರು.

ಲಿಂಗಾಯತ ಧರ್ಮ ಸಂಸ್ಥಾಪನಾ ದಿನಾಚರಣೆ

ಲಕ್ಷಾಂತರ ಶರಣ - ಶರಣೆಯರಿಂದ ಸಮುದಾಯ ಪ್ರಾರ್ಥನೆ

ಧರ್ಮಗುರು ಬಸವಣ್ಣನವರು ತಮ್ಮ ಹೃನ್ಮನ-ಬುದ್ಧಿಗಳಲ್ಲಿ ರೂಪುಗೊಂಡ ಹೊಸ-ಸ್ವತಂತ್ರ ಲಿಂಗಾಯತ ಧರ್ಮವನ್ನು ಸಂಸ್ಥಾಪಿಸಿದ ಸವಿನೆನಪಿಗಾಗಿ ಅಂಥ ಪವಿತ್ರ ದಿನದ ಸ್ಮರಣಾರ್ಥ ಕೂಡಲ ಸಂಗಮದಲ್ಲಿ ಸಮುದಾಯ ಪ್ರಾರ್ಥನೆ ಅಧ್ಯಾತ್ಮಿಕ ಲೋಕವನ್ನೇ ಸೃಷ್ಟಿಸಿತು. ದಿ:14-01-2007ರಂದು ಶರಣ ಮೇಳದ ಬೃಹತ್ ಸಭಾಂಗಣದಲ್ಲಿ ಷಟ್ಕೋನ ಸಹಿತ ಕಾಷಾಯ ವಸ್ತ್ರಹೊದ್ದು ಅತ್ಯಂತ ಶಿಸ್ತಿನಿಂದ ಸಮುದಾಯ ಪ್ರಾರ್ಥನೆಯಲ್ಲಿ ಪಾಲ್ಗೊಂಡ ದೃಶ್ಯವಂತೂ ಅಧ್ಯಾತ್ಮದ ನಿಜಾನಂದವನ್ನು ಸೃಷ್ಟಿಸಿತ್ತು.

ಮಹಾರಾಷ್ಟ್ರ ರಾ.ಬ.ದಳದ ಅಧ್ಯಕ್ಷೆ ಶರಣೆ. ಮಾಲೂತಾಯಿ ಚಂದ್ರಕಾಂತ ಸ್ವಾಮಿ, ರಾಜ್ಯ ಲಿಂಗಾಯತ ಧರ್ಮ ಮಹಾಸಭೆ ಉಪಾಧ್ಯಕ್ಷ ಶಿವರಾಜ ಪಾಟೀಲ್ ಅತಿವಾಳ ಬೀದರ್, ಲಿಂಗಾಯತ ಸಮಾಜದ ಅಧ್ಯಕ್ಷ ರಾಮಲಿಂಗಪ್ಪ ದೇವಣಿ, ಕುಂದಗೋಳ ತಾ, ಭಾ.ಜ.ಪಾ ಅಧ್ಯಕ್ಷ ಮಲ್ಲಿಕಾರ್ಜುನ ಕಿತ್ತೂರು ಅತಿಥಿಗಳಾಗಿದ್ದರು, ಆಂಧ್ರ ಪ್ರದೇಶದ ರಾ.ಬ.ದಳದ ಕಾರ್ಯಾಧ್ಯಕ್ಷರಾದ ಧನರಾಜ್ ಜೀರಗೆ ಅಧ್ಯಕ್ಷತೆ ವಹಿಸಿದ್ದರು, ನವದೆಹಲಿ ಬಸವ ಮಂಟಪದ ಕಾರ್ಯದರ್ಶಿ ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ ಪ್ರಸ್ತಾವನೆ ಗೈದರು. ರಾಷ್ಟ್ರೀಯ ಬಸವ ದಳದ ರಾಜ್ಯಾಧ್ಯಕ್ಷ ಕೆ. ವೀರಣ್ಣ ಲಿಂಗಾಯತ್ ಸ್ವಾಗತಿಸಿದರು.

ಸಂವಿಧಾನ ಮತ್ತು ವಚನ ವಾಙ್ಮಯದ ಪ್ರಭಾವ

ಭಾರತೀಯ ಸಂವಿಧಾನದಲ್ಲಿ ಪ್ರತಿಪಾದಿಸಲ್ಪಟ್ಟಿರುವ ಎಲ್ಲಾ ಮೌಲ್ಯಾಂಶಗಳನ್ನು ಕೂಡ ಅಂದಿನ ಕಲ್ಯಾಣದ ಅನುಭವ ಮಂಟಪದ ಶರಣರ ವಿಚಾರಗಳೇ ಆಗಿವೆ. ನಮ್ಮ ನೆಲದ ಕಾನೂನು ಆಗಿರುವ ಭಾರತೀಯ ಸಂವಿಧಾನದ ಶಿಲ್ಪಿಗಳ ಮೇಲೆ ವಚನ ವಾಙ್ಮಯದ ಪ್ರಭಾವ ದಟ್ಟವಾಗಿದೆ ಎಂದು ಸಂದೇಹ ಬರುವಂತೆ ಭಾರತೀಯ ಸಂವಿಧಾನ ಮತ್ತು ವಚನ ಸಾಹಿತ್ಯದಲ್ಲಿ ಸಮಾನ ವಿಚಾರಧಾರೆ ಇದೆ. ಎಂದು ಎಸ್. ದಿವಾಕರ್ ಅವರು ಶರಣ ಮೇಳದಲ್ಲಿ ಸಂಯೋಜಿತವಾದ ''ಸಾಮಾಜಿಕ - ಧಾರ್ಮಿಕ

ಸಮಾನತೆ ''ಗೋಷ್ಠಿಯನ್ನು ಉದ್ಘಾಟಿಸಿ ಹೇಳಿದರು.

ಶರಣೆ. ವಿಜಯಾ ನಂಜುಂಡಪ್ಪ ಉಪನ್ಯಾಸ ನೀಡಿದರು. ಬಸವ ಕಲ್ಯಾಣದ ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳು ಧ್ವಜಾರೋಹಣ ಗೈದರು, ಚನ್ನೈನ ಶರಣ ಪ್ರಭು ಪ್ರಸಾದ (ಮಂಜುನಾಥ ಬಂಡಿ) ಧರ್ಮ ಜಾಗೃತಿಗೆ ಪ್ರಸಾರ ಮಾಧ್ಯಮ ಬಳಸಿಕೊಳ್ಳುವ ಬಗೆ ಕುರಿತು ಉಪನ್ಯಾಸ ನೀಡಿ ಆಧುನಿಕ ಪ್ರಸಾರ ಮಾಧ್ಯಮದಿಂದಾಗಿ ಒಳ್ಳೆಯದನ್ನಾಗಲಿ ಕೆಟ್ಟದ್ದನ್ನಾಗಲಿ ಜಗತ್ತಿಗೆ ಬೇಗನೆ ಪರಿಚಯಿಸ ಬಹುದು ತಾಂತ್ರಿಕ ಶಿಕ್ಷಣ ಪಡೆದ ಪರಿಣಿತರು ಅಂತರ್ಜಾಲದಲ್ಲಿ ವಿಶ್ವಗುರು ಬಸವಣ್ಣನವರು ಮತ್ತು ಲಿಂಗಾಯತ ಧರ್ಮ ಕುರಿತು ವಿವರಗಳನ್ನು ನೀಡಿದರೆ ಬಹಳ ಉಪಕಾರವಾಗುವುದು. ಎಂದು ವಿವರಿಸಿದರು.

- ವರದಿ : ಕರಿಬಸಪ್ಪ ಕೋರಿಶೆಟ್ಟರು

ಕರ್ನಾಟಕದಲ್ಲಿ ಲಿಂಗಾಯತ ಮಠಾಧೀಶರು, ಕಾವಿಧಾರಿಗಳು ಎಷ್ಟಿದ್ದರೂ ಯಾರಿಗೆ ತಾನೆ ಏನು ಪ್ರಯೋಜನ ?

ಬಸವ ಮಾರ್ಗ ನವೆಂಬರ್- 2006ರಲ್ಲಿ ಬಂಧ '' ಇಂಥ ಕಾವಿಧಾರಿಗಳು ಎಷ್ಟಿದ್ದರೂ ಯಾರಿಗೆ ತಾನೆ ಏನು ಕೇಡು ?'' ಎಂಬ ತಲೆ ಬರಹದ ಲೇಖನ ಬಹಳ ಚನ್ನಾಗಿದೆ ; ವಿಚಾರ ಮಂಥನಕ್ಕೆ ಪ್ರೇರಣೆ ನೀಡಿದ ಸಂಪಾದಕರಿಗೆ ಧನ್ಯವಾದಗಳು. ಏನು ಕೇಡು ಬದಲಾಗಿ ಏನು ಪ್ರಯೋಜನ? ಎಂದು ಇದ್ದರೆ ಚೆನ್ನಾಗಿತ್ತು ಎನಿಸುತ್ತದೆ. ಕರ್ನಾಟಕದ ಬಹುತೇಕ ಮಠಾಧೀಶರ ಈ ಕೆಲಸ (ಕರ್ಮ) ದಿಂದ ಅತ್ಯಂತ ಪ್ರಗತಿಪರ, ವಿಶ್ವ ವಿನೂತನ, ಪರಿಪೂರ್ಣ ವಿಶ್ವ ಧರ್ಮ ಬಸವ ಧರ್ಮ (ಲಿಂಗಾಯತ ಧರ್ಮ)ದ ಕೊಲೆಯಾಗಿದೆ ಎನಿಸುತ್ತದೆ. ಜೀವನ ಜ್ಞಾನ, ಧರ್ಮ ಜ್ಞಾನ ಕೊಡುವುದು ಧರ್ಮದ ಗುರುಗಳ ಕರ್ತವ್ಯ ಮತ್ತು ಕಾಯಕ. ನಮ್ಮ ಹತ್ತಿರ ಭಕ್ತರು ಬರುವುದಿಲ್ಲ ಬೇರೆಡೆಗೆ ಹೋಗಿ ದೊಡ್ಡ ಖೆಡ್ಡಾಗಳಲ್ಲಿ ಬೀಳುತ್ತಾರೆ ಎಂದು ಸಣ್ಣ ಸಣ್ಣ ಖೆಡ್ಡಾಗಳಲ್ಲಿ ಜನರನ್ನು ಬೀಳಿಸುವುದು ಧರ್ಮ ಬಾಹಿರ ಕೆಲಸ (ಕರ್ಮ)ವಲ್ಲವೇ? ಬೇರೆ ಧರ್ಮಕ್ಕೆ ಮತಾಂತರಗೊಳ್ಳುವವರು ನಮ್ಮ ಧರ್ಮದ ಸಂಸ್ಕಾರ ಇಲ್ಲದವರು. ನಮ್ಮ ಸಮಾಜದ ಎಲ್ಲ ಜನರಿಗೆ ನಮ್ಮ ಧರ್ಮದ ಸಂಸ್ಕಾರ ಲಿಂಗಧಾರಣೆ ಮಾಡುವುದು ಲಿಂಗದೀಕ್ಷೆ ರುದ್ರಾಕ್ಷಿ ಧಾರಣೆ ಮಾಡುವುದು, ಓಂ ಶ್ರೀ ಗುರು ಬಸವ ಲಿಂಗಾಯ ನಮಃ ಮಂತ್ರ ಬೋಧನೆ ಮಾಡುವುದನ್ನು ಬಿಟ್ಟು ಕರಿದಾರ, ಕೆಂಪುದಾರ ಮತ್ತು ತಾಯತ ಕಟ್ಟುವುದು ತಪ್ಪಲ್ಲವೇ?

ಅಜ್ಞಾನದ ಕೊರತೆಯಿಂದ ಆಗುವ ಅಪಾಯಕ್ಕಿಂತ ಜ್ಞಾನವಿದ್ದು ಮಾಡಿಕೊಳ್ಳುವ ಆತ್ಮ ವಂಚನೆ ಅಪಾಯಕಾರಿಯಾದುದ್ದು, ಸಮಾಜಕ್ಕೆ ಅಪಘಾತಕಾರಿಯಾದುದು. ಕುವೆಂಪುರವರು ಹೇಳಿದಂತೆ ನಮ್ಮ ಸಮಾಜ ಗುರು ಬಸವಣ್ಣನವರ ತತ್ವಗಳನ್ನು ಅಂದಿನಿಂದಲೇ ಆಚರಿಸಿದ್ದರೆ, ಈ ದೇಶದಲ್ಲಿ ಇಸ್ಲಾಂ ಬೆಳೆಯುತ್ತಿರಲಿಲ್ಲ, ಕ್ರೈಸ್ತ ಮತ ಬೆಳೆಯುತ್ತಿರಲಿಲ್ಲ. ಭವ್ಯವಾದ, ಬೇಡುವವರೇ ಇಲ್ಲದ, ಎಲ್ಲರೂ ನೀಡಲು ಉತ್ಸುಕರೂ ಸಮರ್ಥರು ಆದ ಜಾತಿ, ವರ್ಣ, ವರ್ಗ ರಹಿತ, ಧರ್ಮ ಸಹಿತ ಸಮೃದ್ಧ, ಸಂತೃಪ್ತಿ ಸರ್ವೋದಯ, ಸಹೋದರತ್ವ ಸಮಾನತೆ ಹಾಗೂ ಸಾಮರಸ್ಯವುಳ್ಳ ಶರಣ ಸಮಾಜ ಕಲ್ಯಾಣ ರಾಜ್ಯ ನಿರ್ಮಾಣವಾಗಿರುತ್ತಿತ್ತು.

ಇಂದು ಪಂಜಾಬ ಎಂದರೆ ಗುರುನಾನಕರು ಮತ್ತು ಸಿಖ್ಖ ಎನ್ನುವ ಪದ ನೆನಪಾಗುವಂತೆ ಕರ್ನಾಟಕ ಎಂದರೆ ಗುರು ಬಸವಣ್ಣನವರು ಮತ್ತು ಲಿಂಗಾಯತ ಎನ್ನುವ ಪದ ನೆನಪಾಗುವಂತೆ ಆಗಬೇಕಿತ್ತು. ಅಂದಿನಿಂದ ಇಂದಿನವರೆಗೆ ಸಾವಿರಾರು ಮಠಾಧೀಶರು ಆಗಿ ಹೋದರು. ಸಿಖ್ಖ ಧರ್ಮದ ಹತ್ತು ಗುರುಗಳು ಮಾಡಿದಷ್ಟು ಕಾರ್ಯ ಮಾಡಲಿಲ್ಲ. ಅಲ್ಲಿ ಅವರು ಧರ್ಮಕ್ಕಾಗಿ ಪ್ರಾಣ ಕೊಟ್ಟರೆ ಇಲ್ಲಿ ಇವರ ಸ್ವಾರ್ಥಕ್ಕಾಗಿ ನಮ್ಮ ಧರ್ಮದ ತತ್ವಗಳ ಕೊಲೆಯಾಗಿದೆ.

ಭಾರತದ ಈಶಾನ್ಯದ ರಾಜ್ಯಗಳಲ್ಲಿ ಜನರು ಸಾರಾಸಗಟು ವಿದೇಶಗಳ ಧರ್ಮಗಳಿಗೆ ಮತ್ತಾಂತರ ಹೊಂದುತ್ತಿರುವಾಗ ನಮ್ಮ ಮಠಾಧೀಶರು ಮತ್ತು ಪೀಠಾಧಿಕಾರಿಗಳ ಜವಾಬ್ದಾರಿಯೇನು? ತಾಯತ, ಕರಿದಾರ, ಕೆಂಪುದಾರ ಕಟ್ಟುವುದೇ?


- ಸಿ.ಬಿ. ಬೇವನೂರು
ಭೀಮರಾಯನ ಗುಡಿ

ಹೊಸ ವರ್ಷದ ಶುಭಾಶಯಗಳು
ಜ್ಞಾನದ ಬಲದಿಂದ ಅಜ್ಞಾನದ ಕೇಡು
2007 ನೇ ಇಸವಿಯ ಸಂಕ್ಷಿಪ್ತ ಕ್ಯಾಲೆಂಡರ್

ತಿಂಗಳುಗಳು											
ಜನವರಿ ಅಕ್ಟೋಬರ್	ಫೆಬ್ರವರಿ ಮಾರ್ಚ್ ನವೆಂಬರ್	ಏಪ್ರಿಲ್ ಜುಲೈ	ಮೇ	ಜೂನ್	ಆಗಸ್ಟ್	ಸೆಪ್ಟೆಂಬರ್ ಡಿಸೆಂಬರ್	ತಾರೀಖು				
ವಾರಗಳು											
ಸೋಮ	ಗುರು	ಭಾನು	ಮಂಗಳ	ಶುಕ್ರ	ಬುಧ	ಶನಿ	1	8	15	22	29
ಮಂಗಳ	ಶುಕ್ರ	ಸೋಮ	ಬುಧ	ಶನಿ	ಗುರು	ಭಾನು	2	9	16	23	30
ಬುಧ	ಶನಿ	ಮಂಗಳ	ಗುರು	ಭಾನು	ಶುಕ್ರ	ಸೋಮ	3	10	17	24	31
ಗುರು	ಭಾನು	ಬುಧ	ಶುಕ್ರ	ಸೋಮ	ಶನಿ	ಮಂಗಳ	4	11	18	25	
ಶುಕ್ರ	ಸೋಮ	ಗುರು	ಶನಿ	ಮಂಗಳ	ಭಾನು	ಬುಧ	5	12	19	26	
ಶನಿ	ಮಂಗಳ	ಶುಕ್ರ	ಭಾನು	ಬುಧ	ಸೋಮ	ಗುರು	6	13	20	27	
ಭಾನು	ಬುಧ	ಶನಿ	ಸೋಮ	ಗುರು	ಮಂಗಳ	ಶುಕ್ರ	7	14	21	28	

ರಚಿಸಿದವರು : ಮ.ಯ. ದೊಡಮನಿ, ಸದಸ್ಯರು, ಕರ್ನಾಟಕ ರಾಜ ಭಾಷಾ(ವಿಧಾಯೀ) ಆಯೋಗ, ಬೆಂಗಳೂರು - 9.

ಆಚಾರವೇ ಸ್ವರ್ಗ ಅನಾಚಾರವೇ ನರಕ
ಕಾಯಕವೇ ಕೈಲಾಸ ದಾಸೋಹವೇ ದೇವಧಾಮ
ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ ಸದುವಿನಯವೇ ಸದಾಶಿವನ ಒಲುಮೆ



ಪೂಜ್ಯರುಗಳು ಮತ್ತು ಗಣನಾಯಕಿಯರಿಂದ ಪೀಠಾರೋಹಣ ಮಾಡಿದ ಪೂಜ್ಯ ಮಾತಾಜಿಯವರಿಗೆ ಆರತಿ



ಯುವಜನ ಹಾಗು ಕ್ರೀಡಾ ಸಚಿವರಾದ ಅಲ್ಕೊಡು ಹನುಮಂತಪ್ಪ ಅವರಿಂದ ಪೀಠಾರೋಹಣದ ಉದ್ಘಾಟನ ಭಾಷಣ

CPMG/KA/BGW-50/2006-2008 WPP (W)-17 R.No.19980/70



ದಿನಾಂಕ 14-1-2007ರ ಸಮುದಾಯ ಪ್ರಾರ್ಥನೆಯ ವೇದಿಕೆ



ಧರಣಿ ಸತ್ಯಾಗ್ರಹ ಮಾಡಿದ ನಂತರ ಉಪಮುಖ್ಯಮಂತ್ರಿ
ಶ್ರೀ ಬಿ.ಎಸ್. ಯಡಿಯೂರಪ್ಪನವರಿಗೆ ಮನವಿ ನೀಡಿಕೆ